ಬಾ ಮತ್ತು ಬಾಪು 150ನೇ ವರ್ಷಾಚರಣೆ - ಪುಸ್ತಕ ಮಾಲಿಕೆ

ಒಳ್ಳೆಯ ಜೀವನ

ಮೋಹನದಾಸ್ ಕರಮಚಂದ್ ಗಾಂಧಿ



ಕನ್ನಡಾನುವಾದ : ಶಂಕರ ಪಾಟೀಲ

ಬಾ-ಬಾಪು 150ನೇ



ವರ್ಷಾಚರಣೆ ಪುಸ್ತಕ ಮಾಲಿಕೆ

ಒಳ್ಳೆಯ ಜೀವನ

ಮೋಹನದಾಸ್ ಕರಮಚಂದ್ ಗಾಂಧಿ

ಅನುವಾದಕರು

ಶ್ರೀ ಶಂಕರ ಪಾಟೀಲ

ಪ್ರಕಾಶಕರು

ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ

ಬೆಂಗಳೂರು - 560001, ದೂರವಾಣಿ : 080-22261967

ಒಳ್ಳೆಯ ಜೀವನ
ಲೇಖಕರು : ಮೋ.ಕ. ಗಾಂಧಿ
ಕನ್ನಡಾನುವಾದ : ಶಂಕರ ಪಾಟೀಲ
ಪ್ರಕಾಶಕರು : ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ
ಬೆಂಗಳೂರು – 560001
ದೂರವಾಣಿ : 080–22261967

ಮೊದಲ ಮುದ್ರಣ	:	1960
ಎರಡನೆಯ ಮುದ್ರಣ	:	2008
ಪರಿಷ್ಕೃತ 3ನೇ ಆವೃತ್ತಿ	:	2018
ಪ್ರತಿಗಳು	:	1000
ಪುಟಗಳು	:	XIV + 70
ಬೆಲೆ	:	60/–
ಮುದ್ರಕರು	:	ಕ್ರಿಯೇಟಿವ್‌ಗೀಕ್ಸ್ ಯಾಧವ ಕಾಲೇಜು ರಸ್ತೆ, ಮಾಧವನಗರ ಬೆಂಗಳೂರು – 560001 ದೂರವಾಣಿ : 080 40927049




ಅರ್ಪಣೆ

ಮಹಾತ್ಮಜೀ ಅವರ ಜೀವನ ಸಂಗಾತಿ

ಮಾತೆ ಕಸ್ತೂರ್‌ಬಾ ಗಾಂಧಿ ಅವರಿಗೆ

ಗೌರವಪೂರ್ವಕವಾಗಿ



ಮನಸ್ಸಿನಲ್ಲಿ, ಮಾತಿನಲ್ಲಿ, ಕೆಲಸದಲ್ಲಿ ಯಾರನ್ನೂ ನೋಯಿಸಬಾರದು. ಎಲ್ಲರನ್ನೂ ಪ್ರೀತಿಸುವುದು, ಎಲ್ಲರಿಗೂ ಒಳ್ಳೆಯದನ್ನು ಬಯಸುವುದೇ ಅಹಿಂಸಾ ಧರ್ಮ.

– ಮಹಾತ್ಮ ಗಾಂಧಿ

ನಿಮ್ಮೊಂದಿಗೆ

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯು ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯನ್ನು ಅರ್ಥಪೂರ್ಣವಾಗಿ ಆಚರಿಸಲು ಹಾಕಿಕೊಂಡಿರುವ ಹಲವಾರು ಕಾರ್ಯ ಯೋಜನೆಗಳಲ್ಲಿ, ಗಾಂಧೀಜಿ ಅವರ ಚಿಂತನೆಗಳು ಮತ್ತು ತತ್ವ ಸಿದ್ಧಾಂತಗಳುಳ್ಳ ಸಾಹಿತ್ಯವನ್ನು ಪ್ರಕಟಿಸುವುದು, ಪ್ರದರ್ಶಿಸುವುದು ಮತ್ತು ವಿತರಿಸುವುದೂ ಪ್ರಮುಖವಾದುದಾಗಿದೆ. ಅದರಂತೆ ಮಹಾತ್ಮಾ ಗಾಂಧಿ ಅವರ "ಒಳ್ಳೆಯ ಜೀವನ" ಕೃತಿಯನ್ನು ಪ್ರಕಟಿಸಲು ನನಗೆ ಅತ್ಯಂತ ಹರ್ಷವಾಗುತ್ತದೆ.

ಈ ಕೃತಿ ಮಹಾತ್ಮ ಗಾಂಧೀಜಿ ಅವರ ಪರಿಪೂರ್ಣ ಜೀವನದ ಸಾರಸಂಗ್ರಹದಿಂದ ಒಡಮೂಡಿದ ಚಿಂತನೆಗಳಾಗಿವೆ. ಇವು ಅವರು ಹುಟ್ಟಿದಾಗಿನಿಂದ, ಜೀವನದ ವಿವಿಧ ಹಂತಗಳಲ್ಲಿ ಗ್ರಹಿಕೆ, ಕಲಿಕೆ, ಅರ್ಥೈಸುವಿಕೆ, ಸದಾ ಪ್ರಯೋಗಿಕತೆ ಮತ್ತು ಪ್ರಾತ್ಯಕ್ಷಿಕೆಯ ನಂತರದ ಫಲಿತಗಳನ್ನು ನಮ್ಮ ಮುಂದೆ ತೆರದಿಟ್ಟಂತಿದೆ. ಅವರು ಪ್ರತಿಪಾದಿಸಿದ, ಒಳ್ಳೆಯ ಜೀವನದ ಸಪ್ತ ಸೂತ್ರಗಳನ್ನು ಸ್ವಾನುಷ್ಠಾನಗೊಳಿಸಲು ಎದುರಾಗುವ ಎಲ್ಲಾ ತೊಂದರೆಗಳನ್ನು ಸಂಕಷ್ಟಗಳನ್ನು ವ್ಯಾಮೋಹಗಳನ್ನು ಮೀರುವ ಮನಸ್ಸನ್ನು ಸಜ್ಜುಗೊಳಿಸುವ ಕ್ರಿಯೆಯನ್ನು ಪ್ರತಿ ಹಂತದಲ್ಲೂ ವಿವರಿಸಿದ್ದಾರೆ.

ಅವರು ಅಧ್ಯಾಪಕರು ಹೇಗಿರಬೇಕೆಂದು ಹೇಳುತ್ತಾ, "ಜೀವನವೆಂದರೆ ಆಕಾಂಕ್ಷೆ. ಸಿದ್ಧಿ, ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ ನಾವು ಆ ಉಚ್ಚಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ. ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ".

ಎಂದು ಮಕ್ಕಳಲ್ಲಿ ಬಾಲ್ಯದಿಂದಲೇ, ಮನಸ್ಸು ಮತ್ತು ಶರೀರವನ್ನು ಶುದ್ಧವಾಗಿಟ್ಟುಕೊಳ್ಳಲು ಶಿಕ್ಷಕರ ಪಾತ್ರವೇನೆಂಬುದನ್ನು ತಿಳಿಸಿದರು. ಹಾಗೆಯೇ, ಮಹಿಳೆಯರು ಮತ್ತು ಪುರುಷರ ಸಂಬಂಧಗಳು, ಬಾಲ್ಯವಿವಾಹ ನಿಷೇಧ, ವಿಧವಾ ವಿವಾಹಕ್ಕೆ ಪ್ರೋತ್ಸಾಹ, ಅಂತರ್ಜಾತೀಯ ವಿವಾಹಕ್ಕೆ ಬೆಂಬಲ, ಮಹಿಳಾ ಶಿಕ್ಷಣವನ್ನು ಅವರು ಸಾರ್ವಜನಿಕವಾಗಿ ಪ್ರತಿಪಾದಿಸುತ್ತ ಸರ್ಕಾರ ಅವುಗಳನ್ನು ಅನುಷ್ಠಾನಗೊಳಿಸಲು ಒತ್ತಡ ಹೇರಿರುವುದನ್ನು ನಾವು ಇಲ್ಲಿ ಗಮನಿಸಬೇಕಾಗಿದೆ.

ಗಾಂಧೀಜಿ ಅವರು ಅಂತೆಯೇ ಮದ್ಯ-ಮಾದಕ ಪದಾರ್ಥಗಳ ಸೇವನಾ ಮುಕ್ತ ಸಮಾಜದ ಆಶಯವನ್ನು ಪ್ರತಿಪಾದಿಸುತ್ತಾ ಅವುಗಳನ್ನು ದೂರವಿಡಲು ಮನುಷ್ಯನ ಪ್ರಯತ್ನಗಳು ಹೇಗೆ ಕ್ರಿಯಾಶೀಲವಾಗಿರಬೇಕೆಂದು ತಿಳಿಸುತ್ತಾರೆ.

"ಒಳ್ಳೆಯ ಜೀವನ" ಸಾಮಾಜಿಕವಾಗಿ ಪರಿವರ್ತನೆಗೆ ಸಹಕಾರಿಯಾಗುವ ಇಂಥಹ ಅಪೂರ್ವ ಕೃತಿಯನ್ನು ಪುನರ್ ಪ್ರಕಟಿಸಲು ಶ್ರಮವಹಿಸಿದ ಗೌ॥ ಕಾರ್ಯದರ್ಶಿಗಳಾದ ಶ್ರೀಮತಿ ಇಂದಿರಾ ಕೃಷ್ಣಪ್ಪ ಅವರಿಗೆ ಆತ್ಮೀಯ ನಮನಗಳು. ಗಾಂಧೀ ಭವನದ ಎಲ್ಲಾ ಸದಸ್ಯರು ಇಂಥಹ ಗಾಂಧಿ ತತ್ವ ಪ್ರಣೀತ ಕಾರ್ಯಕ್ಕೆ ಸಕಲ ಸಹಕಾರವನ್ನು ನೀಡುತ್ತಿರುವುದಕ್ಕೆ ಕೃತಜ್ಞತೆಗಳನ್ನು ತಿಳಿಸುತ್ತೇನೆ.

ಈ ಪರಿಷ್ಕೃತ ಆವೃತ್ತಿಯನ್ನು ಅಂದವಾದ ವಿನ್ಯಾಸದೊಂದಿಗೆ ಮುದ್ರಿಸಿದ ಕ್ರಿಯೇಟಿವ್ ಗೀಕ್ಸ್‌ನ ಶ್ರೀ ಮಹೇಶ್ ಮತ್ತು ತಂಡದವರಿಗೆ ಗಾಂಧೀ ಭವನದ ಪರವಾಗಿ ನಮನಗಳು ಸಲ್ಲುತ್ತವೆ.

ಡಾ. ವೂಡೇ ಪಿ. ಕೃಷ್ಣ
ಅಧ್ಯಕ್ಷರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ನಮ್ಮ ನಮ್ಮಲ್ಲಿ

ಬಾ ಮತ್ತು ಬಾಪು ಅವರ 150ನೇ ವರ್ಷಾಚರಣೆಯ ಸುಸಂದರ್ಭದಲ್ಲಿ, ಮಹಾತ್ಮಾಜೀ ಅವರ ಈ ಕೃತಿಯನ್ನು ಲೋಕಾರ್ಪಣೆ ಮಾಡಲು ಹರ್ಷವೆನಿಸುತ್ತದೆ. ಗಾಂಧೀಜಿ ಅವರ 'ಒಳ್ಳೆಯ ಜೀವನ' ಕೃತಿಯು ಮೂಲ ಆಂಗ್ಲ ಭಾಷೆಯಲ್ಲಿದ್ದು, ಅದನ್ನು ಕನ್ನಡಕ್ಕೆ ಸಮರ್ಪಕವಾಗಿ ಭಾಷಾಂತರಗೊಳಿಸಿದ ಕೀರ್ತಿ ಶ್ರೀ ಶಂಕರ ಪಾಟೀಲ ಅವರಿಗೆ ಸಲ್ಲುತ್ತದೆ.

ಮಹಾತ್ಮಾಜಿ ಅವರು ಮಾನವನು ತನ್ನ ಮನಸ್ಸನ್ನು ಹದಗೊಳಿಸುವುದು ಮತ್ತು ಒಳ್ಳೆಯ ವಿಚಾರಗಳನ್ನು ಮನದಲ್ಲಿ ತುಂಬಿಕೊಳ್ಳುವ ವಿಧಾನಗಳನ್ನು ಇಲ್ಲಿ ಚರ್ಚಿಸುತ್ತಾ ಸಾಗಿದ್ದಾರೆ. ವ್ಯಕ್ತಿ ತಾನು ಮನಸ್ಸನ್ನು ನಿರ್ಮಲಗೊಳಿಸಿಕೊಳ್ಳುತ್ತಾ ಸಮಾಜದಲ್ಲಿನ ಸ್ವಾಸ್ಥ್ಯವನ್ನು ಕಾಪಾಡುವ ಬಗೆಯನ್ನು ಇಲ್ಲಿ ಚಿತ್ರಿಸಿದ್ದಾರೆ. ಮಾನವನ ಮನಸ್ಸು ಚಂಚಲವೂ, ಅತ್ಯಾಸೆ, ಚಪಲಪೂರಕವಾಗಿದ್ದು, ಅದನ್ನು ನಿಯಂತ್ರಣದಲ್ಲಿಡಲು, "ಮಾನವೀಯತೆಯ ಕೃತಿಗಳನ್ನು ಓದಬೇಕು, ಯಾವುದಾದರೊಂದು ಗ್ರಂಥವನ್ನು ಮಾರ್ಗದರ್ಶನಕ್ಕಾಗಿ 'ಸಹಚಾರಿಯಾಗಿ' ಮಾಡಿಕೊಳ್ಳಬೇಕು, ಇಂದ್ರಿಯಗಳನ್ನು ನಿಗ್ರಹಿಸುವವನು ಆ ವಿಚಾರಗಳನ್ನು ಸಹ ಒಂದಿಲ್ಲೊಂದು ದಿನ ನಿಯಂತ್ರಿಸುವನು." ಎಂದು ಗಾಂಧೀಜಿ ಅವರು ಮನೋ ನಿಗ್ರಹದ ವಿಚಾರಗಳನ್ನು ಇಲ್ಲಿ ಪ್ರಸ್ತಾಪಿಸಿದ್ದಾರೆ. ಸತ್ಯ-ಅಹಿಂಸೆ, ಮೌನ, ಬ್ರಹ್ಮಚರ್ಯ, ಸೇವೆ ಇವುಗಳಿಂದ ಮನೋವಿಕಾಸದ ಪಾಠವನ್ನು ಹೇಳುತ್ತಾ - ಬುದ್ಧ ಗುರುವಿನ ಅನೇಕ ವಿಚಾರಗಳನ್ನು ನಮ್ಮ ಮುಂದೆ ಅನಾವರಣಗೊಳಿಸಿದ್ದಾರೆ. ಇದೊಂದು ಮನೋವೈಜ್ಞಾನಿಕ ಕೃತಿಯಾಗಿ, ಒಳ್ಳೆಯ ಜೀವನವನ್ನು ಸಾಧಿಸಿಕೊಳ್ಳುವ ಮಾರ್ಗವನ್ನು ತೋರಿಸಿಕೊಡುತ್ತಾ ಸಾಗುತ್ತದೆ.

ಈ ಕೃತಿಯನ್ನು ಮರುಮುದ್ರಣಗೊಳಿಸಿ ಪ್ರಕಟಿಸಲು ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಎಲ್ಲಾ ಸದಸ್ಯರುಗಳಿಗೂ ಕೃತಜ್ಞತೆಗಳು ಸಲ್ಲುತ್ತವೆ. ಇಂಥಹ ಅಪೂರ್ವ ಕೃತಿಗಳನ್ನು ಈ ವರ್ಷಾಚರಣೆಯಲ್ಲಿ ಪ್ರಕಟಿಸಲು ಸದಾ ಉತ್ಸುಕರಾಗಿರುವ ಗಾಂಧೀ ಭವನದ ಅಧ್ಯಕ್ಷರಾಗಿರುವ ಡಾ. ವೂಡೇ ಪಿ. ಕೃಷ್ಣ ಅವರಿಗೆ ಹೃತ್ಪೂರ್ವಕ ವಂದನೆಗಳನ್ನು ಸಲ್ಲಿಸುತ್ತೇನೆ. ಇದನ್ನು ಅಂದವಾಗಿ ಮುದ್ರಿಸಿದ ಕ್ರಿಯೇಟಿವ್‌ಗೀಕ್ಸ್‌ನ ಮಹೇಶ್ ಮತ್ತು ತಂಡಕ್ಕೆ ಆತ್ಮೀಯ ನಮನಗಳು.

ಇಂದಿರಾ ಕೃಷ್ಣಪ್ಪ
ಗೌ॥ ಕಾರ್ಯದರ್ಶಿ

ಮೊದಲ ಮಾತು

ಗಾಂಧೀಜಿ ಕುಳಿತಲ್ಲಿ ದೇವಮಂದಿರವಾಯಿತು; ನಡೆದಲ್ಲಿ ಪವಿತ್ರ ಭೂಮಿಯಾಯಿತು-ಎಂದು ಪಂಡಿತ ನೆಹರೂ ಅವರು ಹೇಳಿದರು. ಗಾಂಧೀಜಿ ಅವರ ಜೀವನ ಕಾಲದಲ್ಲಿ ಅವರ ಮಾರ್ಗದರ್ಶನದಲ್ಲಿ ಕೆಲಸವನ್ನು ಮಾಡುವ ಸೌಭಾಗ್ಯವು ಅನೇಕರಿಗೆ ಲಭಿಸಿತು. ಅವರ ವ್ಯಕ್ತಿತ್ವವು ತೋರಿದ ದಾರಿಯನ್ನು ಇಂದು ನಾವು ಅವರ ಲೇಖನಗಳ ಮೂಲಕ ಕಂಡುಕೊಳ್ಳಬೇಕಾಗಿದೆ.

ಗಾಂಧೀಜಿಯವರ ವಿಚಾರಗಳನ್ನು ಈ ರೀತಿ ಜನತೆಯ ಮುಂದಿಡುವ ದೃಷ್ಟಿಯಿಂದ ಗಾಂಧಿ ಸ್ಮಾರಕ ನಿಧಿಯವರು ಬೇರೆ ಬೇರೆ ಭಾರತೀಯ ಭಾಷೆಗಳಲ್ಲಿ ಗಾಂಧಿ ಸಾಹಿತ್ಯವನ್ನು ಭಾಷಾಂತರಿಸಿ ಪೂರೈಸುತ್ತಿದ್ದಾರೆ. ಕನ್ನಡದಲ್ಲಿ ಈಗಾಗಲೇ ಇಂಥ ಅನೇಕ ಪ್ರೌಢ ಪ್ರಕಟಣೆಗಳಾಗಿವೆ.

ಹೆಚ್ಚು ಸರಳವಾದ ಭಾಷೆಯಲ್ಲಿ ಗಾಂಧೀ ಸಾಹಿತ್ಯವನ್ನು ಒದಗಿಸುವ ದೃಷ್ಟಿಯಿಂದಲೂ, ಇಂಥ ಪ್ರಕಟಣೆಗಳು ಹಣ ಮತ್ತು ಆಕಾರಗಳ ದೃಷ್ಟಿಯಿಂದ ಹೆಚ್ಚು ಸಂಗ್ರಹಾನುಕೂಲವಾಗಿರುವಂತೆಯೂ ಇನ್ನೂ ಎರಡು ಆಕಾರಗಳಲ್ಲಿ ಗಾಂಧಿ ಸಾಹಿತ್ಯವನ್ನು ಪ್ರಕಟಿಸುವುದೆಂದು ನಿರ್ಧರಿಸಿತು.

ಈ ಪ್ರಕಟಣೆಗಳಲ್ಲಿಯ ಮೊದಲಿನ ಮಾಲಿಕೆಯಲ್ಲಿ ಹೆಚ್ಚು ಸರಳವಾದ ಪ್ರತಿಪಾದನೆಯ ಕಡೆಗೆ ಲಕ್ಷ್ಯವನ್ನು ಪೂರೈಸಿದ್ದರೆ, ಜೇಬಿನಾವೃತ್ತಿಯಲ್ಲಿ ಆ ವಿಷಯಗಳ ಬಗೆಗೆ ಗಾಂಧೀ ವಿಚಾರಸಾರವು ನೆನಪಿನಲ್ಲಿ ಉಳಿಯುವಂತೆ ಸೂತ್ರಬದ್ಧವಾಗಿ ವಿಷಯಗಳನ್ನು ಕೊಡಲಾಗಿದೆ.

ಮೊದಲಿನ ಮಾಲಿಕೆಯಲ್ಲಿ "ಮಹಿಳೆಯರು" ಎಂಬ ಪುಸ್ತಕವು ಈಗಾಗಲೇ ಪ್ರಕಟವಾಗಿದೆ.

ಶಿಕ್ಷಣ ಮತ್ತು ಇತರ ವಿಧಾಯಕ ಕಾರ್ಯಕ್ಷೇತ್ರಗಳಲ್ಲಿ ಇಂದು ಗಾಂಧೀ ವಿಚಾರದ ತಿಳಿವಳಿಕೆ ಮತ್ತು ಅನುಷ್ಠಾನದ ಅವಶ್ಯಕತೆ ಎಷ್ಟಿದ್ದೆಯೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇಂಥ ವಿಚಾರಗಳಲ್ಲಿ ಆಸಕ್ತಿಯುಳ್ಳ ಶಿಕ್ಷಣ ಸಂಸ್ಥೆಗಳು, ವಯಸ್ಕರ ಶಿಕ್ಷಣ ಸಂಸ್ಥೆಗಳು, ಹಳ್ಳಿ ಮತ್ತು ಪಟ್ಟಣಗಳಲ್ಲಿಯ ವಾಚನಾಲಯಗಳು ಮತ್ತು ವಿಧಾಯಕ ಕಾರ್ಯಕರ್ತರು ಈ ಪ್ರಕಟಣೆಗಳನ್ನು ಸ್ವಾಗತಿಸುವುದಾಗಿ ನಂಬಿದ್ದೇವೆ.

ರಾ. ಶ್ರೀ ಹುಕ್ಕೇರಿಕರ್
ಅಧ್ಯಕ್ಷರು, ಸ್ಥಾನಿಕ ಸಂಪಾದಕ ಮಂಡಳ
ವಿದ್ಯಾಗಿರಿ

ವಿದ್ಯಾಗಿರಿ
ಧಾರವಾಡ : 10-12-1959

ಪ್ರಕಾಶಕರ ಮಾತು

ಗಾಂಧೀ ತತ್ವವೆಂಬುದು ಕತ್ತಲಿನ ಸಮಾಜಕ್ಕೆ ದೀವಟಿಗೆಯಿದ್ದಂತೆ ಗಾಂಧೀಜಿಯವರ ಸತ್ಯ, ಅಹಿಂಸೆ ಮತ್ತು ಸ್ವದೇಶಿ ತತ್ವಗಳು ಬದುಕಿನ ದಾರಿಯನ್ನು ಹಸನುಗೊಳಿಸಲು ನೇಗಿಲಿದ್ದಂತೆ, ಈ ಕೃತಿಗಳು ಮೊದಲು ಮುದ್ರಣವಾದದ್ದು 1960ರ ಗಾಂಧೀ ಜಯಂತಿ ಸಂದರ್ಭದಲ್ಲಿ 5000 ಕೃತಿಗಳನ್ನು ಮುದ್ರಿಸಲಾಗಿತ್ತು. ಆ ಕೃತಿಗಳು ಮುಗಿದುಹೋಗಿರುವುದರಿಂದ ಈ ಕೃತಿಯನ್ನು ಪುನರ್‌ಮುದ್ರಣ ಮಾಡಲಾಯಿತು. ಈ ಕೃತಿಯಲ್ಲಿ ಗಾಂಧೀಜಿಯವರು ಒಳ್ಳೆಯ ಜೀವನ ಹೇಗಿರಬೇಕು, ಯಾವ ವಿಷಯಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂಬುದರ ಬಗ್ಗೆ ಯಂಗ್ ಇಂಡಿಯಾ ಪತ್ರಿಕೆಯಲ್ಲಿ ಪ್ರಕಟಿಸಿದ್ದಾರೆ. ಅವುಗಳ ಸಂಗ್ರಹವೇ ಒಳ್ಳೆಯ ಜೀವನ ಕೃತಿಯ ಹಂದರ. ಗಾಂಧೀಜಿಯವರು ಮೌನದ ಬಗ್ಗೆ, ಸದ್ಗುಣಗಳ ಬಗ್ಗೆ, ಶಕ್ತಿ ಅಧಿಕಾರಗಳ ಬಗ್ಗೆ, ಸೇವೆ, ಸುಖ ಸಂತೋಷ ಗೌರವಗಳ ಬಗ್ಗೆ ಒಳ್ಳೆಯ ಜೀವನದ ಸಪ್ತ ಸೂತ್ರಗಳ ಬಗ್ಗೆ ವಿಶದವಾಗಿ ಬರೆದಿದ್ದಾರೆ. ಅವರು ಮೌನದ ಬಗ್ಗೆ, ಮಾತು ಬೆಳ್ಳಿಯಾಗಿದ್ದರೆ ಮೌನವು ಬಂಗಾರ ಎಂದು ಕಾರ್ಲೈಲನು ಹೇಳಿದ್ದರಲ್ಲಿ ಆಶ್ಚರ್ಯವೇನು ಎಂದಿಲ್ಲವೆಂದು ಅವನ ಮಾತನ್ನು ಸಮರ್ಥಿಸಿದ್ದಾರೆ. ಅವರು ಈ ಕೃತಿಯಲ್ಲಿ ಧೂಮಪಾನ ಮತ್ತು ಚಹ, ಕಾಫಿ ಸೇವನೆಯ ಬಗ್ಗೆ ಹೇಳುತ್ತ ಇವು ಜೀವನದ ಅವಶ್ಯಕತೆಗಳಲ್ಲ. ದಿನಕ್ಕೆ ಎಂಟು ಹತ್ತು ಕಪ್ಪು ಕಾಫಿ ಕುಡಿದು ದಕ್ಕಿಸಿಕೊಳ್ಳುವ ಜನರಿದ್ದಾರೆ. ಅವರು ಅವನ್ನು ಕುಡಿಯದೇ ನಿದ್ರೆ ಹೋಗಲಿ ನಾವು ಆ ವಸ್ತುಗಳ ಗುಲಾಮರಾಗಬಾರದು ಚಹ ಕುಡಿಯುವ ಜನರಲ್ಲಿ ಬಹುಸಂಖ್ಯಾತರು ಅವರ ಗುಲಾಮರು ಮತ್ತು ಧೂಮಪಾನವು ಮಾದಕವಾದುದು, ನೀವು ಸೇದುವ ಸಿಗಾರುಗಳು ಅಫೀಮಿನಂತಿರುವವು. ಅವು ನಿಮ್ಮನ್ನು ಅಂಟಿಕೊಂಡರೆ ನೀವು ಅವನ್ನು ಬಿಡಲಾರಿರಿ ಎಂದಿದ್ದಾರೆ. ಮತ್ತು ಪಾನ ನಿರೋಧದ ಬಗ್ಗೆಯೂ ಹೇಳಿದ್ದಾರೆ. ಭಾರತದಲ್ಲಿ ಕುಡಿತವನ್ನು

ಅಗೌರವಯುತವೆಂದು ತಿಳಿಯಲಾಗಿದೆ. ಅಲ್ಲದೆ ಕೆಲವೇ ಜನರು ಕುಡಿತಕ್ಕೆ ಬಲಿಬಿದ್ದಿರುವವರು. ಹೀಗಾಗಿ ಜಗತ್ತಿನಲ್ಲಿ ಸಂಪೂರ್ಣ ಪಾನನಿರೋಧವನ್ನು ಜಾರಿಯಲ್ಲಿ ತಂದು ಯಶಸ್ವಿಗೊಳಿಸಲು ಭಾರತಕ್ಕೊಂದೇ ಸಾಧ್ಯವಿರುವುದು ಎಂದು ಯಂಗ್ ಇಂಡಿಯಾದಲ್ಲಿ ಬರೆದಿದ್ದಾರೆ. ಇಂತಹ ಕೃತಿಯು ವಿದ್ಯಾರ್ಥಿ ಯುವಜನತೆಗೆ ಉತ್ತಮ ಕೃತಿಯಾಗಬಲ್ಲದು.

ಇಂತಹ ಕೃತಿಯನ್ನು ಪ್ರಕಟಿಸಿ ಮಹಾತ್ಮರ ಅಭಿಪ್ರಾಯಗಳನ್ನು ಜನರಲ್ಲಿ ಪರಿಚಯಿಸಿದ ಸ್ಮಾರಕ ನಿಧಿಯ ಹಿಂದಿನ ಅಧ್ಯಕ್ಷರು ಹಾಗೂ ಅಂದಿನ ಪ್ರಕಟನಾ ಸಲಹಾ ಸಮಿತಿಯ ಸದಸ್ಯರೆಲ್ಲರ ಸಹಾಯವನ್ನು ನಾನು ನೆನೆಯುತ್ತೇನೆ. ಆ ಕಾರ್ಯದಲ್ಲಿ ನಮ್ಮೊಡನೆ ಸಹಕರಿಸಿದ ಕರ್ನಾಟಕ ಗಾಂಧೀ ಸ್ಮಾರಕ ನಿಧಿಯ ಕಾರ್ಯಕಾರಿ ಸಮಿತಿ ಸದಸ್ಯರಿಗೂ ಹಾಗೂ ಕರಡು ಪ್ರತಿಯನ್ನು ತಿದ್ದುಪಡಿಮಾಡಿದ ಶ್ರೀಯುತ ಅಶ್ವಥ್‌ನಾರಾಯಣ ದಂಪತಿಗಳಿಗೂ ಮತ್ತು ಈ ಕೃತಿಗೆ ಅಂದವಾದ ಮುಖಪುಟ ರಚಿಸಿಕೊಟ್ಟ ಡಾ. ಬಸವರಜ ಪಾಟೀಲ್ ಅವರಿಗೂ ಮತ್ತು ಅಂದವಾಗಿ ಸಮಯಕ್ಕೆ ಸರಿಯಾಗಿ ಮುದ್ರಿಸಿಕೊಟ್ಟ ಶ್ರೀ ಮಂಜುನಾಥ ಪ್ರಿಂಟರ್ಸ್ ಮಾಲೀಕರಾದ ಶ್ರೀ ಲೋಕೇಶ್ ಅವರಿಗೂ ಧನ್ಯವಾದಗಳು.


ಡಾ. ಹೊ. ಶ್ರೀನಿವಾಸಯ್ಯ
ಅಧ್ಯಕ್ಷರು ಮತ್ತು ಪ್ರಕಾಶಕರು
ಕರ್ನಾಟಕ ಗಾಂಧೀ ಸ್ಮಾರಕ ನಿಧಿ

ಪರಿವಿಡಿ

ಸಂಕ್ಷೇಪ ಸೂಚಿ :

ಹ=ಹರಿಜನ

ಯ.ಇ.=ಯಂಗ್ ಇಂಡಿಯಾ



"ಜೀವನವೆಂದರೆ ಆಕಾಂಕ್ಷೆ. ಚಿತ್ರ, ಸಿದ್ಧಿ,
ಆತ್ಮಸಾಕ್ಷಾತ್ಕಾರಗಳಿಗಾಗಿ ಹೆಣಗುವುದೇ ಅದರ
ಧ್ಯೇಯವಾಗಿದೆ. ನಮ್ಮ ಲೋಪದೋಷಗಳ ಮೂಲಕ
ನಾವು ಆ ಉಚ್ಚ ಧ್ಯೇಯವನ್ನು ಕೆಳಗಿಳಿಸಕೂಡದು. ಅಂಥ
ನನ್ನ ಲೋಪದೋಷಗಳ ಪೂರ್ಣ ಅರಿವು ನನಗೆ ಇದೆ.
ಅವುಗಳನ್ನು ಹೋಗಲಾಡಿಸಲು ನಾನು ಸತ್ಯದೇವತೆಯನ್ನು
ಮೂಕ ಪ್ರಾರ್ಥನೆಯಿಂದ ಆರಾಧಿಸುತ್ತಿರುವೆ".

– ಮಹಾತ್ಮ ಗಾಂಧಿ

ಮೌನ

ಆಧುನಿಕ ವಿಜ್ಞಾನಿಗಳು ವಿಚಾರದ ಸಾಮರ್ಥ್ಯವನ್ನು ಚೆನ್ನಾಗಿ ಅರಿತುಕೊಂಡಿರುವರು. ಅಂತೆಯೇ ಮಾನವನು ಯಾವ ರೀತಿ ವಿಚಾರಿಸುವನೋ ಆ ರೀತಿ ಅವನು ರೂಪುಗೊಳ್ಳುವನೆಂದು ಹೇಳಲಾಗುತ್ತಿದೆ. ಸದಾ ಕಾಲ ಕೊಲೆಯ ಬಗೆಗೆ ವಿಚಾರಿಸುವವನು ಕೊಲೆಗಾರನಾಗುವನು; ಹಾದರದ ಬಗೆಗೇ ವಿಚಾರಿಸುವವನು ವಿಷಯಲಂಪಟನಾಗುವನು. ಆದರೆ ಸತ್ಯ-ಅಹಿಂಸೆಗಳ ಬಗೆಗೆ ವಿಚಾರಿಸುವವನು ಸತ್ಯವಾದಿಯೂ ಅಹಿಂಸಾವಾದಿಯೂ ಆಗುವನು. ದೇವರಲ್ಲಿಯೇ ವಿಚಾರ ನೆಟ್ಟವನು ದೈವಿಕನಾಗುವನು.

(ಹ., 11 ಜನವರಿ 1936)

* * *

ವಿಚಾರ, ಶಬ್ದ ಮತ್ತು ಕೃತಿಗಳಲ್ಲಿ ಸಂಪೂರ್ಣ ಸಾಮರಸ್ಯವನ್ನು ಸಾಧಿಸುವುದು ನಿಮ್ಮ ಗುರಿಯಾಗಿರಲಿ. ಸದಾ ಕಾಲ ವಿಚಾರಶುದ್ಧಿಯನ್ನು ಕಾಪಾಡಿಕೊಳ್ಳುವುದು ನಿಮ್ಮ ಧ್ಯೇಯವಾಗಲಿ. ಆಗ ಎಲ್ಲವೂ ಒಳಿತಾಗುವುದು. ವಿಚಾರದಷ್ಟು ಸಮರ್ಥಶಾಲಿಯಾದುದು ಬೇರೊಂದಿಲ್ಲ. ಶಬ್ದದಿಂದ ಕೃತಿ, ವಿಚಾರದಿಂದ ಶಬ್ದ ರೂಢವಾಗುವುದು. ಪ್ರಬಲ ವಿಚಾರದ ಫಲವೇ ಶಬ್ದ. ವಿಚಾರವು ಸತ್ವಯುತವೂ, ಶುದ್ಧವೂ ಆಗಿದ್ದಲ್ಲಿ ಹಾಗೆಯೇ ಫಲವೂ ಯಾವಾಗಲೂ ಸತ್ವಯುತವೂ, ಶುದ್ಧವೂ ಆಗಿರುವುದು.

(ಹ., 24 ಏಪ್ರಿಲ್ 1937)

* * *

ಸತ್ಯವು ನನ್ನ ಜೀವನದ ಬುನಾದಿಯಾಗಿರುವುದು. ಈ ಸತ್ಯದಿಂದಲೇ ಬ್ರಹ್ಮಚರ್ಯ ಹಾಗೂ ಅಹಿಂಸೆಗಳು ಹಿಂದಿನಿಂದ ರೂಪುಗೊಂಡವು. ನೀವು ಯಾವ ಕೃತಿಯಲ್ಲಾದರೂ ನಿಮ್ಮ ಮಟ್ಟಿಗಲ್ಲದೇ ಜಗತ್ತಿನ ಮಟ್ಟಿಗೂ ಸತ್ಯವಂತರೂ ಪ್ರಾಮಾಣಿಕರೂ ಆಗಿರಬೇಕು. ನಿಮ್ಮ ವಿಚಾರಗಳನ್ನು ಬಚ್ಚಿಡಬೇಡಿರಿ. ಅವುಗಳನ್ನು ವ್ಯಕ್ತಪಡಿಸುವುದು ನಾಚಿಕೆಗೇಡಿತನವೆನಿಸುತ್ತಿದ್ದರೆ, ಹಾಗೆ ವಿಚಾರಿಸುವುದು ಇನ್ನೂ ಹೆಚ್ಚು ನಾಚಿಕೆಗೇಡಿತನವೆನಿಸುವುದು.

(ಹ., 24 ಏಪ್ರಿಲ್ 1937)

ಸತ್ಯವನ್ನು ಅರಸುವವನು ಮೌನಿಯಾಗಿರಬೇಕೆಂದು ನನಗೆ ಆಗಾಗ ಅನಿಸಿದ್ದುಂಟು. ಮೌನದ ಅದ್ಭುತ ಗುಣವನ್ನು ನಾನು ತಿಳಿದಿದ್ದೇನೆ. ದಕ್ಷಿಣ ಆಫ್ರಿಕೆಯಲ್ಲಿಯ ಟ್ರಾಪಿಸ್ಟ ಧರ್ಮಮಂದಿರವನ್ನು ಸಂದರ್ಶಿಸಿದೆ. ಅದೊಂದು ಸುಂದರ ಸ್ಥಳ. ಆ ಮಂದಿರದ ಅನೇಕ ನಿವಾಸಿಗಳು ಮೌನವ್ರತ ಪಾಲಿಸುತ್ತಿರುವರೆಂದು ನನಗೆ ತಿಳಿಯಿತು. ಆ ಮಂದಿರದ ಫಾದರರನ್ನು ಅದರ ಉದ್ದೇಶದ ಬಗೆಗೆ ನಾನು ವಿಚಾರಿಸಿದೆ. ಅವರು ಹೀಗೆ ತಿಳಿಯಪಡಿಸಿದರು: "ಉದ್ದೇಶ ಸ್ಪಷ್ಟವೇ ಇದೆ. ನಾವು ಮಾನವರು ತಪ್ಪು ಮಾಡತಕ್ಕ ಜೀವಿಗಳು. ನಾವೇನು ಮಾತನಾಡುತ್ತೇವೆಂಬುದೇ ಅನೇಕ ಸಲ ನಮಗೆ ತಿಳಿಯುವುದಿಲ್ಲ. ನಾವು ಒಂದೇಸವನೆ ಮಾತನಾಡತೊಡಗಿದರೆ ನಮ್ಮ ಅಂತರಾತ್ಮನ ಚಿಕ್ಕ ನುಡಿ ನಮಗೆ ಕೇಳಿಸುವುದಿಲ್ಲ." ಆ ಅಮೂಲ್ಯ ಪಾಠವನ್ನು ನಾನು ಅರಿತುಕೊಂಡೆನು. ಮೌನದ ರಹಸ್ಯವು ನನಗೆ ವಿದಿತವಾಯಿತು.

(ಯ.ಇ., 6 ಆಗಸ್ಟ 1925)

* * *

ಮೌನವೇ ಅರಿವಾಗುವ ಸಂದರ್ಭಗಳು ಅನೇಕವಿರುವುವು.

(ಯ.ಇ., 17 ಅಕ್ಟೋಬರ್ 1929)

* * *

ಪ್ರಾಣ ತೆರುವ ಪ್ರಸಂಗವಿದ್ದರೂ ಮನಬಿಚ್ಚಿ ಮಾತನಾಡುವಂತಹ ಕರ್ತವ್ಯದ ಸಂದರ್ಭಗಳು ಹಲವು ಇರುವಂತೆ ಜನಪ್ರಿಯತೆಯನ್ನು ಕಳೆದುಕೊಳ್ಳುವ ಪ್ರಸಂಗ ಬಂದರೂ ಮತ್ತು ಅದಕ್ಕಿಂತ ಕಠಿಣವಾದ ದಂಡನೆ ಅನುಭವಿಸಬೇಕಾಗಿ ಬಂದರೂ ನಾಗರಿಕನು ಮೌನ ತಾಳುವುದು ಹಲವಾರು ಸಂದರ್ಭಗಳಲ್ಲಿ ಅವನ ಕರ್ತವ್ಯವಾಗುವುದೆಂದು ನನಗೆ ನಂಬಿಕೆಯಿದೆ.

(ಯ.ಇ., 17 ಅಕ್ಟೋಬರ 1929)

* * *

ನಾನು ಆಧ್ಯಾತ್ಮಿಕ ಗುರಿಯಿಲ್ಲದ ಯಾವುದನ್ನು ಕೈಕೊಳ್ಳಲಾರದವನಾದುದರಿಂದ ಈ ಮೌನಕ್ಕೂ ಆಧ್ಯಾತ್ಮಿಕ ಪ್ರಯೋಜನವಿದೆಯೆಂಬುದು ಸುಸ್ಪಷ್ಟವಿರುವುದು. ಸತ್ಯವನ್ನು ನಿರಂತರವಾಗಿ ಅರಸುತ್ತಿರುವ ಜೀವಿಗಂತೂ ಮೌನವು ಅತ್ಯವಶ್ಯ. ಆದರೆ ಇಂತಹ ಮೌನವು ಅತ್ಯಂತ ಗಂಭೀರವಾದ ವ್ಯವಹಾರವಾಗಿರುವದು. ಸಂಪರ್ಕದ ಸಾಧನವಾಗಿ ಬರೆಹ ಕೂಡ ನಡೆಯಬಾರದು. ಸತ್ಯವು ಲಿಖಿತ ಶಬ್ದದ ಮೂಲಕ ವ್ಯಕ್ತವಾಗದೇ ಪ್ರತಿಯೊಂದು ಕೃತಿಯಲ್ಲಿಯೂ ವ್ಯಕ್ತವಾಗಬೇಕು.

(ಹ., 27 ಏಪ್ರಿಲ್ 1935)

* * *

ನಿಮಗೆ ಮೌನದ ಸಂದೇಶವನ್ನು ಕೊಡಬೇಕೆಂದಿರುವೆನು. ಅನುಭವವಿಲ್ಲದ ಕೃತಿಯನಾಧರಿಸಿದ ಮಾತು ವಿನಮ್ರವೂ, ಸಂಸ್ಕಾರರಹಿತವೂ ಆಗಿರುವುದು, ನೀವು ಮಾತು ನಿಲ್ಲಿಸಿ ಜನತೆಯ ಸೇವೆಯನ್ನು ದೈಹಿಕವಾಗಿ ಕೈಕೊಳ್ಳಿರೆಂದು ನಾನು ಕೇಳಿಕೊಳ್ಳುತ್ತೇನೆ. ಹೀಗೆ ಕೆಲ ವರುಷ ಸೇವೆ ಮಾಡಿದ ನಂತರ ನಿಮ್ಮ ಮಾತಿಗೆ ಮನ್ನಣೆ ದೊರೆಯುವುದು; ಅದಕ್ಕೆ ಅಪಯಶವೆಂಬುದು ಬರುವುದಿಲ್ಲ.

ಮೌನದಲ್ಲಿ ಇನ್ನೊಂದು ಗುಣವಿರುವದನ್ನು ಈ ನಾಲ್ಕು ವಾದಗಳು ನನಗೆ ಸ್ಪಷ್ಟಪಡಿಸಿರುವವು. ಸಿಟ್ಟು ಬರುವದು ಇತರರಂತೆ ನನಗೂ ಸ್ವಾಭಾವಿಕ. ಆದರೆ ನಾನು ಅದನ್ನು ಯಶಸ್ವಿಯಾಗಿ ಅದುಮಿಡಬಲ್ಲೆ. ಸಿಟ್ಟನ್ನು ಅದುಮಿಡಲು ಮೌನವು ಸಹಾಯ ನೀಡುವಷ್ಟು ಬೇರಾವುದರಿಂದಲೂ ಸಾಧ್ಯವಿಲ್ಲ. ಮೌನಿಯಾದವನು ಕೋಪವನ್ನು ಹೇಗೆ ವ್ಯಕ್ತಪಡಿಸುವುದು? ಕಣ್ಣಿನಿಂದಂತೂ ಅಲ್ಲ. ಅಹಿಂಸೆಗೆ ಬದ್ಧನಾದವನು ದೈಹಿಕ ಹಿಂಸೆಯನ್ನು ಖಂಡಿತ ತೋರಲಾರನು. ಬರೆಯುವುದರಿಂದಲೂ ಸಾಧ್ಯವಿಲ್ಲ. ಬರೆಯುವ ವಿಧಾನದಲ್ಲಿಯೇ ಸಿಟ್ಟು ಮಾಯವಾಗುವುದು.

ಮೌನದ ಅನೇಕ ಉಪಯೋಗಗಳನ್ನು ಹೇಳಬಹುದಾದರೂ ಇಲ್ಲಿ ಇಷ್ಟೇ ಸಾಕು. ಮೌನವು ಕೊನೆಗೊಳ್ಳುವುದೆಂದು ನಾನು ಎದುರುನೋಡುತ್ತಿಲ್ಲವೆಂದು ನಿಮಗೆ ಹೇಳಬಯಸುತ್ತೇನೆ. ನಾನು ಅದರ ಬಗೆಗೆ ಭೀತಿಪಡುತ್ತಲೂ ಇದ್ದೆ. ತಿಂಗಳುಗಟ್ಟಲೆ ಅಲ್ಲದಿದ್ದರೂ ಅಲ್ಪಾವಧಿಯವರೆಗೆ ಆದರೂ ಆಗಾಗ ಮೌನ ಧರಿಸಬೇಕೆಂದು ನನಗೆನಿಸುತ್ತದೆ.

"ಮಾತು ಬೆಳ್ಳಿಯಾಗಿದ್ದರೆ, ಮೌನವು ಬಂಗಾರ" ಎಂದು ಕಾರ್ಲೈಲ್‌ನು ಹೇಳಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

(ಹ., 17 ಏಪ್ರಿಲ್ 1935)

* * *

(1) ನಾನು ಮೌನ ಪಾಲಿಸಿದಾಗ ರಕ್ತದ ಒತ್ತಡವು ವಿಶೇಷತಃ ಕಡಿಮೆಯಾದುದು ಕಂಡುಬಂದಿದೆ. ಅದಕ್ಕಾಗಿ ನನ್ನ ವೈದ್ಯಕೀಯ ಮಿತ್ರರು ಸಾಧ್ಯವಿದ್ದಷ್ಟು ನಾನು ಮೌನಿಯಾಗಿರಬೇಕೆಂದು ಸಲಹೆ ಇತ್ತಿದ್ದಾರೆ.

(2) ಪ್ರತಿಯೊಂದು ಮೌನಧಾರಣೆಯ ನಂತರವೂ ನಾನು ಮೈತುಂಬಿಕೊಂಡಂತೆ ಹಾಗೂ ಕೆಲಸಕ್ಕಾಗಿ ಹೆಚ್ಚು ಶಕ್ತಿಯನ್ನು ಪಡೆದುಕೊಂಡಂತೆ ಅನಿಸುವುದು. ಮೌನಧಾರಣದ ಕಾಲದಲ್ಲಿ ಸದಾ ಕಾಲಕ್ಕಿಂತ ಹೆಚ್ಚಿನ ಕೆಲಸವಾದುದೂ ಕಂಡುಬಂದಿರುವುದು.

(3) ಮೌನದ ಸಮಯದಲ್ಲಿ ಮನಸ್ಸಿಗೆ ಶಾಂತಿ ದೊರಕುತ್ತದೆ. ಸದಾ ಕಾಲದಲ್ಲಿ ಇದು ಸಾಧ್ಯವಿಲ್ಲ. ಮೌನಧರಿಸಬೇಕೆಂಬ ನಿರ್ಣಯವೇ ನನಗೆ ಸಮಾಧಾನವುಂಟುಮಾಡುವುದು. ಮೌನದಿಂದ ನರಗಳ ಮೇಲೆ ಯಾವ ಔಷಧದಿಂದ ಆಗದಷ್ಟು ಸುಪರಿಣಾಮವಾಗುವುದೆಂದು ಅನುಭವದಿಂದ ನಾನು ಹೇಳಬಲ್ಲೆ. ನನಗೆ ಅದರಿಂದ ನಿದ್ದೆ ಸಹ ಬರುವುದು.

ಸೆರೆಮನೆಗಳಲ್ಲಿನ ಕೈದಿಗಳು ಸಂಗಾತಿಗಳಿಲ್ಲದೇ ಬಲುಮೆಯಿಂದ ಮೌನಿಗಳಾಗಬೇಕಾಗುವುದರಿಂದ ಭಾವನಾವಶರಾಗುವುದನ್ನು ನಾನು ನೋಡಿರುವೆನು. ಆದರೆ ನಮ್ಮ ಮೇಲೆ ಪರಿಣಾಮವಾಗಬೇಕಾಗಿದ್ದರೆ ಮೌನವನ್ನು ಮೆಚ್ಚಿಕೊಳ್ಳಬೇಕು. ಕೇವಲ ಅನುಕರಣೆಗಾಗಲೀ, ನಾನು ಸುಪರಿಣಾಮವುಂಟಾಗುವುದೆಂದು ಹೇಳಿದ್ದರಿಂದಾಗಿ ಯಾರೂ ಮೌನಿಯಾಗಿರಬೇಕಾಗಿಲ್ಲ. ವೈದ್ಯಕೀಯ ಸಲಹೆಯ ಮೇರೆಗೆ ಮೌನಧರಿಸುವುದು ಹೆಚ್ಚು ಲೇಸಾಗಿರುವುದು. ನಾನಿಲ್ಲಿ ಮೌನದ ಆಧ್ಯಾತ್ಮಿಕ ಅಗತ್ಯ ಹಾಗೂ ಪರಿಣಾಮಗಳ ಬಗ್ಗೆ ಉಲ್ಲೇಖಿಸುವುದಿಲ್ಲವೆಂಬುದನ್ನು ಬೇರೆ ಹೇಳಬೇಕಿಲ್ಲ.

(ಹ., 28 ಅಕ್ಟೋಬರ 1939)

ಸದ್ಗುಣ

ದೇವರು ನಿರ್ಮಿಸಿದ ಪ್ರಾಣಿಗಳಲ್ಲಿ ಮಾನವನೊಬ್ಬನೇ ತನ್ನ ಕರ್ತೃವನ್ನು ಅರಿಯಬಲ್ಲವನಾಗಿದ್ದಾನೆ. ಮಾನವನ ಜೀವನದ ಉದ್ದೇಶವು ದಿನದಿನಕ್ಕೆ ಭೌತಿಕ ಉತ್ಕರ್ಷ ಸಾಧಿಸುವುದಾಗಿರುವುದಿಲ್ಲ; ವಸ್ತು ಸಂಗ್ರಹ ಮಾಡುವುದಾಗಿರುವುದಿಲ್ಲ. ದಿನದಿನಕ್ಕೆ ತನ್ನ ಕರ್ತೃವಿನ ಸಮೀಪಕ್ಕೆ ಬರುವುದೇ ಅವನ ಪರಮ ಕಾರ್ಯವಾಗಿರುವುದು.

(ಯ.ಇ., 20 ಅಕ್ಟೋಬರ್ 1927)

* * *

ಸಚ್ಛೀಲವಂತನು ಯಾವ ಸ್ಥಾನಮಾನದಲ್ಲಿದ್ದರೂ ಅದಕ್ಕೆ ತಕ್ಕಂತೆ ನಡೆಯುವನು.

(ಯ.ಇ., 9 ಜೂನ್ 1920)

* * *

ಹಣಕ್ಕಿಂತ ಗುಣವೇ ಮುಂದಾಗುವುದೆಂಬುದರ ವಿಷಯದಲ್ಲಿ ಎರಡು ಬಗೆಯ ಅಭಿಪ್ರಾಯಗಳಿರಲಾರವು. ಬುದ್ಧಿಗಿಂತ ಹೃದಯವೇ ಮುನ್ನಡೆಸುವುದೆಂಬುದು ಇಷ್ಟೇ ಸತ್ಯವಾದುದು. ನಿರ್ಣಾಯಕ ಕ್ಷಣದಲ್ಲಿ ತಿಳಿವಿಗಿಂತ ಶೀಲವೇ ಹೆಚ್ಚು ಗಣನೀಯವೆನಿಸುವುದು.

(ಯ.ಇ., 19 ಸೆಪ್ಟೆಂಬರ್ 1921)

* * *

ಚಾರಿತ್ರ್ಯಶುದ್ಧಿ ಹಾಗೂ ಮುಕ್ತಿ ಹೃದಯಶುದ್ಧಿಯನ್ನು ಅವಲಂಬಿಸಿರುವವು.

(ಗುಡ್ ಲೈಫ್)

* * *

ಮಾತಿಗಿಂತ ಶೀಲವೇ ಯಾವ ಕಾಲಕ್ಕೂ ಹೆಚ್ಚು ವಾಕ್ಚತುರವೆನಿಸುವುದು.

(ಗುಡ್ ಲೈಫ್)

ನಿಮ್ಮ ಎಲ್ಲ ಜ್ಞಾನ, ವಿದ್ಯೆ ಹಾಗೂ ವಿದ್ವತ್ತುಗಳನ್ನು ಒಂದು ಪರಡೆಯಲ್ಲಿ ಹಾಕಿರಿ. ಸತ್ಯ ಹಾಗೂ ಶುದ್ಧಿಗಳನ್ನು ಇನ್ನೊಂದರಲ್ಲಿ ಹಾಕಿರಿ. ಈ ಎರಡನೆಯ ಪರಡಿಯೇ ಹೆಚ್ಚು ತೂಗುವುದು. ನಮ್ಮ ಶಾಲಾ ಮಕ್ಕಳಲ್ಲಿ ಇಂದು ನೈತಿಕ ಅಧಃಪತನವು ಒಂದು ಸಾಂಕ್ರಾಮಿಕ ರೋಗದಂತೆ ಹರಡಿ ದುಷ್ಪರಿಣಾಮವುಂಟು ಮಾಡುತ್ತಿರುವುದು. ಅದಕ್ಕಾಗಿ ಬಾಲ ಬಾಲೆಯರು ತಮ್ಮ ಮನಸ್ಸು ಹಾಗೂ ಶರೀರಗಳನ್ನು ಶುದ್ಧವಾಗಿಟ್ಟುಕೊಳ್ಳಬೇಕೆಂದು ನಾನು ಕೇಳಿಕೊಳ್ಳುವೆನು. ನಿಮ್ಮ ವಿದ್ವತ್ತು ಹಾಗೂ ಧರ್ಮಗ್ರಂಥಗಳ ಅಭ್ಯಾಸ, ಅವುಗಳಲ್ಲಿಯ ನೀತಿ-ಬೋಧೆಯನ್ನು ದೈವಿಕ ಜೀವನದಲ್ಲಿ ಕಾರ್ಯ ರೂಪದಲ್ಲಿ ತರದಿದ್ದರೆ ನಿರರ್ಥಕವೆನಿಸುವುದು. ಕೆಲ ಶಿಕ್ಷಕರು ಕೂಡ ಶುದ್ಧವಾದ ಮತ್ತು ನಿಷ್ಕಲಂಕವಾದ ಜೀವನವನ್ನು ನಡೆಸುತ್ತಿಲ್ಲವೆಂಬುದನ್ನು ತಮ್ಮ ವಿದ್ಯಾರ್ಥಿಗಳಿಗೆ ಬೋಧಿಸಿ ಅವರಿಗೆ ಸತ್ಯ ಹಾಗೂ ಶುದ್ಧಿಗಳ ಬಗೆಗೆ ಮನಸ್ಸಿಗೆ ನೆಡುವಂತೆ ಹೇಳದೇ ಹೋದರೆ ವಿದ್ಯಾರ್ಥಿಗಳನ್ನು ಅವರು ವಂಚಿಸಿದಂತಾಗುವುದು; ಅವರು ತಮ್ಮ ವಿದ್ಯಾರ್ಥಿಗಳನ್ನು ಮೇಲಕ್ಕೆತ್ತದೇ ವಿನಾಶದ ಹಾದಿಗೆ ನೂಕುವರೆಂದು ನಾನು ಹೇಳಬಯಸುವೆ. ಚಾರಿತ್ರ್ಯರಹಿತ ಜ್ಞಾನವು ಜಗತ್ತಿನಲ್ಲಿಯ ಅನೇಕ 'ಬುದ್ಧಿವಂತ ಕಳ್ಳ' ಹಾಗೂ 'ಸಂಭಾವಿತ ಧೂರ್ತ'ರ ಉದಾಹರಣೆಗಳಲ್ಲಿಯಂತೆ ದುಷ್ಟಶಕ್ತಿಗಳಿಗೆ ದೊರೆತ ಅಧಿಕಾರವೆಂದೆನಿಸುವುದು.

(ಯ.ಇ., 21 ಫೆಬ್ರವರಿ 1929)

* * *

ಸ್ತ್ರೀ-ಪುರುಷರ ಅಸಹಾಯಕತೆಯ ಮೇಲೆ ಅವಲಂಬಿಸಿದ ನೀತಿ ಮತ್ತೆ ಉದಾತ್ತವಾದುದಲ್ಲ. ನೀತಿಮತ್ತೆಯು ಹೃದಯಶುದ್ಧಿಯಿಂದ ಹೊರಹೊಮ್ಮುವುದು.

(ಹ., 8. ಜೂನ 1940)

* * *

ಶಿಸ್ತಿಗೆ ಮೇಲು ಕೀಳೆಂಬುದಿಲ್ಲ. ಅದರ ಬೆಲೆಯನ್ನು ಅರಿತ ರಾಜನು ಏಕಮಾತ್ರ ನ್ಯಾಯಾಧೀಶನೆಂದು ನೇಮಿಸಿದ ತನ್ನ ಪ್ರಜೆಗೂ ತಲೆಬಾಗುವನು.

(ಯ.ಇ., 4 ಡಿಸೆಂಬರ್ 1925)

* * *

ನಿಜವಾದ ಸೈನಿಕ ಮುಂದೆ ಸಾಗುತ್ತಿರುವಂತೆ ಯಶವನ್ನು ಕೊನೆಗೆ ೇಗೆ ಸಾಧಿಸಲಾಗುವುದೆಂಬ ಬಗ್ಗೆ ವಾದಿಸುವುದಿಲ್ಲ. ಆದರೆ ತನ್ನ ಚಿಕ್ಕದೇ ದ ಪಾತ್ರವನ್ನು ಸರಿಯಾಗಿ ನಿರ್ವಹಿಸಿದರೆ ಒಂದಿಲ್ಲೊಂದು ರೀತಿಯಿಂದ ಯ ಕಟ್ಟಿಟ್ಟದ್ದು ಎಂದು ಅವನಿಗೆ ಭರವಸೆ ಇರುತ್ತದೆ. ಪ್ರತಿಯೊಬ್ಬರೂ ಬಗೆಯ ಮನೋವೃತ್ತಿಯಿಂದಲೇ ಕಾರ್ಯಪ್ರವೃತ್ತರಾಗಬೇಕು. ಭವಿಷ್ಯವನ್ನು ಳಿದುಕೊಳ್ಳುವುದು ನಮ್ಮ ಅಧೀನದಲ್ಲಿಲ್ಲ. ಆದರೆ ನಮ್ಮ ನಮ್ಮ ಪಾತ್ರವನ್ನು ೇಗೆ ಯಶಸ್ವಿಯಾಗಿ ನಿರ್ವಹಿಸಬೇಕೆಂಬುದು ನಮಗೆ ಸೇರಿದ್ದಾಗಿರುವುದು. ಾವು ಮನಸ್ಸು ಮಾಡಿದರೆ ಸಾಧ್ಯವಿದೆಯೆಂಬುದನ್ನು ನಾವು ಕೈಕೊಳ್ಳೋಣ.

(ದಿ ಗುಡ್ ಲೈಫ್)

* * *

ಬಲುಮೆಯಿಂದ ನಾವು ಶಿಸ್ತನ್ನು ಕಲಿಯಲಾರೆವು.

(ದಿ ಗುಡ್ ಲೈಫ್)

* * *

ಅಪಕ್ವ ವಿಚಾರಗಳು ಪಚನವಾಗದ ಆಹಾರಕ್ಕಿಂತಲೂ ಹೆಚ್ಚು ಾನಿಕರವಾಗಿರುವವು. ಆಹಾರ ಪಚನವಾಗದೇ ದೇಹಕ್ಕೆ ತೊಂದರೆಯಾದರೆ ದನ್ನು ನಿವಾರಿಸಬಹುದಾಗಿದೆ. ಆದರೆ ಅಪಕ್ವ ತಂತ್ರಗಳಿಂತ ಆತ್ಮದ ೇಲಾಗುವ ಘಾತುಕ ಪರಿಣಾಮವನ್ನು ನಿವಾರಿಸಲು ಮಾರ್ಗವೇ ಇರುವುದಿಲ್ಲ.

(ಯ.ಇ., 1 ಮೇ 1937)

* * *

ಸಹನೆ ಕಳೆದುಕೊಂಡರೆ ಎಲ್ಲವೂ ಕೈ ಬಿಟ್ಟಂತೆಯೇ, ಸಹನೆ ೆಚ್ಚಿದಷ್ಟು–ವೇದನೆಗೆ ಇನ್ನೊಂದು ಹೆಸರು–ನಮ್ಮ ಬಲವೂ ಹೆಚ್ಚುವುದು.

(ಯ.ಇ., 19 ಜುಲೈ 1931)

* * *

ಕರ್ತವ್ಯವನ್ನು ಸರಿಯಾಗಿ ನಿರ್ವಹಿಸಿದವನಿಗೆ ಹಕ್ಕುಗಳು ತಾವಾಗಿಯೇ ಪ್ರಾಪ್ತವಾಗುವವು. ಕರ್ತವ್ಯವನ್ನು ಸರಿಯಾಗಿ ನಿರ್ಹಿಸಲು ಇರುವ ಹಕ್ಕು ನಿಜವಾಗಿ ಉದಾತ್ತವಾದುದಾಗಿದೆ. ಅದಕ್ಕಾಗಿ ಜೀವಿಸಲೂಬಹುದು, ಸಾಯಲೂಬಹುದು. ಅದು ನ್ಯಾಯವಾದ ಹಕ್ಕುಗಳನ್ನೆಲ್ಲ ಒಳಗೊಂಡಿರುವುದು. ಉಳಿದವು ಒಂದಿಲ್ಲೊಂದು ರೂಪದಲ್ಲಿರುವ ಹಿಡಿತಗಳಾಗಿರುವವು ಮತ್ತು ಹಿಂಸೆಯ ಅಂಶಗಳಿರುವವು.

(ದಿ ಗುಡ್ ಲೈಫ್)

* * *

ಶ್ರದ್ಧೆ ಹಾಗೂ ದೃಢನಿರ್ಧಾರಗಳಿರುವ ಮನುಷ್ಯನು ಖಿನ್ನನಾಗಲು ಕಾರಣವೇನೂ ಇಲ್ಲ. ಅಂಥ ವಿಶ್ವಾಸ ಹಾಗೂ ಅಂಥ ಉತ್ಸಾಹಗಳಿಂದ ಮನುಷ್ಯನು ಶಾಶ್ವತ ಒಳಿತಿನ ಮಾರ್ಗವನ್ನು ಕ್ರಮಿಸಲಾರನು. ಶ್ರದ್ಧೆಯೇ ಬಿರುಗಾಳಿಯ ಸಾಗರದಿಂದ ನಮ್ಮನ್ನು ದಾಟಿಸುವುದು. ಶ್ರದ್ಧೆಯೇ ಪರ್ವತಗಳನ್ನು ಚಲಿಸುವುದು, ಸಾಗರಗಳನ್ನು ದಾಟಹಚ್ಚುವುದು. ಅಂತರಂಗದಲ್ಲಿ ಸದೈವ ಜಾಗ್ರತವಾಗಿರುವ ದೈವೀಚೇತನೆಯೇ ಶ್ರದ್ಧೆಯು. ಈ ಬಗೆಯ ಶ್ರದ್ಧೆಯನ್ನು ಸಾಧಿಸಿದವನು ಬೇರೇನನ್ನು ಬಯಸನು. ಪರರಲ್ಲಿ ಶ್ರದ್ಧೆಯುಂಟು ಮಾಡುವ ಮೊದಲು ಅವನ ಶ್ರದ್ಧೆ ಅಂತರಂಗದಿಂದ ಬರಬೇಕಲ್ಲದೇ ಯಾರಿಗೂ ಅದನ್ನು ಕೊಡುವುದೆಂಬುದು ಸಾಧ್ಯವಿಲ್ಲ.

(ದಿ ಗುಡ್ ಲೈಫ್)

* * *

ಧೂಮ್ರಪಾನ ಮತ್ತು ಕಾಫಿ-ಚಹಗಳ ಸೇವನೆಯ ಬಗೆಗೆ ಈಗ ಕೆಲ ಮಾತು ಹೇಳುವೆ. ಅವು ಜೀವನದ ಅವಶ್ಯಕತೆಗಳಲ್ಲ. ದಿನಕ್ಕೆ ಎಂಟು ಹತ್ತು ಕಪ್ಪು ಕಾಫಿ ಕುಡಿದು ದಕ್ಕಿಸಿಕೊಳ್ಳುವ ಜನರಿದ್ದಾರೆ. ಇದು ಅವರ ಆರೋಗ್ಯವೃದ್ಧಿ ಹಾಗೂ ಕರ್ತವ್ಯ ನಿರ್ವಹಣೆಗಾಗಿ ಅವರನ್ನು ಜಾಗ್ರತರಾಗಿಡಲು ಅವಶ್ಯವಿರುವುದೆ? ಜಾಗ್ರತವಾಗಿರಲು ಚಹ-ಕಾಫಿ ತೆಗೆದುಕೊಳ್ಳುವುದು ಅವಶ್ಯವೆನಿಸಿದರೆ ಅವರು ಅವನ್ನು ಕುಡಿಯದೇ ನಿದ್ರೆಹೋಗಲಿ. ನಾವು ಈ ವಸ್ತುಗಳ ಗುಲಾಮರಾಗಬಾರದು. ಆದರೆ ಚಹ-ಕಾಫಿ ಕುಡಿಯುವ ಜನರಲ್ಲಿ ಬಹುಸಂಖ್ಯಾಕರು ಅವುಗಳ ಗುಲಾಮರಾಗಿದ್ದಾರೆ. ವಿದೇಶಿಯವಿರಲಿ, ದೇಶೀಯವಿರಲಿ ಸಿಗಾರು ಮತ್ತು ಸಿಗರೇಟು ಸೇದುವುದನ್ನು ಬಿಟ್ಟುಬಿಡಬೇಕು. ಧೂಮ್ರಪಾನವು ಮಾದಕವಾಗಿದ್ದು ನೀವು ಸೇದುವ

ಸಿಗಾರುಗಳೆಲ್ಲ ಅಫೀಮಿನಂತಿರುವವು. ಅವು ನಿಮಗೊಮ್ಮೆ ಅಂಟಿಕೊಂಡರೆ ನೀವು ಮುಂದೆ, ಅವನ್ನೆಂದೂ ಬಿಡಲಾರಿರಿ. ನಿಮ್ಮ ಬಾಯಿಯನ್ನು ಚಿಮಣಿಯಾಗಿ ಮಾಡಿ ಕೊಳಕು ಬಾಯಿ ಮಾಡಿಕೊಳ್ಳುವಿರಾ? ಸಿಗಾರು ಸಿಗರೇಟುಗಳನ್ನು ಸೇದುವ, ಚಹ ಕಾಫಿ ಕುಡಿಯುವ ಈ ಚಟಗಳನ್ನು ನೀವು ಬಿಟ್ಟಲ್ಲಿ ನೀವೆಷ್ಟು ಉಳಿಸಬಲ್ಲಿರೆಂಬುದು ನಿಮಗೆ ಗೊತ್ತಾಗದಿರದು. ಟಾಲಸ್ಟಾಯರ ಕಥೆಯಲ್ಲಿಯ ಕುಡುಕನು ಸಿಗಾರು ಸೇದದಿರುವವರೆಗೆ ಕೊಲೆ ಮಾಡುವ ಕಾರ್ಯವನ್ನು ನೆರವೇರಿಸಲು ಹಿಂದೆ-ಮುಂದೆ ನೋಡುತ್ತಿರುವನು. ಅವನು ಅದನ್ನು ಸೇದಿದ ಕೂಡಲೇ ಮುಗುಳ್ನಗುತ್ತ ನಾನೆಂತಹ ಹೇಡಿ ಎಂದೆನ್ನುತ್ತ ಕಠಾರಿ ತೆಗೆದುಕೊಂಡು ಕೊಲೆಯನ್ನು ಮಾಡುವನು. ಟಾಲಸ್ಟಾಯರ ಅನುಭವವಾಣಿಯಿದು. ಅವರು ವೈಯಕ್ತಿಕ ಅನುಭವವಿಲ್ಲದೇ ಏನನ್ನೂ ಬರೆದಿಲ್ಲ. ಅವರು ಕುಡಿತಕ್ಕಿಂತ ಸಿಗಾರು-ಸಿಗರೇಟುಗಳಿಗೆ ಹೆಚ್ಚು ವಿರೋಧಿಯಾಗಿದ್ದರು. ಆದರೆ ಕುಡಿತ ಹಾಗೂ ತಂಬಾಕುಗಳಲ್ಲಿ ಕುಡಿತ ಕಡಿಮೆ ಅನಿಷ್ಟವೆಂದು ತಪ್ಪು ತಿಳುವಳಿಕೆಯನ್ನು ಮಾತ್ರ ನೀವು ಮಾಡಿಕೊಳ್ಳಬೇಡಿರಿ. ಸಿಗರೇಟು ಬೀಲ್ಝಬಬ್ (ದೆವ್ವಗಳ ಯುವರಾಜ) ಆಗಿದ್ದರೆ ಕುಡಿತವು ಸೈತಾನವಾಗಿರುವುದು.

(ಯು.ಇ., 15 ಸೆಪ್ಟೆಂಬರ್ 1927)

* * *

ಧೂಮ್ರಪಾನ ಮಾಡುವ ಪ್ರತಿಯೊಬ್ಬನೂ ಈ ಹೊಲಸು ಚಟವನ್ನು ನಿಲ್ಲಿಸಿ ತನ್ನ ಬಾಯಿಯು ಚಿಮಣಿಯಾಗುವದನ್ನು ತೊರೆದು, ಉಸಿರು ಹೊಲಸಾಗದಂತೆ ಮಾಡಿ, ಹಲ್ಲಿಗೆ ಹಾನಿಯಾಗದಂತೆ ನೋಡಿಕೊಂಡು, ವಿವೇಚನಾಶಕ್ತಿಯು ಮಂದವಾಗದಂತೆ ತನ್ನ ಉಳಿತಾಯವನ್ನು ರಾಷ್ಟ್ರೀಯ ಕಾರ್ಯಕ್ಕಾಗಿ ಉಪಯೋಗಿಸಿದರೆ ತನಗೂ ರಾಷ್ಟ್ರಕ್ಕೂ ಅವನು ಪ್ರಯೋಜನವನ್ನು ಮಾಡಿಕೊಂಡಂತಾಗುವುದು.

(ಯು.ಇ., 15 ಸೆಪ್ಟೆಂಬರ್ 1927)

* * *

ಔಷಧ ಹಾಗೂ ಕುಡಿತ ಇವು ಭೂತದ ಎರಡು ಕೈಗಳಂತಿದ್ದು ಇವುಗಳಿಂದಲೇ ತನ್ನ ಅಸಹಾಯ ಗುಲಾಮರನ್ನು ಮೋಹದಲ್ಲಿ ಕೆಡವಿ ಮತ್ತರಾಗಿ ಮಾಡುವುದು.

(ಯು.ಇ., 8 ಆಗಸ್ಟ್ 1929)

ಭಾರತದಲ್ಲಿ ಕುಡಿತವನ್ನು ಅಗೌರವಯುತವೆಂದು ತಿಳಿಯಲಾಗುತ್ತಿದ್ದು ಅದೊಂದು ಫ್ಯಾಶನ್ನು ಆಗಿರುವುದಿಲ್ಲ. ಅಲ್ಲದೇ ಕೆಲವೇ ವರ್ಗದ ಜನರು ಕುಡಿತಕ್ಕೆ ಬಲಿಬಿದ್ದಿರುವರು. ಹೀಗಾಗಿ ಜಗತ್ತಿನಲ್ಲಿ ಸಂಪೂರ್ಣ ಪಾನಪ್ರತಿಬಂಧವನ್ನು ಜಾರಿಯಲ್ಲಿ ತಂದು ಯಶಸ್ವಿಗೊಳಿಸಲು ಭಾರತಕ್ಕೊಂದೇ ಸಾಧ್ಯವಿರುವುದು.

(ಯು.ಇ., 23 ಜೂನ್ 1927)

* * *

ಕಳವನ್ನು ನಿರ್ಬಂಧಿಸುವುದು ಕಳವು ಮಾಡುವ ಹಕ್ಕಿನಲ್ಲಿ ಕೈಹಾಕಿದಂತಾಗುವುದೆಂಬ ವಾದದಲ್ಲಿ ಹೇಗೆ ಹುರುಳು ಇಲ್ಲವೋ ಹಾಗೆಯೇ ಕುಡಿತವನ್ನು ಪ್ರತಿಬಂಧಿಸುವುದರಿಂದ ಅವರ ಹಕ್ಕಿನಲ್ಲಿ ಕೈಹಾಕಿದಂತಾಗುವುದೆಂಬ ವಾದವೂ ಹುರುಳಿಲ್ಲದ್ದಾಗುವಿದು. ಕಳ್ಳನು ಭೌತಿಕ ವಸ್ತುಗಳನ್ನು ಕಳವುಮಾಡುತ್ತಿದ್ದರೆ ಕುಡುಕನು ತನ್ನ ಹಾಗೂ ನೆರೆಹೊರೆಯವರ ಗೌರವವನ್ನು ಕದಿಯುವನು.

(ಯು.ಇ., 6 ಜನೇವರಿ 1927)

ಹಸಿವೆಯಿಂದ ಕಂಗಲಾದ ಸ್ತ್ರೀ ಪುರುಷರು ಚಿಕ್ಕಪುಟ್ಟ ಕಳವು ಮಾಡಿ ಅದಕ್ಕಾಗಿ ದಂಡನೆಗೊಳಗಾಗುತ್ತಿರುವರು. ಭಾರತದಲ್ಲಿ ಮಾದಕ ಪಾನೀಯಗಳನ್ನು ಸೇವಿಸುವವರು ಇವರಿಗಿಂತ ಹೆಚ್ಚಿನ ಅಪರಾಧಿಗಳೆಂದು ನನ್ನ ಮತ. ನನಗೆ ಮನಸ್ಸಿಲ್ಲದಿದ್ದರೂ ಸಾಮಾನ್ಯ ಪೀನಲ್ ಕೋಡ ಪದ್ಧತಿಯೊಂದನ್ನು ನಾನು ಒಪ್ಪುವೆ; ಪ್ರೇಮದ ಕಾಯ್ದೆಯನ್ನು ಸಂಪೂರ್ಣ ಪ್ರಯೋಗಿಸುವುದು ಅಸಾಧ್ಯವಾಗಿ ಉಂಟಾಗಿರುವ ಅಸಹಾಯಕತೆಯಿಂದಾಗಿ ಈ ಮಾದಕ ಪೇಯವನ್ನು ಉತ್ಪಾದಿಸುವವರಿಗೆ ಮತ್ತು ಅನೇಕ ಸಲ ಎಚ್ಚರಿಕೆ ಕೊಟ್ಟರೂ ಕುಡಿತವನ್ನು ಬಿಡದವರಿಗೆ ವಿಲಂಬವಿಲ್ಲದೇ ತಾತ್ಕಾಲಿಕ ವಿಚಾರಣೆ ನಡೆಸಿ ದಂಡನೆ ವಿಧಿಸಬೇಕು. ಬೆಂಕಿ ಇಲ್ಲವೇ ಆಳವಾದ ಜಲಾಶಯಕ್ಕೆ ಧಾವಿಸುವ ನನ್ನ ಮಕ್ಕಳನ್ನು ಬಲುಮೆಯಿಂದಲಾದರೂ ತಡೆಯಲು ನಾನು ಹಿಂದೆ-ಮುಂದೆ ನೋಡುವದಿಲ್ಲ. ಬೆಂಕಿಯಿರುವ ಕುಲುಮೆ ಇಲ್ಲವೇ ಮಹಾಪೂರಕ್ಕೆ ಧಾವಿಸುವುದಕ್ಕಿಂತ ಕುಡಿತಕ್ಕೆ ಧಾವಿಸುವುದು ಹೆಚ್ಚು ಗಂಡಾಂತರಕಾರಿಯಾಗಿರುವುದು. ಮೊದಲನೆಯದರಿಂದ ಕೇವಲ ದೇಹ ನಾಶವಾದರೆ ಎರಡನೆಯದರಿಂದ ದೇಹ-ಆತ್ಮಗಳೆರಡೂ ನಾಶಹೊಂದುವವು.

(ಯು.ಇ., 8 ಆಗಸ್ಟ್ 1929)

ಸಿಟ್ಟು ಹುಚ್ಚಿಗಿಂತ ಕಡಿಮೆಯಾದುದಲ್ಲ. ಈ ತಾತ್ಪೂರ್ತಿಕ ಹುಚ್ಚಿನಿಂದಲೇ ಅನೇಕ ಉದಾತ್ತ ಕಾರ್ಯಗಳು ಹಾಳಾಗಿರುವವು.

(ಯು.ಇ., 12 ಜೂನ್ 1928)

* * *

ಸಿಟ್ಟನ್ನು 'ಅಕೋಪ'ದಿಂದ ಗೆಲ್ಲಬೇಕೆಂದು ಬುದ್ಧನು ಹೇಳುತ್ತಾನೆ. ಆದರೆ ಈ ಅಕೋಪ ಯಾವುದು? ಇದೊಂದು ಸುಗುಣವಾಗಿದ್ದು ದಯೆ ಇಲ್ಲವೆ ಪ್ರೀತಿಯೆಂಬ ಸದ್ಗುಣವೆನಿಸಿರುವುದು. ನೀವು ಈ ಸದ್ಗುಣಗಳಿಂದ ಪ್ರೇರಿತರಾಗಿ ಕೋಪಗೊಂಡ ಮನುಷ್ಯನ ಬಳಿಗೆ ಹೋಗಿ, ಅವನ ಕೋಪದ ಕಾರಣ ವಿಚಾರಿಸಿ, ನೀವೇನಾದರೂ ಅದಕ್ಕೆ ಕಾರಣರಾಗಿದ್ದೀರಾ ಎಂಬುದನ್ನು ತಿಳಿದುಕೊಂಡು ಅವನ ತಪ್ಪನ್ನು ಮನಗಾಣಿಸಿಕೊಟ್ಟು ಉದ್ರೇಕಗೊಳ್ಳುವುದು ತಪ್ಪೆಂಬುದನ್ನು ಅವನು ಅರಿಯುವಂತೆ ಮಾಡಬೇಕು. ಆತ್ಮದಲ್ಲಿಯ ಈ ಗುಣದ ಅರಿವು ಮತ್ತು ಅದರ ಅವಶ್ಯಕ ಉಪಯೋಗ ಮಾನವನನ್ನು ಉನ್ನತಮಟ್ಟಕ್ಕೆ ಎತ್ತರಿಸುವುದು, ಅಲ್ಲದೇ ಸುತ್ತಮುತ್ತಲಿನ ವಾತಾವರಣವೂ ಉನ್ನತಗೊಳ್ಳುವುದು. ಈ ಬಗೆಯ ಪ್ರೀತಿಯಿರುವವನೇ ಇದನ್ನು ಉಪಯೋಗಿಸುವನು. ಅವಿರತ ಸಾಧನೆಯಿಂದ ಮಾತ್ರವೇ ಇದನ್ನು ರೂಢಿಸಿಕೊಳ್ಳಬಹುದು.

(ಯು.ಇ., 12 ಜೂನ್ 1928)

* * *

ನ್ಯಾಯದ ಸಾಲಗಳನ್ನು ತೀರಿಸುವದು ಕರ್ತವ್ಯವಾಗಿರುವಂತೆ ವಿಷಯದಾಹವನ್ನು ತೃಪ್ತಿಗೊಳಿಸುವುದೂ ಒಂದು ಕರ್ತವ್ಯವಾಗಿದೆ: ಹೀಗೆ ತೃಪ್ತಿಗೊಳಿಸದಿರುವುದರಿಂದ ಬೌದ್ಧಿಕ ಅವನತಿಗಿಳಿಸುವುದೆಂದು ಬಾರಿಬಾರಿಗೂ ಹೇಳಲಾಗುತ್ತಿದೆ. ಈ ವಿಷಯದಾಹವನ್ನು ಸಂತಾನೇಚ್ಛೆಯಿಂದ ಬೇರ್ಪಡಿಸಲಾಗಿದೆ. ಗರ್ಭನಿರೋಧಕಗಳ ಉಪಯೋಗದ ಪ್ರತಿಪಾದಕರು ಗರ್ಭಧಾರಣೆ ಒಂದು ಆಕಸ್ಮಿಕ. ಮಕ್ಕಳಾಗಬೇಕೆಂದು ಇಚ್ಛಿಸಿದಾಗಿನ ಪ್ರಸಂಗಗಳ ಹೊರತಾಗಿ ಅದನ್ನು ಪ್ರತಿಬಂಧಿಸಬೇಕೆಂದು ಹೇಳುತ್ತಾರೆ.

ಆದರೆ ಇದು ಅತ್ಯಂತ ಘಾತುಕ ಪ್ರಣಾಲಿಯಾಗಿದ್ದು, ಎಲ್ಲಿಯೇ ಇರಲಿ ಅದರಲ್ಲಿ ಭಾರತದಲ್ಲಿ ಮಧ್ಯಮ ವರ್ಗದ ಗಂಡು ಸಂತತಿಯು ಸೃಷ್ಟಿ ಕಾರ್ಯದ ದುರುಪಯೋಗದಿಂದಾಗಿ ದುರ್ಬಲವಾಗಿರುವುದರಿಂದ ಇದನ್ನು ಬೋಧಿಸುವುದು ತರವಲ್ಲವೆಂದು ಹೇಳುವ ಸಾಹಸವನ್ನು ನಾನು ಮಾಡುತ್ತೇನೆ.

(ಹ., 28 ಮಾರ್ಚ್ 1936)

* * *

ಆತ್ಮತೃಪ್ತಿಯೇ ಧರ್ಮವೆಂದು ಭಾವಿಸದೇ ಸಾಮಾನ್ಯ ಪರಿಸ್ಥಿತಿಯಲ್ಲಿ ನಮ್ಮ ಸ್ವಾಭಾವಿಕ ಸ್ಥಿತಿಯಾದ ಆತ್ಮನಿಗ್ರಹವನ್ನು ಮರಳಿ ಗಳಿಸಲು ಅವಿರತವಾಗಿ ಶ್ರಮಿಸುತ್ತಿರುವವರಿಗೆ ಈ ಕೆಲ ಅಂಶಗಳಿಂದ ಸಹಾಯವಾಗುವುದು. ಅವರಿಗೆ ಈ ಕೆಲ ಆದೇಶಗಳು ಮಾರ್ಗ ದರ್ಶನಕ್ಕೆ ಅಗತ್ಯವೆನಿಸಬಹುದು.

(1) ನೀವು ವಿವಾಹಿತರಿದ್ದರೆ ನಿಮ್ಮ ಪತ್ನಿ ಕಾಮತೃಪ್ತಿಯ ಸಾಧನವಾಗಿರದೇ ಸ್ನೇಹಿತೆ, ಸಹಚಾರಿಣಿ ಮತ್ತು ಸಹೋದ್ಯೋಗಿಯಾಗಿರುವಳೆಂದು ಭಾವಿಸಬೇಕು.

(2) ಆತ್ಮನಿಗ್ರಹವೇ ನಿಮ್ಮ ಕಟ್ಟುಪಾಡಾಗಬೇಕು. ಉಭಯತ್ರರೂ ಇಷ್ಟಪಟ್ಟಾಗ ಸಂಭೋಗ ಕೈಕೊಳ್ಳಬಹುದು. ಮತ್ತು ಅದು ಮೊದಲಿಗೆ ಒಪ್ಪಿಕೊಂಡ ನಿಯಮಗಳಿಗನುಸಾರವಿರಬೇಕು.

(3) ನೀವು ಅವಿವಾಹಿತರಿದ್ದರೆ ನಿಮಗಾಗಿ, ಸಮಾಜಕ್ಕಾಗಿ, ಭಾವೀ ಸಂಗಾತಿಗಾಗಿ ನೀವು ಪರಿಶುದ್ಧತೆಯನ್ನು ಕಾಯ್ದುಕೊಳ್ಳಲು ಬದ್ಧರಿರುವಿರಿ. ನೀವು ಈ ಬಗೆಯ ಶ್ರದ್ಧಾಭಾವನೆಯನ್ನು ಬೆಳೆಸಿಕೊಂಡರೆ ನೀವೂ ಎಲ್ಲ ಬಗೆಯ ಆಮಿಷಗಳಿಂದಲೂ ನಿಶ್ಚಿತವಾಗಿಯೂ ರಕ್ಷಿಸಿಕೊಳ್ಳಬಲ್ಲಿರಿ.

(4) ಸದಾ ಆ ಅವ್ಯಕ್ತ ಶಕ್ತಿಯ ಬಗೆಗೆ ವಿಚಾರಿಸಿರಿ. ನಮಗದು ಕಣ್ಣಿಗೆ ಕಾಣದಿದ್ದರೂ ನಮ್ಮ ಮಲಿನ ವಿಚಾರಗಳನ್ನು ಗಮನಿಸುತ್ತ ನಮ್ಮನ್ನು ಲಕ್ಷಿಸುತ್ತಿದೆಯೆಂದು ನಮ್ಮ ಅಂತರಂಗಕ್ಕೆ ಅನಿಸುತ್ತಿರುತ್ತದೆ.

ಈ ಶಕ್ತಿ ಸದಾ ಕಾಲ ನಿಮಗೆ ಸಹಾಯಕವಾಗುವುದೆಂದು ನಿಮಗೆ ಕಂಡುಬಾರದೇ ಇರದು.

5) ಆತ್ಮನಿಗ್ರಹಿಯ ಜೀವನದ ಕಟ್ಟುಪಾಡುಗಳು ಆತ್ಮತೃಪ್ತಿಯಲ್ಲಿ ನಿರತವಾದ ಮನುಷ್ಯನ ಜೀವನದ ಕಟ್ಟುಪಾಡುಗಳಿಗಿಂತ ಅವಶ್ಯವಾಗಿ ಭಿನ್ನವಾಗಿರಬೇಕು. ಅದರಿಂದಾಗಿ ನೀವು ಸಮಾಜ, ಓದು, ಮನರಂಜನೆಯ ಸ್ಥಳಗಳು ಮತ್ತು ನಿಮ್ಮ ಆಹಾರವನ್ನು ಒಂದು ಅಚ್ಚುಕಟ್ಟಿಗೆ ಒಳಪಡಿಸಬಹುದು.

ಯೋಗ್ಯವಾದ ಮತ್ತು ಪಾವಿತ್ರ್ಯಪೂರ್ಣವಾದ ಸಮಾಜವನ್ನು ನೀವು ಅರಸಬೇಕು.

ವಿಷಯವಾಸನೆಯನ್ನುಂಟುಮಾಡುವ ಕಾದಂಬರಿಗಳು, ಪತ್ರಿಕೆಗಳಿಂದ ನೀವು ನಿಶ್ಚಿತವಾಗಿಯೂ ದೂರಿರಬೇಕು. ಮಾನವೀಯತೆಯ ಕೃತಿಗಳನ್ನು ನೀವು ಓದಬೇಕು. ನೀವು ಯಾವುದಾದರೊಂದು ಗ್ರಂಥವನ್ನು ಅನುಸಂಧಾನ ಮತ್ತು ಮಾರ್ಗದರ್ಶನಕ್ಕಾಗಿ 'ಸಹಚಾರಿ'ಯಾಗಿ ಮಾಡಿಕೊಳ್ಳಬೇಕು.

ನೀವು ಸಿನೇಮಾ ನಾಟ್ಯಮಂದಿರಗಳನ್ನು ತ್ಯಜಿಸಬೇಕು. ಮನೋರಂಜನೆ ಎಂದರೆ, ನೀವು ವ್ಯರ್ಥ ಸಮಯ ಹಾಳು ಮಾಡದೇ ನಿಮ್ಮನ್ನು ನೀವು ರಂಜಿಸಿಕೊಳ್ಳಬೇಕು. ಅದಕ್ಕಾಗಿ ನೀವು ಭಜನಾ ಮಂಡಳಿಗಳಿಗೆ ಹೋಗಿರಿ. ಅಲ್ಲಿಯ ಶಬ್ದ ಹಾಗೂ ಧ್ವನಿಯಿಂದ ನಿಮ್ಮ ಆತ್ಮದ ಉನ್ನತಿ ಸಾಧಿಸುವುದು.

ರುಚಿಗಾಗಿ ನೀವು ಊಟಮಾಡದೇ ಹಸಿವೆಯನ್ನು ಹಿಂಗಿಸಿಕೊಳ್ಳಲು ಊಟವನ್ನು ಮಾಡಬೇಕು. ಆತ್ಮತೃಪ್ತಿಯಲ್ಲಿ ನಿರತವಾದ ಮನುಷ್ಯನು ಭೋಜನಕ್ಕಾಗಿ ಜೀವಿಸುವನು. ಆದರೆ ಆತ್ಮನಿಗ್ರಹಿಯು ಜೀವಿಸುವುದಕ್ಕಾಗಿ ಊಟ ಮಾಡುವನು. ಉದ್ರೇಕಕ್ಕೆ ಅವಕಾಶ ಕೊಡುವ, ನರಗಳನ್ನು ಉದ್ರಿಕ್ತಗೊಳಿಸುವ ಮದ್ಯಾರ್ಕಗಳನ್ನು, ವಿವೇಚನಾಶಕ್ತಿಯನ್ನು ನಾಶಪಡಿಸುವ ಅಮಲೇರುವ ಪದಾರ್ಥಗಳನ್ನು ನೀವು ಸೇವಿಸಬಾರದು. ಅಲ್ಲದೇ ಊಟದ ಪ್ರಮಾಣ ಹಾಗೂ ವೇಳೆಗಳನ್ನು ನೀವು ನಿಯಮಿತಪಡಿಸಿಕೊಳ್ಳಬೇಕು.

(6) ಆಮಿಷಗಳು ಪ್ರಬಲಗೊಳ್ಳುವವೆಂದು ಭೀತಿಯುಂಟಾದಲ್ಲಿ ದೇವರೆದುರು ಮೊಣಕಾಲೂರಿ ಕುಳಿತು ಸಹಾಯ ನೀಡಲು ಪ್ರಾರ್ಥಿಸಿರಿ. ರಾಮನಾಮವು ನನಗೆ ಸದಾ ಸಹಾಯವನ್ನು ನೀಡಿರುವುದು. ದೈಹಿಕ ಸಹಾಯವೆಂದು ತಣ್ಣೀರಿನ ಟಬ್ಬಿನಲ್ಲಿ ಕಾಲು ಹೊರಗೆ ಚಾಚಿ ಕುಳಿತು ಸ್ನಾನಮಾಡಿರಿ. ಅದರಿಂದ ನಿಮ್ಮ ಆಮಿಷಗಳು ಕಡಿಮೆಯಾದುದು ಕೂಡಲೇ ಕಂಡುಬರುವುದು. ನೀವು ದುರ್ಬಲರಾಗಿದ್ದು ಥಂಡಿಯಾಗುವ ಹೆದರಿಕೆ ಇಲ್ಲದಿದ್ದರೆ ಕೆಲ ನಿಮಿಷ ತಣ್ಣೀರಿನಲ್ಲಿ ಕುಳಿತುಕೊಳ್ಳಿರಿ.

(7) ದಿನಾಲು ಮುಂಜಾನೆ ಹಾಗೂ ರಾತ್ರಿ ಮಲಗುವ ಪೂರ್ವದಲ್ಲಿ ಹವೆಯಾಡುವ ಪ್ರದೇಶದಲ್ಲಿ ಜೋರಿನಿಂದ ಅಡ್ಡಾಡಿ ಬರಬೇಕು.

(8) ಬೇಗನೇ ಮಲಗಿ ನಸುಕಿನಲ್ಲಿ ಏಳುವುದರಿಂದ ಮನುಷ್ಯನು ಆರೋಗ್ಯವಂತನು, ಸಿರಿವಂತನು, ಬುದ್ಧಿವಂತನು ಆಗುವನು ಎಂಬ ಗಾದೆಮಾತು ಅತ್ಯಂತ ಯಥಾರ್ಥವಾಗಿದೆ. ರಾತ್ರಿ 9ಕ್ಕೆ ಮಲಗಿ ಬೆಳಗ್ಗೆ 4ಕ್ಕೆ ಏಳುವುದು ಅತ್ಯಂತ ಒಳ್ಳೆಯ ನಿಯಮವಾಗಿದೆ. ಬರಿ ಹೊಟ್ಟೆಯಲ್ಲಿಯೇ ಮಲಗಬೇಕು. ಅದಕ್ಕಾಗಿ ಸಾಯಂಕಾಲ 6ಕ್ಕೆ ನಿಮ್ಮ ರಾತ್ರಿ ಊಟ ಮುಗಿಯಬೇಕು.

(9) ಮಾನವನು ಜಗತ್ತಿನಲ್ಲಿಯ ಜೀವಿಗಳ ಸೇವೆ ಮಾಡಲು ಬಂದ ದೇವರ ಪ್ರತಿನಿಧಿಯಾಗಿರುವನೆಂಬುದನ್ನು ನೆನೆಪಿನಲ್ಲಿರಿಸಿಕೊಳ್ಳಿರಿ. ಅದಕ್ಕಾಗಿ ನೀವು ದೇವರ ಪ್ರತಿಷ್ಠೆ ಪ್ರೇಮಗಳನ್ನು ಚೆನ್ನಾಗಿ ವ್ಯಕ್ತಪಡಿಸಬೇಕೆಂಬುದನ್ನು ಮರೆಯಬೇಡಿರಿ. ಸೇವೆಯೇ ನಿಮ್ಮ ಏಕಮಾತ್ರ ಸಂತೋಷವಾಗಲಿ. ಜೀವನದಲ್ಲಿ ನಿಮಗೆ ಸುಖಸಂತೋಷ ಬೇಕೆನಿಸುವುದಿಲ್ಲ.

(ದಿ ಗುಡ್ ಲೈಫ್)

* * *

ದಾರಿ ತಪ್ಪುವ ವಿಚಾರಮಾಡದೆ, ಅನಿಷ್ಟಗಳನ್ನು ವಿಚಾರಿಸದೆ, ನಿದ್ರೆಯಲ್ಲಿ ಕನಸು ಕಾಣದ, ನಿದ್ದೆ ಮಾಡುತ್ತಿರುವಾಗಲೂ ಸಂಪೂರ್ಣ ಜಾಗ್ರತವಾಗಿರುವ ವ್ಯಕ್ತಿಯೇ ನಿಜವಾಗಿ ಆರೋಗ್ಯವಂತನು. ಅವನು ಕ್ವಿನಾಯಿನ್ ತೆಗೆದುಕೊಳ್ಳಬೇಕಾಗಿಲ್ಲ. ಅವನ ಪರಿಶುದ್ಧ ರಕ್ತದಲ್ಲಿ ಯಾವ ಬಗೆಯ ಸೋಂಕನ್ನು ನಿರೋಧಿಸುವ ಗುಣ ಹುದುಗಿರುತ್ತದೆ. ದೇಹ, ಮನಸ್ಸು ಹಾಗೂ ಚೇತನಗಳ ಇಂತಹ ಪರಿಪೂರ್ಣಾವಸ್ಥೆಗಾಗಿ ನಾನು ಹೆಣಗುತ್ತಿರುವೆನು. ಇದಕ್ಕೆ ಸೋಲೆಂಬುದಾಗಲಿ, ಅಯಶಸ್ಸೆಂಬುದಾಗಲಿ ಇಲ್ಲ.

(ಹ., 4 ಏಪ್ರಿಲ್ 1936)

ದೇವರೊಂದಿಗೆ ಸಂಬಂಧ ಬರುವಂತೆ ಮಾಡುವುದೇ ನಡವಳಿಕೆಯು. ಇದೇ ನಡವಳಿಕೆಯ ಮೂಲಾರ್ಥವೆನ್ನಬಹುದು. ಎಲ್ಲ ಇಂದ್ರಿಯಗಳ ಮೇಲಿನ ಸಂಪೂರ್ಣ ನಿಯಂತ್ರಣವು ನಡವಳಿಕೆಯಲ್ಲಿ ಅಡಗಿರುತ್ತದೆ. ಇದೇ ಈ ಶಬ್ದದ ನಿಜವಾದ ಹಾಗೂ ಸಮಂಜಸವಾದ ಅರ್ಥವಾಗಿರುವುದು.

ಜನಸಾಮಾನ್ಯರು ಇದನ್ನು ಜನನೇಂದ್ರಿಯದ ನಿಗ್ರಹವೆಂದೇ ಸಾಮಾನ್ಯವಾಗಿ ಭಾವಿಸಿರುವರು. ಈ ಸಂಕುಚಿತ ಅರ್ಥವು ಬ್ರಹ್ಮಚರ್ಯದ ಆಧಾರವನ್ನೇ ತೆಗೆದು ಹಾಕಿರುವುದು. ಆದರೆ ಪಾಲನೆಯನ್ನು ಅಸಾಧ್ಯಗೊಳಿಸಿರುವುದು. ಸರ್ವ ಇಂದ್ರಿಯಗಳ ಮೇಲೆ ನಿಯಂತ್ರಣವಿಲ್ಲದೇ ಜನನೇಂದ್ರಿಯವನ್ನು ನಿಗ್ರಹಿಸುವುದು ಸುಲಭವಿಲ್ಲ. ಎಲ್ಲವೂ ಒಂದನ್ನೊಂದು ಅವಲಂಬಿಸಿರುವವು. ಮನಸ್ಸೂ ಸಾಮಾನ್ಯ ರೀತಿಯಲ್ಲಿ ಅದರಲ್ಲಿ ಸೇರಿರುವುದು. ಮನಸ್ಸನ್ನು ನಿಗ್ರಹಿಸದೇ, ಶಾರೀರಕ ನಿಯಂತ್ರಣವನ್ನು ಒಂದು ವೇಳೆ ಸಾಧಿಸಿದರೂ ಕೇವಲ ಅದರಿಂದೇನೂ ಉಪಯೋಗವಿಲ್ಲ.

ಆತ್ಮತೃಪ್ತಿಯು ಎಂದಿಗೂ ಆದರ್ಶವಾಗಲಾರದೆಂಬುದು ಅತ್ಯಂತ ಸ್ಪಷ್ಟವಿರುವುದು. ಆದರ್ಶ ಸಾಧನೆಗೆ ಯಾವದೇ ಮಿತಿಯೆಂಬುದಿಲ್ಲ. ಆದರೆ ಅತಿಯಾದ ಆತ್ಮತೃಪ್ತಿಯಿಂದ ಸಂಬಂಧಿಸಿದ ವ್ಯಕ್ತಿಯ ಇಲ್ಲವೇ ಕುಲದ ನಾಶಕ್ಕೆ ಏನಾದರೊಂದು ಹಾಗೆ ಕಾರಣವಾಗುವುದೆಂದು ಎಲ್ಲರೂ ಒಪ್ಪುತ್ತಾರೆ. ಆದ್ದರಿಂದ ಆತ್ಮನಿಗ್ರಹವೊಂದೇ ನಮ್ಮ ಆದರ್ಶವೆನಿಸುವುದು. ಬಹು

ಪ್ರಾಚೀನ ಕಾಲದಿಂದಲೂ ಅದು ನಮ್ಮ ಆದರ್ಶವೆನಿಸುತ್ತ ಬಂದಿದೆ. ನಾವು ಅದನ್ನು ವಂಚಿಸಲೆತ್ನಿಸದೇ ಅದನ್ನು ಸಾಧಿಸುವ ಮಾರ್ಗಗಳನ್ನು ಕಂಡುಹಿಡಿಯಬೇಕು.

(ಹ., 20 ಮಾರ್ಚ್ 1937)

* * *

ನಂಬಿಕೆಯೇ ಸದ್ಗುಣ. ದುರ್ಬಲತೆಯು ಅಪನಂಬಿಕೆಯನ್ನುಂಟು ಮಾಡುವುದು.

(ಯು.ಇ., 31 ಡಿಸೆಂಬರ್ 1919)

* * *

ಸದ್ಗುಣ ಹಾಗೂ ದುರ್ಗುಣಗಳಲ್ಲಿಯ ಭೇದ ನಮಗೆ ತಿಳಿಯದಾದ ಕೂಡಲೇ ನಮ್ಮ ಬೆಳವಣಿಗೆಯೂ ನಿಲ್ಲುವುದು.

(ಯು.ಇ., 31 ಡಿಸೆಂಬರ್ 1921)

* * *

ಜಗತ್ತು ಸದ್ಗುಣಿಯಾಗಿರದಿದ್ದರೂ ಸದ್ಗುಣಕ್ಕೆ ಅನಭಿಜ್ಞವಾಗಿ ಗೌರವವನ್ನು ಸಲ್ಲಿಸುವುದು.

(ಯು.ಇ., 2 ಫೆಬ್ರುವರಿ 1928)

ಶಕ್ತಿ

ಬ್ರಹ್ಮಚರ್ಯವೆಂದರೇನು? ಅದನ್ನು ಸಂಪೂರ್ಣವಾಗಿ ಪರಿಪಾಲಿಸಲು ಸಾಧ್ಯವಿದೆಯೋ? ಸಾಧ್ಯವಿರುವದಾದರೆ ನೀವು ಆ ಸ್ಥಿತಿಯನ್ನು ಸಾಧಿಸಿದ್ದೀರಾ! ಎಂದೊಬ್ಬರು ಕೇಳಿದ್ದಾರೆ.

ಬ್ರಹ್ಮಚರ್ಯವೆಂದರೆ ನಿಜವಾದ ಮತ್ತು ಪರಿಪೂರ್ಣ ಅರ್ಥದಲ್ಲಿ ಬ್ರಹ್ಮನನ್ನು ಅರಸುವುದು ಎಂದು. ನಮ್ಮಲ್ಲಿ ಪ್ರತಿಯೊಬ್ಬರಲ್ಲಿಯೂ ಬ್ರಹ್ಮನಿರುವುದರಿಂದ ನಾವು ನಮ್ಮ ಅಂತರಂಗದಲ್ಲಿ ಧ್ಯಾನ ಮಾಡಿ ಹಾಗೂ ಅರಿವಿನಿಂದ ಅವನನ್ನು ಅರಸಬೇಕು. ಸರ್ವೇಂದ್ರಿಯಗಳ ಸಂಪೂರ್ಣ ನಿಯಂತ್ರಣವಿಲ್ಲದೇ ಸಿದ್ಧಿಯು ಅಸಾಧ್ಯ. ಬ್ರಹ್ಮಚರ್ಯವೆಂದರೆ ಸದಾ ಕಾಲದಲ್ಲಿ ಸರ್ವ ಸ್ಥಳಗಳಲ್ಲಿ ವಿಚಾರ, ಮಾತು, ಕೃತಿಗಳಲ್ಲಿ ಸರ್ವೇಂದ್ರಿಯಗಳನ್ನು ನಿಯಂತ್ರಿಸುವುದು.

ಪರಿಪೂರ್ಣ ಬ್ರಹ್ಮಚಾರಿಗಳು – ಸ್ತ್ರೀ – ಪುರುಷರು ಸಂಪೂರ್ಣ ಪಾಪರಹಿತರು, ಅದರಿಂದ ಅವರು ದೇವರಿಗೆ ಸಮೀಪವರ್ತಿಗಳು. ಅವರು ದೇವರಂಥವರು.

ಈ ಬಗೆಯ ಪರಿಪೂರ್ಣ ಬ್ರಹ್ಮಚರ್ಯ ಪಾಲನೆಯು ಸಾಧ್ಯವಿದೆಯೆಂಬುದರಲ್ಲಿ ನನಗಾವ ಸಂದೇಹವೂ ಇಲ್ಲ. ಈ ದಿಶೆಯಲ್ಲಿ ನಾನು ಅವಿರತವಾಗಿ ಪರಿಶ್ರಮಿಸುತ್ತಿದ್ದರೂ ಈ ಜನ್ಮದಲ್ಲಿಯೇ ಅದನ್ನು ಸಾಧಿಸುವ ಆಸೆಯಿರಿಸಿಕೊಂಡಿದ್ದರೂ ನಾನು ಇಂತಹ ಪರಿಪೂರ್ಣತೆಯನ್ನು ಸಾಧಿಸಿಲ್ಲವೆಂದು ವಿಷಾದದಿಂದ ಹೇಳಬೇಕಾಗಿದೆ.

ನಾನು ಜಾಗ್ರತಾವಸ್ಥೆಯಲ್ಲಿದ್ದಾಗ ಸದಾ ಎಚ್ಚರಿಕೆಯಿಂದಿರುತ್ತೇನೆ. ನನ್ನ ದೇಹದ ಮೇಲೆ ನಿಯಂತ್ರಣವನ್ನು ಗಳಿಸಿಕೊಂಡಿದ್ದೇನೆ. ಮಾತಿನಲ್ಲಿಯೂ ನಾನು ನಿಯಂತ್ರಣವಿರಿಸುವುದನ್ನು ಸಾಧಿಸಿದ್ದೇನೆ. ಆದರೆ ವಿಚಾರಗಳ ಸಂಬಂಧದಲ್ಲಿ ನನಗಿನ್ನೂ ಬಹಳ ಕೆಲಸ ಮಾಡಬೇಕಾಗಿದೆ. ನಾನು ಯಾವದಾದರೊಂದು ವಿಷಯದ ಬಗೆಗೆ ವಿಚಾರಗಳನ್ನು ಕೇಂದ್ರೀಕರಿಸಲು ಇಚ್ಛಿಸಿದಾಗ ಇತರ ವಿಚಾರಗಳು ತಲೆದೋರಿ ಅವೆರಡರಲ್ಲಿ ಗೊಂದಲವುಂಟಾಗುವುದು. ಆದರೂ ಜಾಗ್ರತಾವಸ್ಥೆಯಲ್ಲಿ ವಿಚಾರಗಳ ತಾಕಲಾಟವನ್ನು ಪ್ರತಿಬಂಧಿಸುವಲ್ಲಿ ಸಮರ್ಥನಾಗಿದ್ದೇನೆ.

ಮಲಿನ ವಿಚಾರಗಳಿಂದ ಮುಕ್ತನಾದ ಸ್ಥಿತಿಯನ್ನು ನಾನು ಮುಟ್ಟಿದ್ದೇನೆಂದು ಹೇಳಬಹುದು. ಆದರೆ ನಿದ್ರೆಯಲ್ಲಿ ನನ್ನ ವಿಚಾರಗಳ ಮೇಲೆ ಇದೇ ಬಗೆಯ ನಿಯಂತ್ರಣವಿರಿಸಿಕೊಳ್ಳಲು ಸಾಧ್ಯವಾಗಿಲ್ಲ. ನಿದ್ರೆಯಲ್ಲಿರುವಾಗ ಎಲ್ಲ ಬಗೆಯ ವಿಚಾರಗಳೂ ನನ್ನ ಮನದಲ್ಲಿ ಮೂಡುವವು. ನಾನು ಅನಿರೀಕ್ಷಿತ ಕನಸುಗಳನ್ನು ಕಾಣುವೆನು. ಕೆಲವೊಮ್ಮೆ ಈ ಮೊದಲು ಅನುಭವಿಸಿದ ಸುಖಗಳ ಲವಲವಿಕೆಯುಂಟಾಗುವುದು. ಈ ಲವಲವಿಕೆ ಹಸನಾಗಿರದಿದ್ದರೆ ದುಃಸ್ವಪ್ನಗಳು ಬೀಳುವವು. ಈ ಪರಿಸ್ಥಿತಿ ಪಾಪಿಜೀವನವನ್ನು ವ್ಯಕ್ತಪಡಿಸುವುದು.

ನನ್ನ ಕಲ್ಮಷ ವಿಚಾರಗಳನ್ನು ಕಿತ್ತುಹಾಕುವುದು ಸಾಧ್ಯವಾದರೂ ಅದನ್ನು ಸಂಪೂರ್ಣ ನಾಶಪಡಿಸಲಾಗುವುದಿಲ್ಲ. ನಾನು ನನ್ನ ವಿಚಾರಗಳ ಮೇಲೆ ಸಂಪೂರ್ಣ ಪ್ರಭುತ್ವವನ್ನು ಗಳಿಸಿಕೊಂಡಿದ್ದರೆ ಕಳೆದ ಹತ್ತು ವರುಷಗಳಲ್ಲಿ ನನಗೆ ಬಂದ ಫ್ಲುರಸಿ, ಡೀಸೆಂಟ್ರಿ ಹಾಗೂ ಅಪೆಂಡಿಸಿಟಸ್ ಇವನ್ನು ಅನುಭವಿಸಬೇಕಾಗಿರಲಿಲ್ಲ. ಆತ್ಮವು ಪಾಪರಹಿತವಾಗಿದ್ದರೆ ಅದು ಇರುವ ಕಾಯವು ಆರೋಗ್ಯಕಾರಿಯಾಗಿರುವುದು. ಆತ್ಮವು ಪಾಪಮುಕ್ತವಾಗುತ್ತಿರುವಂತೆ ದೇಹವು ರೋಗಮುಕ್ತವಾಗಲು ಹವಣಿಸುತ್ತದೆ. ಇಲ್ಲಿ ಆರೋಗ್ಯವಂತ ಶರೀರವೆಂದರೆ ಬಲಿಷ್ಠ ಕಾಯವಲ್ಲ. ತೇಜಸ್ವಿಯಾದ ಆತ್ಮನು ಅಶಕ್ತ ದೇಹದಲ್ಲಿಯೇ ವಾಸಿಸುವನು. ಆತ್ಮನು ತೇಜಸ್ವಿಯಾದಂತೆ ದೇಹವು ಕ್ಷೀಣವಾಗುತ್ತ ಹೋಗುವುದು. ದೇಹ ಸೊರಗಿದಂತೆ ಕಂಡರೂ ಅದು ಸಂಪೂರ್ಣ ಆರೋಗ್ಯಕಾರಿಯಾಗಿರಬಹುದು. ಆದರೆ ಬಲಿಷ್ಠ ಕಾಯವಿದ್ದರೂ ರೋಗಿಯಾಗಿರಬಹುದು. ಒಂದು ವೇಳೆ ರೋಗವಿಲ್ಲದಿದ್ದರೂ ಇಂತಹ ದೇಹಕ್ಕೆ ಜಾಡ್ಯ ಬೇಗನೆ ಅಂಟಿಕೊಳ್ಳಬಹುದು. ಆದರೆ ಸಂಪೂರ್ಣ ಆರೋಗ್ಯಕಾರಿಯಾದ ದೇಹವು ಜಾಡ್ಯಗಳಿಗೆ ಬಲಿಯಾಗುವುದಿಲ್ಲ. ಶುದ್ಧ ರಕ್ತಕ್ಕೆ ಹಾನಿಕಾರಿ ಜೀವಾಣುಗಳನ್ನು ಹೊರಹಾಕುವ ಶಕ್ತಿಯಿರುತ್ತದೆ.

ಆದರೆ ಈ ಅದ್ಭುತ ಸ್ಥಿತಿಯನ್ನು ಮುಟ್ಟುವುದು ಕಠಿಣವಿರುತ್ತದೆ. ಹಾಗಿಲ್ಲವಾಗಿದ್ದರೆ ನಾನು ಈಗಾಗಲೇ ಇದನ್ನು ಮುಟ್ಟುತ್ತಿದ್ದೆ. ಈ ಗುರಿಯನ್ನು ಸಾಧಿಸುವಲ್ಲಿ ಕೈಕೊಳ್ಳುವ ಯಾವುದೇ ಕ್ರಮದಲ್ಲಿ ನಾನು ಅಲಕ್ಷ್ಯವನ್ನು ತೋರಿಲ್ಲ. ನನ್ನನ್ನು ಈ ನನ್ನ ಗುರಿಯಿಂದ ಹೊರಗಿನ ಯಾವ ಸಂಗತಿಯೂ ದೂರವಿರಿಸಲಾರದು. ಆದರೆ ನಮ್ಮ ಹಿಂದಿನ ಕೃತಿಗಳ ಅನುಭವಗಳನ್ನು ತೊಡೆದು ಹಾಕುವುದು. ಸುಲಭ ಸಾಧ್ಯವಿರುವುದಿಲ್ಲ.

ಈ ರೀತಿ ತಡವಾದರೂ ನಾನು ನಿರಾಶನಾಗಿರುವುದಿಲ್ಲ. ಪಾಪದಿಂದ ಸಂಪೂರ್ಣ ಮುಕ್ತವಾದ ಸ್ಥಿತಿಯನ್ನು ನಾನು ಊಹಿಸಿಕೊಳ್ಳಬಲ್ಲೆ. ಆದರೆ ಮಸುಕು ಚಿತ್ತವೂ ನನ್ನ ಕಣ್ಣಿಗೆ ಗೋಚರಿಸುವುದು. ನನ್ನ ಹೆಬ್ಬಕೆಯಂತೆ ಈಡೇರದೇ ನಾನು ಸತ್ತುಹೋದರೂ ನಾನು ಸೋಲಿಸಲ್ಪಟ್ಟಿರುವೆನೆಂದು ನಂಬುವುದಿಲ್ಲ. ನಾನು ಸಾಧಿಸಿದ ಪ್ರಗತಿ ಆಶೆಗಿಂಬು ಕೊಡುವುದಲ್ಲದೇ ನಿರಾಸೆಗೆ ಆಸ್ಪದವಿಲ್ಲ. ನಾನು ಇಂದಿನ ಜೀವನದಂತೆ ಭಾವಿ ಜೀವನದಲ್ಲೂ ಬಲವಾದ ನಂಬಿಗೆಯಿರಿಸಿರುವೆನು. ಹೀಗಾಗಿ ಯಾವುದೇ ಚಿಕ್ಕ ಪ್ರಯತ್ನವೂ ನಿರರ್ಥಕವಾಗದೆಂದು ನನಗೆ ಗೊತ್ತಿರುವುದು.

ನಾನು ನನ್ನ ಆತ್ಮವೃತ್ತದ ಈ ವಿವರಗಳನ್ನೆಲ್ಲ ಇಲ್ಲಿ ಕೊಡುತ್ತಿರುವುದು ನನ್ನಂತಹ ಪರಿಸ್ಥಿತಿಯಲ್ಲಿರುವವರಿಗೆ ಸಹಾಯಕವಾಗಲೆಂದು; ಅವರು ಉತ್ತೇಜನಗೊಂಡು ಆತ್ಮವಿಶ್ವಾಸ ಬೆಳೆಸಿಕೊಳ್ಳಲೆಂದು. ಪ್ರತಿಯೊಬ್ಬರಲ್ಲಿರುವ ಆತ್ಮ ಒಂದೇ. ಎಲ್ಲವೂ ಒಂದು ಬಗೆಯ ಶಕ್ತಿ-ಶಕ್ಯತೆಗಳನ್ನು ಒಳಗೊಂಡಿರುವವು. ಕೆಲವು ತಮ್ಮ ಶಕ್ತಿಯನ್ನು ಬೆಳೆಸಿಕೊಂಡಿರುವವು. ಇನ್ನು ಕೆಲವೊಂದರ ಶಕ್ತಿ ಹುದುಗಿರುವುದು. ಅವೂ ಪ್ರಯತ್ನಪಟ್ಟಲ್ಲಿ ಮೊದಲ ತರದ ಅನುಭವವನ್ನು ಪಡೆಯಬಹುದು.

ಈವರೆಗೆ ನಾನು ಬ್ರಹ್ಮಚರ್ಯದ ಬಗೆಗೆ ವ್ಯಾಪಕವಾಗಿ ನಿರೂಪಿಸಿದೆ. ಸಾಮಾನ್ಯ ಜನತೆ ತಿಳಿದ ಮೇರೆಗೆ ಬ್ರಹ್ಮಚರ್ಯವು ವಿಚಾರ, ಮಾತು, ಕೃತಿಗಳಲ್ಲಿ ಪಾಶವೀಲಾಲಸೆಯನ್ನು ನಿಯಂತ್ರಿಸುವುದಾಗಿದೆ. ಲಾಲಸೆಯ ನಿಯಂತ್ರಣವು ಕಠಿಣವೆಂದು ತಿಳಿಯಲಾಗಿರುವುದರಿಂದ ಈ ಅರ್ಥವೂ ಸಹ ಸರಿಯಾಗಿರುವುದು. ರಸನೇಂದ್ರಿಯದ ನಿಯಂತ್ರಣದ ಬಗೆಗೆ ಇಷ್ಟು ಒತ್ತಿ ಹೇಳಿಲ್ಲವಾದುದರಿಂದ ಲಾಲಸೆಯ ನಿಯಂತ್ರಣವು ಹೆಚ್ಚು ಕಠಿಣವಾಗಿ ಪರಿಣಮಿಸಿದೆ. ಅಸಾಧ್ಯವಾಗಿದೆಯೆಂದೂ ಅನ್ನಬೇಕು. ರೋಗಪೀಡಿತವಾದ ದೇಹದಲ್ಲಿ ಲಾಲಸೆ ಬಲವಾಗಿರುವುದೆಂದು ವೈದ್ಯಕೀಯ ವೃತ್ತಿಯನ್ನು ನಂಬುವುದರಿಂದ ಬ್ರಹ್ಮಚರ್ಯವು ನಿಶ್ಯಕ್ತರಿಗೆ ಕಠಿಣವೆಂದು ತೋರುತ್ತದೆ.

ನಾನು ಈ ಮೊದಲು ದುರ್ಬಲ ಆದರೆ ಆರೋಗ್ಯಕಾರಿಯಾದ ದೇಹದ ಸಂಬಂಧದಲ್ಲಿ ಹೇಳಿರುವೆ. ಇದರಿಂದ ದೈಹಿಕ ಸಂಸ್ಕಾರವನ್ನು ನಾವು ನಿರ್ಲಕ್ಷಿಸಬೇಕೆಂಬ ವಿಚಾರವನ್ನು ಯಾರೂ ಮಾಡಕೂಡದು. ಉನ್ನತಮಟ್ಟದ ಬ್ರಹ್ಮಚರ್ಯವನ್ನು ನನ್ನ ಹರಕು ಮುರುಕು ಭಾಷೆಯಲ್ಲಿ ತಿಳಿಯಪಡಿಸಲೆತ್ನಿಸಿದ್ದು.

ಅದನ್ನು ತಪ್ಪು ತಿಳಿದುಕೊಳ್ಳುವ ಸಂಭವವಿರುವುದು. ಸರ್ವೇಂದ್ರಿಯಗಳ ಸಂಪೂರ್ಣ ನಿಯಂತ್ರಣವನ್ನು ಸಾಧಿಸಬಯಸುವವರು ಕೊನೆಯಲ್ಲಿ ದೈಹಿಕ ದುರ್ಬಲತೆಯನ್ನು ಎದುರಿಸಲು ಸಿದ್ಧರಿರಬೇಕು. ದೇಹದ ಮೇಲಿನ ಮೋಹವು ನಶಿಸಿಹೋದನಂತರ ದೈಹಿಕ ಬಲದ ಇಷ್ಟವೂ ತಾನಾಗಿಯೇ ಇಲ್ಲದಾಗುವುದು.

ಪಾಶವೀ ಲಾಲಸೆಯನ್ನು ಗೆದ್ದ ಬ್ರಹ್ಮಚಾರಿಯ ದೇಹವು ಅತ್ಯಂತ ಬಲಿಷ್ಠವೂ ಕಾಂತಿಯುಕ್ತವೂ ಆಗಿರಬೇಕು. ಈ ಪರಿಮಿತಿಗೊಳಗಾದ ಬ್ರಹ್ಮಚರ್ಯವು ಸಹ ಅದ್ಭುತ ಸಂಗತಿಯಾಗಿರುವುದು. ಕನಸಿನಲ್ಲಿ ಕೂಡ ವೈಷಯಿಕ ವಿಚಾರಗಳನ್ನು ತಾರದವನು ಜಗತ್ತಿನ ಆರಾಧನೆಗೆ ತಕ್ಕವನಾಗಿರುವನು. ಅಂಥವನಿಗೆ ಉಳಿದ ಇಂದ್ರಿಯಗಳ ನಿಯಂತ್ರಣ ಸುಲಭವಿದೆಯೆಂಬುದು ಸ್ಪಷ್ಟವಿರುವುದು.

ಇನ್ನೊಬ್ಬರು ಬರೆದು ಕೇಳಿದ್ದಾರೆ: ನನ್ನ ಪರಿಸ್ಥಿತಿ ಕರುಣಾಜನಕವಾಗಿದೆ. ಇಂದೇ ದುಷ್ಟ ವಿಚಾರವೊಂದು ಹಗಲು ರಾತ್ರಿ ನನಗೆ ತೊಂದರೆ ಕೊಡುತ್ತಿದೆ. ಕಚೇರಿಯಲ್ಲಿ, ರಸ್ತೆಯಲ್ಲಿ, ಓದುವಾಗ, ಕೆಲಸ ಮಾಡುವಾಗ, ಪ್ರಾರ್ಥನೆ ಮಾಡುವಾಗ ಸಹ ಈ ವಿಚಾರದ ತೊಂದರೆ ತಪ್ಪಿಲ್ಲ. ನಾನು ನನ್ನ ವಿಚಾರಗಳನ್ನು ಹೇಗೆ ನಿಯಂತ್ರಿಸಬೇಕು? ನಾನು ಸ್ತ್ರೀಯರನ್ನು ನನ್ನ ತಾಯಿಂದಿರೆಂದು ಹೇಗೆ ನೋಡಬಲ್ಲೆ? ನನ್ನ ಕಣ್ಣಿನಿಂದ ಶುದ್ಧ ಪ್ರೀತಿಯಲ್ಲದೇ ಬೇರೇನೂ ಹೇಗೆ ಹೊರಹೊಮ್ಮಬಲ್ಲದು? ದುಷ್ಟ ವಿಚಾರಗಳನ್ನು ನಾನು ಹೇಗೆ ನಿರ್ಮೂಲಗೊಳಿಸಬಲ್ಲೆ? ಬ್ರಹ್ಮಚರ್ಯದ ಬಗೆಗೆ ನಿಮ್ಮ ಲೇಖನವು ನನ್ನೆದುರು ಇದೆ. ಆದರೆ ಅದರಿಂದ ನನಗೆ ಲಾಭವಾಗದೆಂದೆನಿಸುತ್ತದೆ.

ಇದು ನಿಜವಾಗಿಯೂ ಹೃದಯದ್ರಾವಕವಾಗಿರುವುದು. ನಾವೆಲ್ಲರೂ ಒಂದೇ ಬಗೆಯ ಅವಸ್ಥೆಯಲ್ಲಿರುವೆವು. ಮನಸ್ಸು ದುಷ್ಟವಿಚಾರಗಳಿಗೆ ವಿರುದ್ಧವಾಗಿರುವವರೆಗೆ ನಿರುತ್ಸಾಹಗೊಳ್ಳುವ ಕಾರಣವಿಲ್ಲ. ಪಾಪಕ್ಕೆಳಿಸುತ್ತಿರುವ ಕಣ್ಣುಗಳನ್ನು ಮುಚ್ಚಿಕೊಳ್ಳಬೇಕು ಹಾಗೂ ಕಿವಿಗಳನ್ನು ಹತ್ತಿಯಿಂದ ಬಂದುಮಾಡಿಕೊಳ್ಳಬೇಕು. ದೃಷ್ಟಿಯನ್ನು ಕೆಳಗೆ ಮಾಡಿಕೊಂಡು ನಡೆಯಬೇಕು ಅಂದರೆ ಕಣ್ಣುಗಳು ತಪ್ಪು ಹಾದಿಯಲ್ಲಿ ದೃಷ್ಟಿಸಲಾರವು. ಅಶ್ಲೀಲವಾದ ಮಾತುಕತೆ ನಡೆದಲ್ಲಿ ಮತ್ತು ಅಶುದ್ಧ ಸಂಗೀತ ಹಾಡುವಲ್ಲಿಂದ ಎದ್ದು ಹೋಗಬೇಕು.

ರಸನೇಂದ್ರಿಯದ ಮೇಲೂ ನಿಯಂತ್ರಣವನ್ನು ಪಡೆದುಕೊಳ್ಳಬೇಕು. ಬಾಯಿರುಚಿಯನ್ನು ಕಟ್ಟದವನು ಪಾಶವೀ ಲಾಲಸೆಯನ್ನು ನಿಗ್ರಹಿಸಲಾರನೆಂದು ನನ್ನ ಅನುಭವವಾಗಿರುವುದು. ರಸನೇಂದ್ರಿಯವನ್ನು ಗೆಲ್ಲುವದು ಅಂತಹ ಸುಲಭವಾದ ಕಾರ್ಯವೇನಲ್ಲ. ಆದರೆ ರಸನೇಂದ್ರಿಯವನ್ನು ನಿಯಂತ್ರಿಸುವದನ್ನೇ ಲಾಲಸೆಯನ್ನು ಗೆಲ್ಲುವುದು ಹೊಂದಿಕೊಂಡಿರುವುದು. ಮಸಾಲೆ ಹಾಗೂ ಮೇಲೋಗರಗಳನ್ನು ಸಂಪೂರ್ಣವಾಗಿ ಇಲ್ಲವೇ ಸಾಧ್ಯವಿದ್ದ ಮಟ್ಟಿಗೆ ಬಿಡುವುದು ರುಚಿಯನ್ನು ಕಟ್ಟುವ ಮಾರ್ಗಗಳಲ್ಲೊಂದಾಗಿದೆ. ನಾವು ದೇಹಪೋಷಣೆಗಾಗಿ ಮಾತ್ರ ಊಟಮಾಡುತ್ತಿರುವೆವು ರುಚಿಗಾಗಿ ಅಲ್ಲ ಎಂಬ ಭಾವನೆಯನ್ನು ಸದಾ ಬೆಳೆಸಿಕೊಳ್ಳುವುದು ಇನ್ನೊಂದು ಹೆಚ್ಚು ಪರಿಣಾಮಕಾರಿಯಾದ ಉಪಾಯವಾಗಿದೆ. ನಾವು ಉಸಿರಾಡುವುದು ಜೀವನಕ್ಕಾಗಿಯಲ್ಲದೇ ರುಚಿಗಲ್ಲ. ನೀರಡಿಕೆಯನ್ನು ಹಿಂಗಿಸಲು ನೀರು ಕುಡಿಯುವಂತೆ ಹಸಿವೆಯನ್ನು ತೃಪ್ತಿಗೊಳಿಸಲು ನಾವು ಊಟವನ್ನು ಮಾಡಬೇಕು. ಆದರೆ ನಮ್ಮ ತಂದೆ-ತಾಯಿಗಳು ಬಾಲ್ಯದಿಂದಲೇ ತದ್ವಿರುದ್ಧವಾದ ಚಟಗಳಿಗಂಟಿಕೊಳ್ಳುವಂತೆ ಮಾಡುವರು. ಅವು ನಮ್ಮ ಪೋಷಣೆಯಂದಲ್ಲ. ಆದರೆ ಹುಚ್ಚು ಪ್ರೀತಿಗಾಗಿ ರುಚಿಕರವಾದ, ಸವಿಯಾದ ವಿವಿಧ ಪದಾರ್ಥಗಳನ್ನು ನಮಗೆ ಕೊಡುವರು. ನಾವು ಮನೆಯಲ್ಲಿಯ ಈ ಪ್ರತಿಕೂಲ ವಾತಾವರಣವನ್ನು ನಿವಾರಿಸುವುದಕ್ಕಾಗಿ ವಿಶೇಷ ಶ್ರಮಿಸಬೇಕಾಗಿದೆ.

ಪಾಶವೀ ಲಾಲಸೆಯನ್ನು ಗೆಲ್ಲಲು ನಮ್ಮ ಅತ್ಯಂತ ಶಕ್ತಿಶಾಲಿಯಾದ ಮಿತ್ರನೆಂದರೆ ರಾಮನಾಮ ಇಲ್ಲವೇ ಅಂತಹದೇ ಒಂದು ಮಂತ್ರ ದ್ವಾದಶ ಮಂತ್ರವೂ ಈ ಉದ್ದೇಶವನ್ನು ಈಡೇರಿಸುತ್ತದೆ. ಅವರವರಿಗೆ ಸರಿಕಂಡ ಮಂತ್ರವನ್ನು ಜಪಿಸಬಹುದು. ನನಗೆ ಬಾಲ್ಯದಿಂದಲೂ ಹೆಚ್ಚು ಪರಿಚಿತವಾಗಿರುವ ಹಾಗೂ ನನ್ನೆಲ್ಲ ಹೋರಾಟಗಳಲ್ಲಿ ಸದಾ ಬೆಂಬಲವಾಗಿರುವ ರಾಮನಾಮವನ್ನು ಸೂಚಿಸಿದ್ದೇನೆ. ಯಾವದೇ ಮಂತ್ರವನ್ನು ಆರಿಸಲಿ ಅವನು ಅದರಲ್ಲಿ ಸಂಪೂರ್ಣ ನಿರತನಾಗಬೇಕು. ಜಪದ ಕಾಲದಲ್ಲಿ ಇತರ ವಿಚಾರಗಳು ಗೊಂದಲವುಂಟುಮಾಡಿದರೂ ಲಕ್ಷಿಸಬಾರದು. ಹೀಗೆ ನಿಷ್ಠೆಯಿಂದ ಜಪಿಸುವವನು ಕೊನೆಯಲ್ಲಿ ಯಶಸ್ವಿಯಾಗುವನೆಂಬುದರಲ್ಲಿ ನನಗೆ ಭರವಸೆಯಿದೆ. ಈ ಮಂತ್ರವು ಅವರ ಜೀವನದ ಊರುಗೋಲಾಗಿ ಎಂಥ ಸಂಕಟಗ್ರಸ್ತ ಪ್ರಸಂಗದಲ್ಲಿಯೂ ಅವರನ್ನು ಮುನ್ನಡೆಸುವುದು. ಆದರೆ

ಈ ಬಗೆಯ ಪವಿತ್ರವಾದ ಮಂತ್ರದಿಂದ ಯಾರೂ ಭೌತಿಕ ಲಾಭವನ್ನು ಪಡೆಯಲೆತ್ನಿಸಬಾರದು. ಈ ಮಂತ್ರಗಳ ವಿಶಿಷ್ಟ ಶಕ್ತಿಯು ವ್ಯಕ್ತಿಗತ ಪಾವಿತ್ರ್ಯವನ್ನು ಕಾಪಾಡುವಲ್ಲಿ ಅಡಗಿರುತ್ತದೆ. ಪರಿಶ್ರಮದಿಂದ ಅರಸುವವನಿಗೆ ಇದು ಅವಗತವಾಗುತ್ತದೆ. ಆದರೆ ಮಂತ್ರವನ್ನು ಗಿಳಿಯ ಓದಿನಂತೆ ಉಚ್ಚರಿಸಬಾರದೆಂಬುದನ್ನು ನೆನಪಿನಲ್ಲಿರಿಸಿಕೊಳ್ಳಬೇಕು. ತಾದಾತ್ಮ್ಯನಾಗಿ ಮಂತ್ರವನ್ನು ಪಠಿಸಬೇಕು. ಗಿಳಿಯು ಯಾಂತ್ರಿಕವಾಗಿ ಉಚ್ಚರಿಸುತ್ತಿರುತ್ತದೆ. ಆದರೆ ನಾವು ಅನಿಷ್ಟ ವಿಚಾರಗಳನ್ನು ಹೊಡೆದುಹಾಕುವಂತೆ ಬುದ್ಧಿಯನ್ನು ಸರಿಯಾಗಿ ಉಪಯೋಗಿಸಿಕೊಂಡು ಉಚ್ಚರಿಸಬೇಕು. ಅಲ್ಲದೇ ಮಂತ್ರಗಳು ನಮಗೆ ಈ ರೀತಿ ಮಾಡಲು ಸಹಾಯಮಾಡುವವೆಂಬ ಶ್ರದ್ಧೆಯಿಂದಲೇ ಉಚ್ಚರಿಸಬೇಕು.

(ಯ.ಇ., 1 ಡಿಸೆಂಬರ್ 1926)

* * *

ಬ್ರಹ್ಮಚರ್ಯವನ್ನು ಬಾಯಿಮಾತಿನಿಂದ ವಿವರಿಸುವುದು ಸಾಧ್ಯವಿಲ್ಲ. ಅದೊಂದು ಕಠಿಣವಾದ ವಿಷಯವಾಗಿರುವುದು. ಸಾಮಾನ್ಯರು ತಿಳಿದುಕೊಂಡಿರುವ ಬ್ರಹ್ಮಚರ್ಯವನ್ನು ಸಹ ಪಾಲಿಸುವುದು ಕಠಿಣವೆಂದು ನಮ್ಮ ಶಾಸ್ತ್ರಗಳಲ್ಲಿ ಹೇಳಲಾಗಿದೆ. ನಾವು ಇತರ ಇಂದ್ರಿಯಗಳನ್ನು ನಿಯಂತ್ರಿಸುವುದಿಲ್ಲವಾದುದರಿಂದ ಬ್ರಹ್ಮಚರ್ಯವು ಕಠಿಣವಾಗಿ ತೋರುವುದು. ಉಳಿದ ಇಂದ್ರಿಯಗಳಿಗೆ ಧುರೀಣನಂತಿರುವ ರಸನೇಂದ್ರಿಯದ ಉದಾಹರಣೆಯನ್ನು ನಾವು ತೆಗೆದುಕೊಳ್ಳೋಣ. ತನ್ನ ರಸನೇಂದ್ರಿಯವನ್ನು ನಿಯಂತ್ರಿಸುವವನಿಗೆ ಬ್ರಹ್ಮಚರ್ಯವು ಸುಲಭವಾಗಿ ಸಾಧಿಸುವುದು. ಕೆಳವರ್ಗದ ಪ್ರಾಣಿಗಳು ಬ್ರಹ್ಮಚರ್ಯ ಪಾಲಿಸುವುದಾಗಿ ನಮ್ಮ ಪ್ರಾಣಿಶಾಸ್ತ್ರಜ್ಞರು ಹೇಳಿ ದನಗಳ ಉದಾಹರಣೆಯನ್ನು ಕೊಡುತ್ತಾರೆ. ಇದು ಬಹುಮಟ್ಟಿಗೆ ನಿಜವಿರುತ್ತದೆ. ದನಗಳಿಗೆ ರಸನೇಂದ್ರಿಯದ ಮೇಲೆ ಮನಸ್ಸಿನಿಂದಲ್ಲದಿದ್ದರೂ ಸ್ವಭಾವತಃ ಸಂಪೂರ್ಣ ನಿಯಂತ್ರಣವಿರುವುದೇ ಇದಕ್ಕೆ ಕಾರಣವಾಗಿದೆ. ಅವು ಕೇವಲ ಮೇವನ್ನು ಮಾತ್ರ ತಿನ್ನುತ್ತಿದ್ದು ಪುಷ್ಟಿಗೆ ಅವಶ್ಯವಿರುವಷ್ಟು ಪ್ರಮಾಣ ಮಾತ್ರ ತೆಗೆದುಕೊಳ್ಳುತ್ತವೆ. ಅವು ಜೀವಿಸುವುದಕ್ಕಾಗಿ ತಿನ್ನುವುವಲ್ಲದೇ, ತಿನ್ನುವುದಕ್ಕಾಗಿ ಜೀವಿಸುವುದಿಲ್ಲ. ಮನುಷ್ಯರಲ್ಲಿ ಇದು ತದ್ವಿರುದ್ಧವಾಗಿರುತ್ತದೆ. ತಾಯಿ ಮಗುವಿಗೆ ರುಚಿಯಾದ ತಿನಿಸುಗಳನ್ನು

ಕೊಡುವಳು. ಮಗುವಿಗೆ ಹೆಚ್ಚೆಚ್ಚು ಉಣಿಸುವುದರಿಂದಲೇ ತನ್ನ ಪ್ರೀತಿಯನ್ನು ವ್ಯಕ್ತಪಡಿಸಬಹುದೆಂದು ಅವಳು ತಿಳಿದುಕೊಂಡಿರುವಳು. ಆದರೆ ಹೀಗೆ ಮಾಡುವುದರಿಂದ ಅವಳು ಮಗುವಿಗೆ ಆಹಾರ ಸುಖ ಹೆಚ್ಚುವಂತೆ ಮಾಡದೇ ಪ್ರತಿಯೊಂದು ನಿಸ್ಸಾರವೆನಿಸುವಂತೆ ಹಾಗೂ ರೋಸಿಕೆ ಬರುವಂತೆ ಮಾಡುವಳು. ರುಚಿಯು ಹಸಿವೆಯನ್ನು ಅಲವಂಬಿಸಿರುತ್ತದೆ. ಹೊಟ್ಟೆ ಹಸಿಯದಿದ್ದರೆ ಸಿಹಿ ತಿಂಡಿಯೂ ಸವಿಯೆನಿಸುವುದಿಲ್ಲ. ಆದರೆ ಅದೇ ಹಸಿದಾಗ ಒಂದು ರೊಟ್ಟಿಯ ತುಣುಕೂ ದಿವ್ಯಾಮೃತವೆನಿಸುವುದು. ವಿವಿಧ ಬಗೆಯ ಮಸಾಲೆಗಳಿಂದ ತಿನಿಸುಗಳನ್ನು ತಯಾರಿಸಿ ಹೊಟ್ಟೆ ಭಾರವಾಗುವಂತೆ ಮಾಡಿ, ಬ್ರಹ್ಮಚರ್ಯ ಕಠಿಣವೆಂದೇಕೆನಿಸುತ್ತದೆಯೆಂದು ಆಶ್ಚರ್ಯಪಡುತ್ತೇವೆ.

ದೇವರು ನಮಗೆ ಕೊಟ್ಟ ಕಣ್ಣುಗಳ ಸದುಪಯೋಗ ಮಾಡಿಕೊಳ್ಳದೇ ದುರುಪಯೋಗಪಡಿಸಿಕೊಳ್ಳುತ್ತಿರುವೆವು. ತಾಯಿಯ ಗಾಯತ್ರಿ ಮಂತ್ರವನ್ನು ಕಲಿತು ಮಗುವಿಗೇಕೆ ಕಲಿಸಬಾರದು? ಅವಳು ಮಂತ್ರದ ಒಳ ಹಾಗೂ ಆಳವಾದ ಅರ್ಥವನ್ನು ಅರಿತುಕೊಳ್ಳುವ ತೊಂದರೆಪಡಬೇಕಾಗಿಲ್ಲ. ಅದು ಸೂರ್ಯನ ಬಗ್ಗೆ ಭಕ್ತಿಯುಂಟುಮಾಡುವುದೆಂದು ಅರಿತು ಅಷ್ಟನ್ನೇ ಮಗುವಿಗೆ ವಿವರಿಸಿದರೆ ಸಾಕು. ಮಂತ್ರದ ಬಗೆಗೆ ನನ್ನ ವಿವರಣೆಯನ್ನು ಇಲ್ಲಿ ಸ್ವಲ್ಪದರಲ್ಲಿ ಕೊಡುವೆ. ನಾವು ಸೂರ್ಯನನ್ನು ಹೇಗೆ ಪೂಜಿಸುತ್ತೇವೆ. ನಾವು ಸೂರ್ಯನತ್ತ ಮುಖಮಾಡಿಕೊಂಡು ಕಣ್ಣಿನಿಂದಲೇ ಸಂಪ್ರೋಕ್ಷಣೆ ಮಾಡುವಂತೆ ಅವನನ್ನು ನೋಡುತ್ತೇವೆ. ಗಾಯತ್ರಿಯನ್ನು ರಚಿಸಿದವನು ಒಬ್ಬ ಋಷಿ. ಸೂರ್ಯೋದಯ ಸಮಯದಲ್ಲಿ ನಮ್ಮ ಕಣ್ಣೆದುರು ನಡೆಯುವ ದೈನಿಕವಾದ ವರ್ಣಮಯ ನಾಟಕವನ್ನು ನಾವು ಬೇರೆಲ್ಲಿಯೂ ನೋಡಲಾರೆವೆಂದು ಅವನು ನಮಗೆ ಕಲಿಸಿರುವನು. ದೇವರಿಗಿಂತ ಹಿರಿದಾದ ರಂಗವ್ಯವಸ್ಥಾಪಕನೂ ದೊರೆಯಲಾರನು. ಬಾನುವಿಗಿಂತ ಭವ್ಯವಾದ ರಂಗಮಂಟಪ ದೊರೆಯಲಾರದು. ಮಗುವಿನ ಕಣ್ಣು ತೊಳೆದು ಸೂರ್ಯನತ್ತ ನೋಡಲು ಹೇಳುವ ತಾಯಿ ಎಲ್ಲಿರುತ್ತಾಳೆ? ದುರ್ದೈವದಿಂದ ನಮ್ಮ ದೇಶದಲ್ಲಿ ತಾಯಂದಿರು ಬೇರೆ ಇತರ ಕೆಲಸಗಳಲ್ಲಿ ಮಗ್ನರಾಗಿರುತ್ತಾರೆ. ಶಾಲೆಯಲ್ಲಿಯ ಶಿಕ್ಷಣದಿಂದ ಮಗು ದೊಡ್ಡ ಅಧಿಕಾರಿಯಾಗಬಹುದು. ಆದರೆ ಮನೆಯ ವಾತಾವರಣವು ಅವನ ಶಿಕ್ಷಣದಲ್ಲಿ ಮಹತ್ವದ ಪಾತ್ರವಹಿಸುವದೆಂಬುದನ್ನು ಮರೆಯುತ್ತೇವೆ. ತಂದೆ ತಾಯಿಗಳು ತಮ್ಮ ಮಗುವಿಗೆ ಹೆಚ್ಚು ಬಟ್ಟೆ

ತೊಡಿಸಿ–ಅಡಗಿಸಿ–ಅವು ಹೆಚ್ಚು ಸುಂದರವಾಗಿ ಕಾಣುವಂತೆ ಮಾಡುವುದಾಗಿ ಭಾವಿಸುತ್ತಾರೆ. ಬಟ್ಟೆ ಕೇವಲ ದೇಹ ಮುಚ್ಚಿಕೊಳ್ಳಲು ಬಿಸಿಲು ಚಳಿಗಳಿಂದ ರಕ್ಷಿಸಿಕೊಳ್ಳಲು ಇರುವವಲ್ಲದೇ ಅದನ್ನು ಅಲಂಕರಿಸಿಕೊಳ್ಳಲು ಇರುವುದಿಲ್ಲ. ಮಗು ಚಳಿಯಿಂದ ನಡುಗುತ್ತಿದ್ದರೆ ಬೆಚ್ಚಗೆ ಮಾಡಿಕೊಳ್ಳಲು ಒಲೆಯ ಬಳಿಗಾಗಲಿ, ಓಡಲು ಓಣಿಗಾಗಲಿ, ಕೆಲಸ ಮಾಡಲು ಹೊಲಕ್ಕಾಗಲಿ ಕಳಿಸಬೇಕು. ಇದರಿಂದಲೇ ಮಗು ಉತ್ತಮ ದೇಹಸೌಷ್ಟವ ಪಡೆಯಲು ನಾವು ಸಹಾಯ ನೀಡಿದಂತಾಗುವುದು. ಹೀಗೆ ಮಾಡದೇ ಮಗುವನ್ನು ಮನೆಯಲ್ಲಿರಿಸಿಕೊಂಡರೆ ಅವನ ದೇಹಕ್ಕೆ ಕೃತಕ ಬೆಚ್ಚಗಿನ ಕಲ್ಪನೆಯನ್ನುಂಟು ಮಾಡಿದಂತಾಗುತ್ತದೆ. ಅವನು ತನ್ನ ದೇಹವನ್ನು ಅತಿ ಮುದ್ದು ಮಾಡುವಂತೆ ಕಲಿಸುವುದರಿಂದ ದೇಹ ದುರ್ಬಲವಾಗುವುದು.

ಈವರೆಗೆ ಬಟ್ಟೆಯ ವಿಷಯವಾಯಿತು. ಮನೆಯಲ್ಲಿ ನಡೆದಿರುವ ಲಘುಸಂಭಾಷಣೆಯು ಮಕ್ಕಳ ಮನಸ್ಸಿನ ಮೇಲೆ ಅನಿಷ್ಟ ಪರಿಣಾಮವನ್ನುಂಟುಮಾಡುವುದು. ಹಿರಿಯರು ಅವನ ಮದುವೆಯ ಬಗೆಗೆ ಮಾತನಾಡುವರು. ಅವನು ಸುತ್ತುಮುತ್ತು ನೋಡುವ ಸಂಗತಿಗಳೂ ಅವನ ಮನಸ್ಸಿನ ಮೇಲೆ ಪರಿಣಾಮ ಮಾಡುವವು. ಆದರೂ ನಾವು ಸಂಪೂರ್ಣ ಕಾಡುಸ್ಥಿತಿಗೆ ಇಳಿದಿಲ್ಲವೆಂಬುದೇ ಆಶ್ಚರ್ಯಕರವಾದ ಸಂಗತಿ. ಅಸಾಧ್ಯವಾದ ಪರಿಸ್ಥಿತಿಯಲ್ಲಿಯೂ ನಿಗ್ರಹವನ್ನು ಅನುಸರಿಸಲಾಗುತ್ತದೆ. ಮಾನವನು ಆತ್ಮರಕ್ಷಣೆ ಮಾಡಿಕೊಳ್ಳುವಂತೆ ಆ ದಯಾಮಯನು ಪರಿಸ್ಥಿತಿಯನ್ನು ನಿರ್ಮಿಸಿರುವನು. ಬ್ರಹ್ಮಚರ್ಯದ ಮಾರ್ಗದಲ್ಲಿ ಇರುವ ಈ ಎಲ್ಲ ತೊಡಕುಗಳನ್ನು ನಾವು ನಿವಾರಿಸಿದಲ್ಲಿ ಅದು ಸಾಧ್ಯವಾಗುವುದಲ್ಲದೇ ಪಾಲಿಸಲು ಸುಲಭವೂ ಆಗಿರುವುದು.

ನಾವು ದುರ್ಬಲರಾಗಿದ್ದರೂ ದೈಹಿಕವಾಗಿ ನಮಗಿಂತ ಬಲಿಷ್ಠರಾದವರೊಂದಿಗೆ ನಾವು ಸ್ಪರ್ಧಿಸಬೇಕಾಗಿರುವುದು. ಇದನ್ನು ಸಾಧಿಸಲು ಎರಡು ಮಾರ್ಗಗಳಿರುವವು. ಒಂದು ದೈವಿಕಮಾರ್ಗ, ಇನ್ನೊಂದು ಪೈಶಾಚಿಕ ಮಾರ್ಗವಾಗಿರುವುದು. ಸರಿಯಿರಲಿ ತಪ್ಪಿರಲಿ ಮಾಂಸ ತಿನ್ನುವುದು ಮೊದಲಾದ ಎಲ್ಲ ಕ್ರಮಗಳನ್ನು ಕೈಕೊಂಡು ದೇಹವನ್ನು ಬಲಿಷ್ಠಗೊಳಿಸುವುದು ಪೈಶಾಚಿಕ ಮಾರ್ಗವಾಗಿರುವದು. ನನ್ನ ಬಾಲ್ಯ ಸ್ನೇಹಿತನೊಬ್ಬನು ನಾವು ಮಾಂಸ ತಿಂದು ದೇಹವನ್ನು ಬಲಿಷ್ಠಗೊಳಿಸಿಕೊಂಡರೆ ಇಂಗ್ಲಿಷ್‌ರನ್ನು

ಸಮಾನವಾಗಿ ಎದುರಿಸಬಹುದೆಂದೂ ಹೇಳುತ್ತಿದ್ದನು. ಜಪಾನು ಇತರ ರಾಷ್ಟ್ರಗಳನ್ನು ಎದುರಿಸುವ ಸಮಯ ಪ್ರಾಪ್ತವಾದಾಗ ಮಾಂಸ ಭಕ್ಷಣವು ರೂಢಿಯಾಗಿಯೇ ಪರಿಣಮಿಸಿತು. ನಮ್ಮ ದೇಹವನ್ನು ಪೈಶಾಚಿಕ ರೀತಿಯಲ್ಲಿ ಬೆಳೆಯಗೊಡಬೇಕಾದರೆ ನಾವು ಜಪಾನದ ರೀತಿಯಲ್ಲಿ ಸಾಗಬೇಕು.

ನಾವು ದೈವಿಕ ರೀತಿಯಲ್ಲಿ ದೇಹಗಳನ್ನು ಬೆಳೆಯಿಸಿಗೊಂಡರೆ ನಮಗೆ ಮುಕ್ತವಿರುವ ಮಾರ್ಗವೆಂದರೆ ಬ್ರಹ್ಮಚರ್ಯವೊಂದೇ. ಜನರು ನನ್ನನ್ನು ಕರೆದಾಗ ನನ್ನ ಬಗೆಗೇ ನನಗೆ ಅನುಕಂಪವುಂಟಾಗುವುದು. ಮದುವೆಯಾಗಿ ಮಕ್ಕಳಿರುವ ನನ್ನಂಥವನಿಗೆ ಈ ಮಾತು ಹೇಗೆ ಅನ್ವಯಿಸುವುದು? ನೈಷ್ಠಿಕ ಬ್ರಹ್ಮಚಾರಿಯು ನಾನು ನೆರಳಿದಂತೆ ಜ್ವರ, ತಲೆಶೂಲೆ, ಕೆಮ್ಮು ಇಲ್ಲವೇ ಹೃದ್ರೋಗಗಳಿಂದ ಎಂದೂ ನರಳುವುದಿಲ್ಲ. ಕರುಳಿನಲ್ಲಿ ಒಂದು ಕಿತ್ತಳೆ ಬೀಜ ಉಳಿದರೂ ಅಪೆಂಡಿಸೈಟಿಸ್ ಉಂಟಾಗುವುದೆಂದು ಡಾಕ್ಟರರು ಹೇಳುತ್ತಾರೆ. ಆದರೆ ಕಿತ್ತಳೆ ಬೀಜವು ಶುದ್ಧವಾದ ಆರೋಗ್ಯಕರವಾದ ದೇಹದಲ್ಲೆಂದಿಗೂ ಮನೆಮಾಡಿಕೊಂಡಿರದು. ಕರುಳುಗಳು ದುರ್ಬಲವಾದರೆ ಇಂತಹ ಹೊರಪದಾರ್ಥಗಳನ್ನು ಹೊರಗೆ ಹಾಕಲು ಅಸಮರ್ಥವಾಗುತ್ತವೆ. ನನ್ನ ಕರುಳುಗಳೂ ದುರ್ಬಲಗೊಂಡಿರುವುದರಿಂದ ನನ್ನಲ್ಲಿ ಅಪೆಂಡಿಸೈಟಿಸ್ ತಲೆದೋರಿರಲು ಸಾಕು. ಮಕ್ಕಳು ಎಲ್ಲ ಬಗೆಯ ವಸ್ತುಗಳನ್ನು ತಿನ್ನುತ್ತಾರೆ. ತಾಯಿ ಸದಾ ಕಾಲ ಅವರನ್ನು ನೋಡಲಾರಳು. ಆದರೆ ಅವರ ಕರುಳುಗಳು ಪ್ರಭಾವಿಯಾಗಿ ಕೆಲಸ ಮಾಡುತ್ತಿರುವುದರಿಂದ ಅವರು ತೊಂದರೆಗೊಳಗಾಗುವುದಿಲ್ಲ. ಅತ್ಯಂತ ನಿಷ್ಠುರವಾಗಿರಬೇಕಾದ ನೈಷ್ಠಿಕ ಬ್ರಹ್ಮಚಾರಿಯೆಂದು ನನ್ನನ್ನು ತಪ್ಪು ತಿಳಿದುಕೊಳ್ಳಬಾರದು. ನಾನು ಅಪೇಕ್ಷಿಪಡುತ್ತಿದ್ದರೂ ನಾನು ಆದರ್ಶ ಬ್ರಹ್ಮಚಾರಿಯಿರುವುದಿಲ್ಲ.

ಬ್ರಹ್ಮಚರ್ಯವೆಂದರೆ ಯಾವದೇ ಸಂದರ್ಭದಲ್ಲಿ, ಪರಿಸ್ಥಿತಿಯಲ್ಲಿ ಯಾರು ಹೆಣ್ಣುಮಕ್ಕಳನ್ನು, ತಂಗಿಯನ್ನು ಸ್ಪರ್ಶಿಸಬಾರದೆಂದಲ್ಲ. ಆದರೆ ಈ ಬಗೆಯ ಸ್ಪರ್ಶದಲ್ಲಿ ಶಾಂತತೆಯಿರಬೇಕು. ಈ ಸ್ಪರ್ಶವು ಒಂದು ಕಾಗದವನ್ನು ಮುಟ್ಟುವಂತಿರಬೇಕು. ಕಾಯಿಲೆಗೊಳಗಾದ ತಂಗಿಯ ಶೂಶ್ರೂಷೆಮಾಡಲು ಹಿಂದೆ ಮುಂದೆ ನೋಡುವ ವ್ಯಕ್ತಿಯ ಬ್ರಹ್ಮಚರ್ಯವು ನಿರರ್ಥಕವಾದುದು. ಮೃತಶರೀರದ ಸಂಸ್ಪರ್ಶದ ಕಾಲಕ್ಕೆ ಕಂಡುಬರದಿರುವ ಕಾತುರ ಭಾವನೆಯೇ ಜಗತ್ತಿನ ಅತಿ ಸುಂದರಿಯ ಸಂಸ್ಪರ್ಶದ ಕಾಲಕ್ಕೆ ಕಂಡುಬರಬೇಕು. ನಿಮ್ಮ

ಮಕ್ಕಳು ಈ ಬಗೆಯ ಬ್ರಹ್ಮಚರ್ಯ ಸಾಧಿಸಬೇಕೆಂದು ನೀವು ಬಯಸುತ್ತಿದ್ದರೆ ಅವರ ವಿದ್ಯಾಭ್ಯಾಸದ ಕ್ರಮವನ್ನು ನೀವು ರೂಪಿಸದೇ ನನ್ನಂಥ ಅಪಕ್ವ ಬ್ರಹ್ಮಚಾರಿಗೊಪ್ಪಿಸಬೇಕು.

ಬ್ರಹ್ಮಚಾರಿಯು ಸ್ವಭಾವತಃ ಸಂನ್ಯಾಸಕ್ಕಿಂತ ಶ್ರೇಷ್ಠವಾದುದಿರುವುದು. ಆದರೆ ನಾವದನ್ನು ಸಂಪೂರ್ಣ ಅವನತಿಗಿಳಿಸಿದ್ದೇವೆ. ಅದೇ ರೀತಿ ಗೃಹಸ್ಥಾಶ್ರಮ ಹಾಗೂ ವಾನಪ್ರಸ್ಥಾಶ್ರಮಗಳು ಸಹ ಅವನತಿಗಿಳಿದಿರುವವು. ಸಂನ್ಯಾಸವು ಮಾಯವಾಗಿರುವುದು. ಹೀಗೆ ನಮ್ಮ ದುಃಸ್ಥಿತಿಯಿರುವುದು.

(ನವಜೀವನ, 26 ಫೆಬ್ರವರಿ 1925)

* * *

ಕೌಮಾರ್ಯ ಪಾಲನೆಗೆ ಸಂಸ್ಕೃತದ ಸಮಾನಪದ ಬ್ರಹ್ಮಚರ್ಯವಾಗಿದೆ. ಬ್ರಹ್ಮಚರ್ಯವು ಕೌಮಾರ್ಯಪಾಲನೆಗಿಂತ ಹೆಚ್ಚಿನದಾಗಿರುವುದು. ಬ್ರಹ್ಮಚರ್ಯವೆಂದರೆ ಸರ್ವೇಂದ್ರಿಯಗಳನ್ನು ಸಂವೇದನೆಗಳನ್ನು ಸಂಪೂರ್ಣ ನಿಯಂತ್ರಿಸುವದೆಂದಿರುವುದು. ಪರಿಪೂರ್ಣ ಬ್ರಹ್ಮಚಾರಿಗೆ ಯಾವುದೂ ಸಾಧ್ಯವಿರುವುದಿಲ್ಲ. ಆದರೆ ಇದು ಆದರ್ಶಸ್ಥಿತಿಯಾಗಿದ್ದು ಅಪರೂಪವಾಗಿ ಸಾಧಿಸಲಾಗುತ್ತಿದೆ. ಇದು ಯುಕ್ಲಿಡ್‌ನ ರೇಖೆಯಂತಿದೆ. ಅದು ಊಹಾರಾಜ್ಯದ್ದಾಗಿದೆಯಲ್ಲವೇ ದೈಹಿಕವಾಗಿ ಎಳೆಯಲು ಸಾಧ್ಯವಾಗಿರುವುದಿಲ್ಲ. ಆದರೆ ಈ ವ್ಯಾಖ್ಯೆಯು ಭೂಮಿಯಲ್ಲಿ ಅತ್ಯಂತ ಮಹತ್ವದ ಪರಿಣಾಮವನ್ನುಂಟು ಮಾಡುವಂತಹದು. ಇದೇ ರೀತಿ ಸಂಪೂರ್ಣ ಬ್ರಹ್ಮಚಾರಿಯು ಕಲ್ಪನಾ ರಾಜ್ಯದ ವ್ಯಕ್ತಿಯಾಗಿರುವನು. ಆದರೆ ಅವನನ್ನು ನಮ್ಮ ಕಣ್ಣೆದುರು ಸದಾ ಇರಿಸಿಕೊಳ್ಳದಿದ್ದರೆ ನಾವು ಚುಕ್ಕಾಣಿಯಿಲ್ಲದ ಹಡಗದಂತಾಗುವೆವು. ಕಲ್ಪನಾರಾಜ್ಯಕ್ಕೆ ನಾವು ಸಮೀಪವರ್ತಿಯಾದಂತೆ ಅಷ್ಟು ಹೆಚ್ಚು ಪ್ರಮಾಣದಲ್ಲಿ ಪರಿಪೂರ್ಣತೆಯನ್ನು ಸಾಧಿಸಿದಂತಿರುವುದು.

ಸದ್ಯಕ್ಕೆ ಬ್ರಹ್ಮಚರ್ಯವೆಂದರೆ ಕೌಮಾರ್ಯಪಾಲನೆಯೆಂಬರ್ಥದಲ್ಲಿ ವಿಚಾರಿಸೋಣ. ಆಧ್ಯಾತ್ಮಿಕ ಪೂರ್ಣತೆಯನ್ನು ಮುಟ್ಟಲು ವಿಚಾರ, ಮಾತು, ಕೃತಿಗಳಲ್ಲಿ ಸಂಪೂರ್ಣ ಸಂಯಮಿ–ಜೀವನವನ್ನು ನಡೆಸುವುದು ಅವಶ್ಯವಿರುವುದು. ಇಂತಹ ಜನರಿಲ್ಲದ ದೇಶವು ಈ ಕೊರತೆಯಿಂದ

ಬಡವೆನಿಸುವುದು. ರಾಷ್ಟ್ರೀಯ ವಿಕಾಸದ ಸದ್ಯದ ಘಟ್ಟದಲ್ಲಿ ಬ್ರಹ್ಮಚರ್ಯವು ತಾತ್ಪೂರ್ತಿಕವಾಗಿಯಾದರೂ ಅವಶ್ಯವಿದೆಯೆಂದು ನನ್ನ ಮತವಿರುವುದು.

ನಮ್ಮ ಲಕ್ಷಾವಧಿ ಜನರು ಅಸಾಮಾನ್ಯ ರೋಗಗಳು, ಬರಗಾಲಗಳು, ದಿವಾಳಿಖೋರತನ ಮತ್ತು ಉಪವಾಸದಿಂದ ನರಳುತ್ತಿರುವರು. ನಾವು ದಾಸ್ಯದಲ್ಲಿದ್ದೇವೆಂಬುದನ್ನು ಅನೇಕರು ಅದನ್ನು ಒಪ್ಪಲು ನಿರಾಕರಿಸುವಂತಹ ಸೂಕ್ಷ್ಮವಾದ ಘಟ್ಟದಲ್ಲಿ ನಾವಿರುವೆವು. ಆರ್ಥಿಕ, ಮಾನಸಿಕ ಹಾಗೂ ನೈತಿಕ ಭಾರಗಳೆಂಬ ಮೂರು ಬಗೆಯ ಶಾಪವಿದ್ದಾಗ್ಯೂ ಸಹ ನಮ್ಮದು ಪ್ರಗತಿಪರ ಸ್ವಾತಂತ್ರ್ಯವೆಂದು ಕೆಲವರು ತಪ್ಪು ತಿಳಿದುಕೊಂಡಿರುವರು. ಒಂದೇ ಸಮನೆ ಬೆಳೆಯುತ್ತಿರುವ ಸೈನಿಕವೆಚ್ಚ, ಘಾತುಕ ಆರ್ಥಿಕ ಧೋರಣೆಗಳು, ಲ್ಯಾಂಕಶಾಯರ ಹಾಗೂ ಇತರ ಬ್ರಿಟಿಷ ಹಿತಸಂಬಂಧಗಳನ್ನು ಕಾಪಾಡುವ ಹಾಗೂ ಅವಕ್ಕೆ ಪ್ರಯೋಜನ ಒದಗಿಸುವ ಉದ್ದೇಶದಿಂದಲೇ ಕೈಕೊಂಡವಾಗಿರುವವು. ಸರಕಾರದ ವಿವಿಧ ಶಾಖೆಗಳನ್ನು ದುಂದುರೀತಿಯಲ್ಲಿ ನಡೆಸುತ್ತಿರುವುದರಿಂದ ಭಾರತದ ಮೇಲೆ ಅತಿಭಾರ ಬೀಳುತ್ತಿದ್ದು ಅದರ ಬಡತನವನ್ನು ಹೆಚ್ಚಿಸಿರುವುದು; ರೋಗರುಜಿನಗಳನ್ನೆದುರಿಸುವ ಸಾಮರ್ಥ್ಯವನ್ನು ಕಡಿಮೆ ಮಾಡಿದೆ. ಆಡಳಿತದ ರೀತಿಯು ಗೋಖಲೆಯವರ ಶಬ್ದಗಳಲ್ಲಿ ಹೇಳಬೇಕಾದರೆ ರಾಷ್ಟ್ರೀಯ ಬೆಳವಣಿಗೆ ಕುಂಠಿತವಾಗಿರುವುದು; ನಮ್ಮಲ್ಲಿಯ ಅತಿ ಎತ್ತರದವರು ಬಾಗಿ ನಡೆಯಬೇಕಾಗುವುದು. ಭಾರತವು ಅಮೃತಸರದಲ್ಲಿ ಹೊಟ್ಟೆ ಹೊಸೆಯುವಂತೆ ಮಾಡಲಾಯಿತು. ಪಂಜಾಬದಲ್ಲಿಯ ಉದ್ದೇಶಿತ ಅಪಮಾನ, ಭಾರತೀಯ ಮುಸಲ್ಮಾನರಿಗೆ ಕೊಟ್ಟ ವಚನ ಪಾಲಿಸಲು ತಪ್ಪಿದ್ದಕ್ಕೆ ಕ್ಷಮೆ ಕೇಳಿಕೊಳ್ಳಲು ನಿರಾಕರಿಸಿದ್ದು ಇತ್ತೀಚಿನ ನೈತಿಕ ಪತನದ ಉದಾಹರಣೆಗಳಾಗಿರುವವು. ಅವು ನಮ್ಮ ಆತ್ಮಕ್ಕೆ ನೋವುಂಟು ಮಾಡುವಂತಹವಾಗಿವೆ. ನಾವು ಇವೆರಡಕ್ಕೂ ತಲೆಬಾಗಿದ್ದರೆ ನಮ್ಮ 'ಬೀಜ ಬಡಿಯುವ' ವಿಧಾನವು ಪೂರ್ತಿಯಾದಂತಾಗುತ್ತಿತ್ತು.

ನಾನು ಈ ಮೇಲೆ ಬಣ್ಣಿಸಿದ ಕೀಳು ಪರಿಸ್ಥಿತಿಯಲ್ಲಿ ಮಕ್ಕಳನ್ನು ಬೆಳೆಸುವುದು ತರವೆ? ನಾವು ಅಸಹಾಯಕರಾಗಿ, ರೋಗಪೀಡಿತರಾಗಿ ಮತ್ತು ಬರಗಾಲಕ್ಕೊಳಗಾಗಿರುವ ಮಕ್ಕಳು ಹುಟ್ಟುತ್ತ ಹೋದರೆ ನಾವು ಗುಲಾಮರನ್ನು ಹಾಗೂ ದುರ್ಬಲರನ್ನು ಇಮ್ಮಡಿಗೊಳಿಸಿದಂತಾಗುವುದು. ಭಾರತವು ಸ್ವತಂತ್ರವಾಗಿ ಅನಿವಾರ್ಯ ಉಪವಾಸವನ್ನೆದುರಿಸಿ, ಬರಗಾಲದಲ್ಲಿ ಎಲ್ಲರಿಗೂ ಆಹಾರವೊದಗಿಸಲು ಸಮರ್ಥವಾಗಿ, ಸಾಂಕ್ರಾಮಿಕ ರೋಗಗಳ ನಿವಾರಣೆಗಾಗಿ ಉಪಯುಕ್ತ ಜ್ಞಾನ ಸಂಪಾದಿಸಿದ ನಂತರ ನಾವು ಮಕ್ಕಳನ್ನು

ಪಡೆಯಲು ಹಕ್ಕು ಪಡೆಯುವೆವು. ಈ ಭೂಮಿಯಲ್ಲಿ ಈಗ ಜನನದ ಸುದ್ದಿಗಳನ್ನು ಕೇಳಿದಾಗ ನನಗೆಷ್ಟು ವಿಷಾದವಾಗುದೆಂಬುದನ್ನು ಇಲ್ಲಿ ಹೇಳದಿರಲಾರೆ. ಭಾರತವು ಸದ್ಯದ ಜನಸಂಖ್ಯೆಯ ಯೋಗಕ್ಷೇಮವನ್ನೇ ಸರಿಯಾಗಿ ನೋಡಿಕೊಳ್ಳುವ ಪರಿಸ್ಥಿತಿಯಲ್ಲಿರುವುದಿಲ್ಲ. ಅಲ್ಲಿ ಅಧಿಕ ಜನಸಂಖ್ಯೆಯಿದೆಯೆಂದಲ್ಲ; ವಿದೇಶ ಪ್ರಭುತ್ವಕ್ಕೊಳಗಾಗಿದೆಯೆಂದು. ಇಲ್ಲಿಯ ಸಂಪತ್ತನ್ನು ಅವರು ಶೋಷಿಸುತ್ತಿರುವರೆಂದು.

ಪ್ರಜೋತ್ಪತ್ತಿಯನ್ನು ನಿಲ್ಲಿಸುವುದು ಹೇಗೆ? ಯುರೋಪ ಮೊದಲಾದ ರಾಷ್ಟ್ರಗಳಲ್ಲಿಯಂತೆ ಅನೈತಿಕ ಹಾಗೂ ಕೃತ್ರಿಮ ಅಡೆತಡೆಗಳಿಂದಲ್ಲ. ಆದರೆ ಶಿಸ್ತಿನ ಹಾಗೂ ಆತ್ಮನಿಗ್ರಹದ ಜೀವನದಿಂದ ತಂದೆತಾಯಿಗಳು ತಮ್ಮ ಮಕ್ಕಳಿಗೆ ಬ್ರಹ್ಮಚರ್ಯ ಪಾಲಿಸಲು ಕಲಿಸಬೇಕು. ಹಿಂದೂ ಶಾಸ್ತ್ರಗಳ ಮೇರೆಗೆ ಹುಡುಗರ ಮದುವೆಯ ಕನಿಷ್ಠ ವಯಸ್ಸು 25 ಇರುವುದು. ನಮ್ಮ ಯುವಕ-ಯುವತಿಯವರಿಗೆ ವೈವಾಹಿಕ ಜೀವನದ ತರಬೇತಿ ಕೊಡುವದು ಪಾಪಕರವೆಂದು ನಮ್ಮ ಮಾತೆಯರು ತಿಳಿದುಕೊಂಡರೆ ಭಾರತದಲ್ಲಿಯ ಅನೇಕ ಮದುವೆಗಳು ತಾವಾಗಿಯೇ ನಿಲ್ಲುವವು. ಅಲ್ಲದೇ ನಮ್ಮ ಹುಡಿಗೆಯರು ಇಲ್ಲಿಯ ಹವಾಮಾನದಿಂದಾಗಿ ಬೇಗನೆ ಹರೆಯದವರಾಗುವರೆಂದು ಕಾಡು ವಿಚಾರವನ್ನು ನಾವು ನಂಬಬೇಕಿಲ್ಲ. ಬೇಗನೆ ಹರೆಯದವರಾಗುವರೆಂಬ ಇಂತಹ ಅಂಧಶ್ರದ್ಧೆಯನ್ನು ನಾವೆಲ್ಲಿಯೂ ನೋಡಿರುವುದಿಲ್ಲ. ವಾತಾವರಣಕ್ಕೂ, ಪ್ರೌಢದೆಸೆ ಬರುವುದಕ್ಕೂ ಯಾವ ರೀತಿಯ ಸಂಬಂಧವೂ ಇಲ್ಲವೆಂದು ನಾನು ಖಂಡತುಂಡವಾಗಿ ಹೇಳಬಲ್ಲೆ. ನಮ್ಮ ಕೌಟುಂಬಿಕ ಜೀವನದ ಸುತ್ತಲಿನ ಮಾನಸಿಕ ಹಾಗೂ ನೈತಿಕ ವಾತಾವರಣವೇ ಅಕಾಲಿಕ ಪ್ರೌಢದೆಸೆಯನ್ನುಂಟು ಮಾಡುವುದೆಂದು ಹೇಳಬೇಕು. ತಾಯಿಯರು ಮತ್ತು ಇತರ ಸಂಬಂಧಿಕರು ಹುಡುಗಿಯರು ವಿಶಿಷ್ಟ ವಯಸ್ಸಿನವರಾದ ಕೂಡಲೇ ಅವರ ವಿವಾಹವಾಗಬೇಕೆಂದು ಹೇಳಹತ್ತಿ ಧಾರ್ಮಿಕ ಕರ್ತವ್ಯವೆಂದೆನ್ನತೊಡಗುವರು. ಅವರು ಎಳೆಯ ಶಿಶುವಿದ್ದಾಗಲೇ ಒಮ್ಮೊಮ್ಮೆ ಕೈಗೂಸಾಗಿದ್ದಾಗಲೇ ಮದುವೆಯ ನಿಶ್ಚಯ ನಡೆಯುವುದೂ ಉಂಟು. ಮಕ್ಕಳ ಆಹಾರ ಹಾಗೂ ಉಡುಪುಗಳು ಪ್ರಚೋದಕವಾಗಿರುವವು. ನಾವು ಮಕ್ಕಳನ್ನು ಸುಖ ಹಾಗೂ ಅಭಿಮಾನಗಳಿಗಾಗಿ ಗೊಂಬೆಯಂತೆ ಸಿಂಗರಿಸುವೆವು. ನಾನೂ ಅನೇಕ ಮಕ್ಕಳನ್ನು ಬೆಳೆಸಿರುವೆನು. ಅವರಿಗೆ ಯಾವದೇ ಉಡುಪು ಕೊಡಲಿ ಅದನ್ನವರು ಯಾವುದೇ ತೊಂದರೆಯಿಲ್ಲದೇ ತೊಟ್ಟುಕೊಳ್ಳುತ್ತಿದ್ದರು. ನಮ್ಮ

ಅಂಥ ಪ್ರೀತಿಯಲ್ಲಿ ಮಕ್ಕಳ ಸಾಮರ್ಥ್ಯವನ್ನು ನಾವು ಅರಿತುಕೊಳ್ಳುವುದಿಲ್ಲ. ಇದರ ಪರಿಣಾಮವಾಗಿ ಬೇಗನೆ ಪ್ರೌಢರಾಗಿ ದುರ್ಬಲ ಪ್ರಜೋತ್ಪತ್ತಿಯಾಗಿ ಮರಣವೂ ತೀವ್ರವಾಗಿ ಸಂಭವಿಸುವುದುಂಟು. ತಂದೆ ತಾಯಿಗಳು ಮಕ್ಕಳಿಗೆ ಸುಲಭವಾಗಿ ಗ್ರಹಿಸುವಂತೆ ಲಾಲಸೆಯಲ್ಲಿ ತೊಡಗಿರುವುದೂ ಉಂಟು. ಮಕ್ಕಳು ಅನಿರ್ಬಂಧವಾಗಿ ಈ ವಿಷಯಗಳನ್ನು ಅರಿತುಕೊಳ್ಳಲು ಇದರಿಂದ ನೆರವಾಗುವುದು. ಕುಟುಂಬದಲ್ಲಿ ಬರುವ ಪ್ರತಿಯೊಂದು ಹೊಸ ಮಗುವನ್ನು ಸಂತೋಷ ಸಮಾರಂಭಗಳಿಂದ ಸ್ವಾಗತಿಸಲಾಗುವುದು. ನಾವು ಸುತ್ತಮುತ್ತಲಿನ ಪರಿಸ್ಥಿತಿಗೆ ಹೊಂದುಕೊಳ್ಳುವಂತೆ ಸಂಯಮಿಗಳಾಗಿಲ್ಲವೆಂಬುದು ಅಚ್ಚರಿಯೇ ಆಗಿದೆ. ದೇಶದ ಕಲ್ಯಾಣವನ್ನು ಬಯಸುತ್ತಿದ್ದರೆ ಹಾಗೂ ಬಂದವನು ಪರಿಪೂರ್ಣ ಹಾಗೂ ಬಲಶಾಲಿಯಾದ ಸ್ತ್ರೀಪುರುಷರ ನಾಡಾಗಬೇಕಾಗಿದ್ದರೆ ವಿವಾಹಿತರು ಆತ್ಮನಿಗ್ರಹವನ್ನು ಪಾಲಿಸಿ ಸದ್ಯಕ್ಕೆ ಪ್ರಜೋತ್ಪತ್ತಿಯನ್ನು ನಿಲ್ಲಿಸುವರೆಂಬಲ್ಲಿ ಸಂದೇಹವಿಲ್ಲ. ನವವಿವಾಹಿತರಿಗೂ ಈ ಸಲಹೆಯನ್ನು ನಾನು ಕೊಡುತ್ತಿದ್ದೇನೆ. ಕಾರ್ಯವನ್ನು ನಿಲ್ಲಿಸದವಕ್ಕಿಂತ ಹೊಸದಾಗಿ ಕೈಕೊಳ್ಳದಿರುವುದು ಹೆಚ್ಚು ಸುಲಭವಾಗಿರುವುದು. ತೃಪ್ತರಿಗೆ ಇಂದ್ರಿಯ ನಿಗ್ರಹವನ್ನು ಸುಲಭವಾಗಿ ಬೋಧಿಸಬಹುದೆಂಬುದು ತಪ್ಪಾಗಿರುವುದು. ಅದೇ ರೀತಿ ದುರ್ಬಲರಿಗೆ ಜಿತೇಂದ್ರಿಯತ್ವವನ್ನು ಬೋಧಿಸುವುದರಲ್ಲಿಯೂ ಅರ್ಥವಿಲ್ಲ. ನಾವು ಚಿಕ್ಕವರಿರಲಿ, ದೊಡ್ಡವರಿರಲಿ, ತೃಪ್ತರಿರಲಿ, ಅತೃಪ್ತರಿರಲಿ ಸದ್ಯಕ್ಕೆ ನಮ್ಮ ಗುಲಾಮಗಿರಿಗೆ ವಾರಸುದಾರರನ್ನು ತರುವುದನ್ನು ನಿಲ್ಲಿಸಬೇಕೆಂದೇ ನನ್ನ ಮತವಿರುವುದು.

ನಮ್ಮ ತಂದೆ ತಾಯಿಗಳು ಸಂಗಾತಿಗಳ ಹಕ್ಕುಗಳ ವಿವಾದದಲ್ಲಿ ತೊಡಗಬಾರದೆಂದು ನಾವು ಕೇಳಿಕೊಳ್ಳುವೆ. ಭೋಗಕ್ಕೆ ಸಮ್ಮತಿಬೇಕಾಗುವುದಲ್ಲದೇ ನಿಗ್ರಹಕ್ಕಲ್ಲ. ಇದು ಅತ್ಯಂತ ಸ್ಪಷ್ಟವಿರುವುದು.

(ಯ.ಇ., 13 ಅಕ್ಟೋಬರ್ 1920)

* * *

ಸಜೀವ ಸತ್ಯವಾದ ದೇವರಲ್ಲಿ ಸಂಪೂರ್ಣ ಶ್ರದ್ಧೆಯಿಲ್ಲದೇ ಜಿತೇಂದ್ರಿಯತ್ವವನ್ನು ಆಚರಿಸುವುದು ತುಂಬ ಕಠಿಣಸಾಧ್ಯವೆಂದು ನಾನು ಒಪ್ಪಿಕೊಳ್ಳುತ್ತೇನೆ. ಜೀವನದಲ್ಲಿ ದೇವರೇ ಇಲ್ಲವೆಂದು ಹೇಳುವುದು ಇಂದು ಒಂದು ಪ್ಯಾಶನ್ನೇ ಆಗಿರುವುದು. ಸಜೀವ ದೇವರಲ್ಲಿ ಸಂಪೂರ್ಣ ಶ್ರದ್ಧೆಯಿರಿಸದೇ ಉನ್ನತಮಟ್ಟದ ಜೀವನ ಸಾಧ್ಯವೆಂದು ಒತ್ತಿ ಹೇಳಲಾಗುತ್ತಿದೆ.

ತಮಗಿಂತಲೂ ಹೆಚ್ಚಿನದಾದ ಶಕ್ತಿಯಲ್ಲಿ ವಿಶ್ವಾಸವಿಲ್ಲದವರಿಗೆ ಈ ತತ್ವವನ್ನು ತಿಳಿಸಿ ಹೇಳುವದು ಕಠಿಣವೆಂದು ನಾನು ಒಪ್ಪಿಕೊಳ್ಳುತ್ತೇನೆ. ಇಡೀ ವಿಶ್ವವೇ ಆಜ್ಞೆಯನ್ನು ಪಾಲಿಸುತ್ತಿರುವ ಸಜೀವ ಶಾಸನದಲ್ಲಿ ಅಚಲ ವಿಶ್ವಾಸವಿರಿಸದೇ ಸಂಪೂರ್ಣ ಜೀವನವೆಂಬುದು ಅಸಾಧ್ಯವೆಂದು ನನ್ನ ಅನುಭವದಿಂದ ನಾನು ಪಡೆದುಕೊಂಡ ತಿಳುವಳಿಕೆಯಿರುವುದು. ಈ ಬಗೆಯ ಶ್ರದ್ಧೆಯಿಲ್ಲದೆ ಮನುಷ್ಯನು ಸಾಗರದಿಂದ ಹೊರಹಾಕಲ್ಪಟ್ಟ ಹನಿಯಂತೆ ವಿನಾಶ ಹೊಂದುವುದು ಖಂಡಿತ. ಸಾಗರದಲ್ಲಿರುವ ಪ್ರತಿಯೊಂದು ಹನಿಯೂ ಸಾಗರದ ವೈಭವದಲ್ಲಿ ಪಾಲುಗಾರನಾಗಿರುವುದು. ನಮ್ಮ ಜೀವನದ ಉಸಿರನ್ನು ಕೊಡುವ ಗೌರವವನ್ನು ಈ ಪ್ರತಿಯೊಂದು ಹನಿಯೂ ಪಡೆದಿರುವುದು.

(ಹ., 27 ಫೆಬ್ರುವರಿ 1936)

ಆತ್ಮನಿಗ್ರಹಕ್ಕೆ ಸಹಾಯಕವಾಗುವಂತಹದೇನೂ ನಮ್ಮ ಸಮಾಜದಲ್ಲಿ ಇಂದು ಇರುವದಿಲ್ಲ. ನಮ್ಮ ಬೆಳವಣಿಗೆಯೇ ಅದಕ್ಕೆ ವಿರೋಧಕವಾಗಿರುವುದು. ತಮ್ಮ ಮಕ್ಕಳ ಮದುವೆ ಮಾಡುವುದು ತಂದೆತಾಯಿಗಳ ಮೊದಲ ಕರ್ತವ್ಯವಾದಂತಾಗಿದೆ. ಬಾಲಿಕೆಯರಾಗಿದ್ದರಂತೂ ತಮಗೆ ಅನುಕೂಲವೆನಿಸುವ ವಯಸ್ಸಿನಲ್ಲಿ ಅವರ ನೈತಿಕ ಕಲ್ಯಾಣವನ್ನು ಅನುಲಕ್ಷಿಸದೇ ಅತಿ ಚಿಕ್ಕ ವಯಸ್ಸಿನಲ್ಲಿಯೆ ಮದುವೆಮಾಡಿಕೊಡುವುದುಂಟು. ವಿವಾಹ ಸಮಾರಂಭವು ಸುದೀರ್ಘವಾದ ಊಟೋಪಚಾರಗಳ ಹಾಗೂ ದುಂದುವೆಚ್ಚದ ಕಾರ್ಯಕ್ರಮವಾಗಿರುವುದು. ಕುಟುಂಬಜೀವಿಯ ಜೀವನವು ಬಿಡುವಿನ ದಿನಗಳನ್ನು ಹಬ್ಬಹರಿದಿನಗಳನ್ನು ವಿಷಯಸುಖದ ಜೀವನಕ್ಕೆ ಒಲಿಯುವಂತೆ ಏರ್ಪಡಿಸಲಾಗಿರುವುದು. ಜನತೆಗೆ ದೊರೆಯುವ ಸಾಹಿತ್ಯ ಪಾಶವೀಲಾಲಸೆಗೆ ಪ್ರೇರಕವಾಗಿರುವುದು. ಅತ್ಯಾಧುನಿಕ ಸಾಹಿತ್ಯವು ಭೋಗವು ಕರ್ತವ್ಯವೆಂದೂ ಅದರಿಂದ ಪರಾವೃತ್ತನಾಗುವುದು ಪಾಪವೆಂದೂ ಬೋಧಿಸುತ್ತದೆ.

ಲೈಂಗಿಕ ಹಸಿವಿನ ನಿಯಂತ್ರಣವು ಸಂಪೂರ್ಣ ಅಸಾಧ್ಯವೆನಿಸದಿದ್ದರೂ ಕಠಿಣವಾಗಿದೆ.

(ಹ., 21 ಮಾರ್ಚ್ 1936)

* * *

ಯುವಕನೆಂದಿಗೂ ನಿರಾಶೆಗೆಡಗೊಡಬಾರದು. ನಿಜವಾದ ಗುಣಕ್ಕೆ ಪ್ರತಿಫಲ ದೊರೆಯದೇ ಹೋಗದೆಂಬ ಆತ್ಮವಿಶ್ವಾಸ ಅವನಲ್ಲಿರಬೇಕು.

(ಯ.ಇ., 21 ಮೇ 1929)

* * *

ಮಾನವನು ತಪ್ಪುಮಾಡುವ ಸ್ವಭಾವದನಾಗಿರುವನು. ಅವನು ತನ್ನ ದಾರಿಯ ಬಗೆಗೆ ಎಂದೂ ಭರವಸೆಯುಳ್ಳವನಾಗಿರಲಾರನು.

(ಯು.ಇ., 25 ಸೆಪ್ಟೆಂಬರ್ 1924)

* * *

ಪರಿಸ್ಥಿತಿ ನಮಗೆ ತಲೆಬಾಗುವಂತೆ ಮಾಡುವಲ್ಲಿಯೇ ಪುರುಷತ್ವವು ವ್ಯಕ್ತವಾಗುವುದು. ಅದಕ್ಕನುಗುಣವಾಗಿ ನಡೆಯದವರು ನಾಶ ಹೊಂದುವರು. ತಾಳ್ಮೆಗೆಡಬೇಡಿರಿ, ದೈವ ಹಳಿಯಬೇಡಿರಿ, ಪರರನ್ನು ದೂಷಿಸಬೇಡಿರಿ ಎಂಬುದನ್ನು ಚೆನ್ನಾಗಿ ಅರಿತುಕೊಳ್ಳಿರಿ. ಸ್ವಸಹಾಯದ ಸಿದ್ಧಾಂತವನ್ನು ಅರಿತವರು ಅಯಶಸ್ವಿತೆಗೆ ತಮ್ಮನ್ನೇ ದೂಷಿಸಿಕೊಳ್ಳುವರು.

ಯೋಗ್ಯರೀತಿಯಲ್ಲಿ ಜೀವಿಸುವುದು, ವಿಚಾರಿಸುವುದು, ಹಾಗೂ ವರ್ತಿಸುವುದು ಜೀವನದ ನಿಜವಾದ ಉದ್ದೇಶವಾಗಿರುವುದು. ನಾವು ದೇಹದ ಬಗೆಗೆ ಮಾತ್ರ ವಿಚಾರಿಸತೊಡಗಿದಾಗ ಆತ್ಮವು ಕ್ಷೀಣಿಸುವುದು.

(ಹ., 27 ಫೆಬ್ರವರಿ 1936)

* * *

ಅಧಿಕಾರ

ಪ್ರಬಲವಾದ ಸರಕಾರದೊಂದಿಗೆ ನಾವು ಸೆಣಸುವಾಗ ನಮಗೆ ಎಲ್ಲ ಬಗೆಯ ದೈಹಿಕ, ಭೌತಿಕ, ನೈತಿಕ ಹಾಗೂ ಆಧ್ಯಾತ್ಮಿಕ ಶಕ್ತಿಯು ಬೇಕು. ಎಲ್ಲಕ್ಕಿಂತ ಹೆಚ್ಚು ಬೆಲೆ ತೆರಬೇಕಾದ ವಸ್ತುವಿನ ಬಗ್ಗೆ ನಾವು ಪ್ರಭುತ್ವ ಗಳಿಸದೇ ಅದು ನಮಗೆ ದೊರೆಯದು. ನಾವು ವೈಯಕ್ತಿಕ ಜೀವನದ ಶುದ್ಧಿಯಿಲ್ಲದೇ ಹೋದರೆ ಗುಲಾಮರ ರಾಷ್ಟ್ರವಾಗಿಯೇ ಉಳಿಯಬೇಕಾಗುವುದು. ಸರಕಾರಿ ಪದ್ಧತಿಯು ಅಕ್ರಮವಾಗಿರುವುದರಿಂದ ವೈಯಕ್ತಿಕ ಸದ್ಗುಣದ ವಿಷಯದಲ್ಲಿ ಇಂಗ್ಲಿಷರನ್ನು ನಿಂದಿಸಬೇಕೆಂಬ ಕಲ್ಪನೆಯಿಂದ ನಾವು ವಂಚಿತರಾಗಬಾರದು. ಸದ್ಗುಣಗಳನ್ನು ಅವರು ಆಧ್ಯಾತ್ಮಿಕವಾಗಿ ವ್ಯಕ್ತಪಡಿಸದಿದ್ದರೂ ದೈಹಿಕವಾಗಿ ಸಾಕಷ್ಟು ಪ್ರಮಾಣದಲ್ಲಿ ಪ್ರಕಟಿಸುವರು. ದೇಶದ ರಾಜಕೀಯ ಜೀವನದಲ್ಲಿ ನಿರತರಾದವರಲ್ಲಿ ಅವಿವಾಹಿತ ಸ್ತ್ರೀಪುರುಷರು ನಮ್ಮಲ್ಲಿಗಿಂತ ಹೆಚ್ಚಾಗಿರುವರು. ಅವಿವಾಹಿತ ಸ್ತ್ರೀಯರು ನಮ್ಮಲ್ಲಿ ಅತಿ ಕಡಿಮೆ. ಆದರೆ ಯುರೋಪದಲ್ಲಿ ಕೌಮಾರ್ಯವು ಸಾಮಾನ್ಯವಾದ ಸದ್ಗುಣವೆಂದು ಭಾವಿಸುವ ಜನರು ಅಸಂಖ್ಯರಿದ್ದಾರೆ.

ನನ್ನ ಹಾಗೂ ನನ್ನ ಅನೇಕ ಸಹಕಾರಿಗಳ ಅನುಭವಗಳನ್ನು ಆಧರಿಸಿ ರೂಪಿಸಿದ ಕೆಲ ಸದಾ ನಿಯಮಗಳನ್ನು ನಿಮ್ಮೆದುರು ಇರಿಸುವೆ.

(1) ಬಾಲ-ಬಾಲೆಯರನ್ನು ಸಾದಾ ಸ್ವಾಭಾವಿಕ ರೀತಿಯಲ್ಲಿ ತಾವು ನಿರ್ಮಲರಾಗಿ ಉಳಿಯುವೆವು ಎಂಬ ನಂಬುಗೆಯಿಂದ ಬೆಳೆಯುವಂತಿರಬೇಕು.

(2) ಕಾಮೋತ್ತೇಜಕ ಮತ್ತು ಉದ್ದೀಪಕ ಆಹಾರ ಸೇವನೆಯನ್ನು ಎಲ್ಲರೂ ತೊರೆಯಬೇಕು. ಮೆಣಸಿನಕಾಯಿ ಮೊದಲಾದ ಮಸಾಲೆ ಪದಾರ್ಥಗಳು, ಸಿಹಿ ತಿಂಡಿಗಳು, ಒಣಗಿದ ಪದಾರ್ಥಗಳನ್ನು ವರ್ಜಿಸಬೇಕು.

(3) ಪತಿ-ಪತ್ನಿಯರು ಪ್ರತ್ಯೇಕ ಕೋಣೆಗಳಲ್ಲಿ ವಾಸಿಸಬೇಕಲ್ಲದೆ ಏಕಾಂತವನ್ನು ತೊರೆಯಬೇಕು.

(4) ದೇಹ–ಮನಸ್ಸುಗಳೆರಡೂ ಸಂಪೂರ್ಣ ಆರೋಗ್ಯಕಾರಿಯಾಗಿರುವಂತೆ ನೋಡಿಕೊಳ್ಳಬೇಕು.

(5) ಬೇಗನೆ ಮಲಗಿ–ಬೇಗನೆ ಏಳುವದನ್ನು ಕಡ್ಡಾಯವಾಗಿ ಪಾಲಿಸಬೇಕು.

(6) ಅಶ್ಲೀಲ ಸಾಹಿತ್ಯವನ್ನೆಲ್ಲ ತೊರೆಯಬೇಕು. ಅಶ್ಲೀಲ ವಿಚಾರಗಳಿಗೆ ಶುದ್ಧ ವಿಚಾರಗಳೆಲ್ಲ ತಕ್ಕ ಪರಿಹಾರವಾಗುವದು.

(7) ಕಾಮೋದ್ದೀಪನಗೊಳಿಸುವ ಥಿಯೇಟರುಗಳು, ಸಿನೇಮಾಗಳು ಮೊದಲಾದವನ್ನು ವರ್ಜಿಸಬೇಕು.

(8) ರಾತ್ರಿಯ ಕನಸುಗಳು ಕಳವಳವುಂಟುಮಾಡಬೇಕಾಗಿಲ್ಲ. ಸುದೃಢ ಶರೀರದವರು ಇಂತಹ ಸಂದರ್ಭಗಳಲ್ಲಿ ಪ್ರತಿಸಲವೂ ತಣ್ಣೀರಿನ ಸ್ನಾನವನ್ನು ಮಾಡುವುದು ಅತ್ಯುತ್ತಮ ಪ್ರತಿಬಂಧಕ ಉಪಾಯವಾಗಿರುವುದು. ಅನೈಚ್ಛಿಕ ಕನಸುಗಳ ವಿರುದ್ಧ ಆಗಾಗ ಭೋಗದಲ್ಲಿ ತೊಡಗುವುದು ಸುರಕ್ಷಿತವಾದ ಉಪಾಯವೆಂದು ತಿಳಿಯುವುದು ತಪ್ಪು.

(9) ಆತ್ಮಸಂಯಮವು ಗಂಡಹೆಂಡಿರಿಗೂ ಕೂಡ ಅಸಾಧ್ಯವಾದುದೆಂದೂ, ಕಠಿಣವಾದುದೆಂದೂ ಯಾರೂ ತಿಳಿಯಬಾರದು. ತದ್ವಿರುದ್ಧ ಆತ್ಮನಿಗ್ರಹವು ಸಾಮಾನ್ಯ ಹಾಗೂ ಸ್ವಾಭಾವಿಕ ಜೀವನ ಪದ್ಧತಿಯೆಂದು ಬಗೆಯಬೇಕು.

(10) ಪ್ರತಿದಿನ ಅಂತಃಕರಣಪೂರ್ವಕವಾಗಿ ಶುದ್ಧಿಗಾಗಿ ಪ್ರಾರ್ಥನೆಯನ್ನು ಮಾಡುವುದರಿಂದ ಪ್ರಗತಿಪರವಾಗಿ ಶುದ್ಧಿಯನ್ನು ಸಾಧಿಸಬಹುದಾಗಿದೆ.

(ಯ.ಇ., 13 ಅಕ್ಟೋಬರ್ 1920)

* * *

ನಿಗ್ರಹದಿಂದ ಆರೋಗ್ಯವೆಂದಿಗೂ ಹಾಳಾಗದು. ಆರೋಗ್ಯ ಹಾಳಾಗುವುದು ನಿಗ್ರಹದಿಂದಲ್ಲ; ಹೊರಗಿನ ಇಚ್ಛೆಯನ್ನು ಅದುಮಿ ಹಿಡಿಯುವುದರಿಂದ. ನಿಜವಾಗಿಯೂ ಆತ್ಮನಿಗ್ರಹಿಯಾದವನು ದಿನದಿನಕ್ಕೆ ಶಕ್ತಿವಂತನಾಗಿ ಬೆಳೆಯುವನಲ್ಲದೇ ಹೆಚ್ಚೆಚ್ಚು ಶಾಂತಿಯನ್ನು ಪಡೆಯುತ್ತ ಹೋಗುವನು. ವಿಚಾರಗಳಲ್ಲಿ ಸಂಯಮವನ್ನು ಸಾಧಿಸುವದೇ ಆತ್ಮನಿಗ್ರಹದ ಮೊದಲನೆಯ ಹೆಜ್ಜೆಯಾಗಿರುವುದು.

(ಹ., 24 ಏಪ್ರಿಲ್ 1937)

ತೊಂದರೆಗಳು ಹೆಚ್ಚೆಚ್ಚು ಬಂದಂತೆ ನಮ್ಮ ಶ್ರದ್ಧೆಯೂ ಹೆಚ್ಚುತ್ತ ಹೋಗಬೇಕು.

(ಹ., 6 ಏಪ್ರಿಲ್ 1940)

* * *

ಪ್ರಯೋಜನಗಳ ಮಧ್ಯದಲ್ಲಿ ತರ್ಕವು ಹೇಳಹೆಸರಿಲ್ಲದಂತಾಗುವುದು. ಶ್ರದ್ಧೆ ಮಾತ್ರ ನಮ್ಮನ್ನು ರಕ್ಷಿಸಬಲ್ಲದು. ಕುಡಿತ ಹಾಗೂ ಸ್ವಚ್ಛಂದ ಪ್ರೀತಿಗಳಲ್ಲಿ ತೊಡಗುವವರ ಪಕ್ಷವನ್ನು ತರ್ಕವು ಹಿಡಿಯುವಂತೆ ಕಾಣುತ್ತದೆ. ಆದರೆ ಇಂತಹ ಸಂದರ್ಭದಲ್ಲಿ ಅದು ಮಸಳಿಸಿ ಹೋಗಿರುವುದು. ಅದು ಸ್ವಭಾವವನ್ನು ಅನುಸರಿಸುತ್ತದೆ. ವಕೀಲರು ತರ್ಕಗಳನ್ನು ಪರಸ್ಪರ ವಿರುದ್ಧ ದಿಸೆಯಲ್ಲಿ ಸರಿಯಾಗಿರುವಂತೆ ಮಾಡುವುದಿಲ್ಲವೆ? ಆದರೆ ಒಂದು ಪಕ್ಷವು ಇಲ್ಲವೇ ಎರಡೂ ಪಕ್ಷಗಳೂ ತಪ್ಪಿರಬಹುದು. ಅದಕ್ಕಾಗಿ ನೈತಿಕ ಸ್ಥಿತಿಯ ಸರಳತೆಯಲ್ಲಿ ಶ್ರದ್ಧೆಯಿರಿಸುವದೇ ತರ್ಕದ ದಾಳಿಯೆದುರಿಸುವ ಉತ್ತಮ ಉಪಾಯವಾಗಿರುವುದು.

(ದಿ ಗುಡ್ ಲೈಫ್)

* * *

ಸರ್ವಕಾಲದಲ್ಲೂ ಸಂಪೂರ್ಣ ನೀತಿಮತ್ತೆಯೆಂಬಂತಹದೇನೂ ಇಲ್ಲ. ಆದರೆ ಅಂಶತಃ ನೀತಿಮತ್ತೆಯಿದ್ದು ನಮ್ಮಂತಹ ಅಪಕ್ವ ಮಾನವರಿಗೆ ಅದೇ ಪರಿಪೂರ್ಣವೆನಿಸುವುದು. ಹೀಗೆ ಔಷಧೇತರ ಮಾದಕ ದ್ರವ್ಯಗಳನ್ನು ಸೇವಿಸುವುದು ಸಂಪೂರ್ಣ ಅನೈತಿಕವಾಗಿರುವುದು. ತನ್ನ ಪತ್ನಿಯನ್ನುಳಿದು ಇತರ ಸ್ತ್ರೀಯರನ್ನು ಕಾಮುಕ ದೃಷ್ಟಿಯಿಂದ ನೋಡುವುದು ಸಂಪೂರ್ಣ ತಪ್ಪಾಗಿರುವುದು. ಇವಕ್ಕೆಲ್ಲ ಪ್ರತಿವಾದಗಳನ್ನು ಹೂಡಲಾಗುತ್ತಿರುವುದು. ದೇವರ ಅಸ್ತಿತ್ವದ ವಿರುದ್ಧ ಸಹ ಈ ಪ್ರತಿವಾದಗಳಿರುವವು. ತರ್ಕವನ್ನು ಮೀರುವ ಶ್ರದ್ಧೆಯೇ ಈ ಎಲ್ಲ ಕಾಲದಲ್ಲಿಯೂ ನಮ್ಮ ಕಡಿವಾಣವಾಗಿರುವುದು. ನನ್ನ ಶ್ರದ್ಧೆ ಅನೇಕ ಸಲ ನನ್ನನ್ನು ರಕ್ಷಿಸಿರುವುದು. ಅನೇಕ ಮೋಸಗಳಿಂದ ರಕ್ಷಿಸುತ್ತಿರುವುದು. ಅದೆಂದೂ ನನ್ನನ್ನು ವಂಚಿಸಿಲ್ಲ. ಅದು ಎಂದಿಗೂ ಯಾರನ್ನೂ ವಂಚಿಸುವುದಿಲ್ಲ.

(ಹ., 23 ಡಿಸೆಂಬರ್ 1939)

* * *

ನಾನು ಅಚಲ ಆಶಾವಾದಿ. ನನ್ನ ಆಶಾವಾದವನ್ನು ಯಾರೂ ಅದುಮಿ ಹಿಡಿಯಲಾರರು. ಆದರೆ ಈ ಆಶಾವಾದ ನಿರ್ದಿಷ್ಟವಾದ ಸಂಗತಿಗಳನ್ನು ಆಧರಿಸಿರುವುದು.

(ಯ.ಇ., 23 ಅಕ್ಟೋಬರ್ 1924)

* * *

ಉಕ್ಕಿನಷ್ಟು ಸತ್ಯವಂತರೂ, ಕೊಟ್ಟ ವಚನವನ್ನು ಚಾಚೂ ತಪ್ಪದೇ ಪರಿಪಾಲಿಸುವವರೂ ಎಂದು ಜಗತ್ತು ತಿಳಿಯುವವರೆಗೆ ಯಾರಿಂದಲೂ ಮಹಾಕಾರ್ಯಗಳು ಸಾಧಿಸಲಾರವು; ಮಹಾರಾಷ್ಟ್ರದವರೆನಿಸಲಾರರು.

(ದಿ ಗುಡ್ ಲೈಫ್)

* * *

ಎಂತಹ ಪ್ರಸಂಗದಲ್ಲಿಯೂ ಕೊಟ್ಟ ವಚನವನ್ನು ಪರಿಪಾಲಿಸುವುದು ಅವಶ್ಯವೆಂದು ನಾನು ನಂಬಿದ್ದೇನೆ.

(ಯ.ಇ., 27 ಮಾರ್ಚ್ 1927)

* * *

ಉತ್ಸಾಹದ ಭರದಲ್ಲಿ ಮಾತುಗೊಟ್ಟು, ಕೆಲಕಾಲ ನಡೆಸಿದಂತೆ ಮಾಡಿ ಕೊನೆಗೆ ಎಲ್ಲವನ್ನೂ ಮರೆತುಬಿಡುವುದು ನಮ್ಮ ದೇಶದಲ್ಲಿ ಒಂದು ಚಟವೇ ಆದಂತಾಗಿರುವುದು.

(ಯ.ಇ., 7 ಜುಲೈ 1927)

* * *

ಎಲ್ಲಕ್ಕಿಂತಲೂ ಹೆಚ್ಚಾಗಿ ನೀವು ಶುದ್ಧವಾಗಿರಬೇಕು, ನಿರ್ಮಲರಾಗಿರಬೇಕು ಮತ್ತು ಜೀವನದ ಪರಿವೆಯಿಲ್ಲದೇ ಕೊಟ್ಟ ಮಾತನ್ನು ನಡೆಸುವುದನ್ನು ನೀವು ಕಲಿಯಬೇಕು.

(ಯ.ಇ., 10 ನವೆಂಬರ್ 1927)

* * *

ಕೊಟ್ಟ ಮಾತಿಗೆ ತಪ್ಪಿದವನು ಸತ್ಯವನ್ನೇ ಬಿಟ್ಟುಗೊಟ್ಟಂತೆ.

(ಯ.ಇ., 1 ಮೇ 1930)

* * *

ಮಾತುಗೊಟ್ಟು ತಪ್ಪಿಸುವದು ಕೊಟ್ಟ ಸಾಲ ನಿರಾಕರಿಸುವಂತಹ ದಿವಾಳಿಖೋರತನಕ್ಕಿಂತ ಕಡಿಮೆಯದೇನಲ್ಲ.

(ಹ., 22 ಏಪ್ರಿಲ್ 1939)

* * *

ನನಗೆ ತಿಳಿದಮಟ್ಟಿಗೆ ನನ್ನ ಇಡೀ ಸಾರ್ವಜನಿಕ ಜೀವನದಲ್ಲಿ ಮತ್ತು ಖಾಸಗಿ ಜೀವನದಲ್ಲಿ ನಾನೆಂದಿಗೂ ವಚನ ಭಂಗಿಸಿಲ್ಲ.

(ಹ., 22 ಏಪ್ರಿಲ್ 1939)

* * *

ಪ್ರತಿಜ್ಞೆಯು ಸಂಪೂರ್ಣ ಧಾರ್ಮಿಕ ಕೃತಿಯಾಗಿದ್ದು ಮನೋವಿಕಾರದ ಕಾಲಕ್ಕೆ ಕೈಕೊಳ್ಳುವಂತಹದಲ್ಲ. ಶುದ್ಧ ಮನಸ್ಸಿನಿಂದ ದೇವರ ಸಾಕ್ಷಿಯಾಗಿ ಪ್ರತಿಜ್ಞೆಯನ್ನು ಕೈಕೊಳ್ಳಬೇಕು.

(ದಿ ಗುಡ್ ಲೈಫ್)

* * *

ದೇವರಲ್ಲಿ ಅಪಾರ ಶ್ರದ್ಧೆಯಿದ್ದವನು ಹಾಗೂ ದೇವರಿಗೆ ಹೆದರುವವನು ಮಾತ್ರ ಮಹಾನಿರ್ಣಯವನ್ನು ಕೈಕೊಳ್ಳಬಲ್ಲನು.

(ಹ., 17 ಜುಲೈ 1937)

* * *

ಸದುದ್ದೇಶಕ್ಕಾಗಿ ಕೈಕೊಂಡ ಪ್ರತಿಜ್ಞೆ ಹಾಗೂ ಕೊಟ್ಟ ವಚನವನ್ನು ಮುರಿಯಬಾರದೆಂದು ನನ್ನ ಧರ್ಮವು ಕಲಿಸುತ್ತದೆ.

(ಯ.ಇ., 9 ಸೆಪ್ಟೆಂಬರ್ 1924)

* * *

ಮಾದಕದ ಪ್ರಭಾವದಲ್ಲಿ ಪ್ರತಿಜ್ಞೆಯನ್ನು ಕೈಕೊಳ್ಳುವದು ಅತಿ ಸುಲಭ. ಆದರೆ ಅದನ್ನು ವಿಶೇಷತಃ ಪ್ರಲೋಭನಗಳ ಮಧ್ಯದಲ್ಲಿ ಪಾಲಿಸುವುದು ಕಠಿಣಸಾಧ್ಯವಿರುವುದು.

(ಯ.ಇ., 1. ಅಕ್ಟೋಬರ್ 1925)

* * *

ಸಾಮಾನ್ಯ ಆತ್ಮತ್ಯಾಗದಿಂದ ಸಾಧ್ಯವಾಗದ ಕೃತಿಗಳು ಪ್ರತಿಜ್ಞೆಗಳ ಸಹಾಯದಿಂದ ಸಾಧ್ಯವಾಗುವವು. ಈ ಪ್ರತಿಜ್ಞೆಗಳಿಗೆ ಅಪೂರ್ವವಾದ ಆತ್ಮತ್ಯಾಗವು ಬೇಕಾಗುವುದು. ಆದ್ದರಿಂದಲೇ ಪ್ರತಿಜ್ಞೆಗಳಿಂದಲೇ ನಮ್ಮ ಉನ್ನತಿ ಸಾಧ್ಯವೆಂದು ನಂಬಲಾಗಿದೆ.

(ಯ.ಇ., 28 ಜನೇವರಿ 1919)

* * *

ಪ್ರತಿಜ್ಞೆ ಮಾಡಿ ಮುರಿಯುವದಕ್ಕಿಂತ ಪ್ರತಿಜ್ಞೆ ಕೈಕೊಳ್ಳದಿರುವುದೇ ಲೇಸು. ಪ್ರತಿಜ್ಞೆಗಳನ್ನು ಕೈಕೊಳ್ಳುವಾಗ ತೀರ ಎಚ್ಚರಿಕೆ ಅವಶ್ಯ. ಅನೇಕ ಜನರಿಗೆ ಪ್ರತಿಜ್ಞೆಗಳಿಗೆ ಅಂಟಿಕೊಳ್ಳುವ ಪ್ರಬಲ ಶಕ್ತಿ ಬೇಕು. ಅವು ಮಾನವನ ಚಾರಿತ್ರ್ಯವನ್ನು ರೂಪಿಸುವವು. ಅವು ಒಂದು ರೀತಿಯಲ್ಲಿ ಮಾನವನ ಚಂಚಲ ಸ್ವಭಾವದ ಮನ್ನಣೆಯಂತಿದ್ದು ಇನ್ನೊಂದು ರೀತಿಯಲ್ಲಿ ನಿಶ್ಚಲವಾದ ಮನಸ್ಸಿಗೆ ಹೆಚ್ಚಿನ ಸಹಾಯಕವಾಗಿರುವವು. ಮಿತಭೋಗದ ಪ್ರತಿಜ್ಞೆಗಳಿಂದಾಗುವ ಉತ್ತಮ ಪರಿಣಾಮವನ್ನು ಎಲ್ಲರೂ ಅರಿತಿರುವರು. ಆದರೆ ಈ ಬಗೆಯ ಪ್ರತಿಜ್ಞೆಗಳ ಬೆಂಬಲದಿಂದ ಅನೇಕರು ಕುಡಿತಕ್ಕೆ ಅಂಟಿಕೊಂಡಿದ್ದು ಉಂಟು. ಪ್ರತಿಜ್ಞೆಯು ನಿಶ್ಚಿತವಾಗಿದ್ದು ಯಾವುದಾದರೊಂದು ಸಂಗತಿಯನ್ನು ಮಾಡುವ ದೃಢನಿರ್ಧಾರವಾಗಿರುವುದು. ಈ ಬಗೆಯ ದೃಢನಿರ್ಧಾರವು ಯಾವುದಾದರೂ ಉದಾರ ಕಾರ್ಯಕ್ಕೆ ಸಂಬಂಧಿಸಿದ್ದರೆ ಈ ರೀತಿ ನಿರ್ಣಯ ಕೈಕೊಂಡವನ ಉನ್ನತಿ ಸಾಧಿಸುವುದು. ಈ ಸಂಬಂಧದಲ್ಲಿ ಉದಾಸೀನ ತಾಳಿದವರಿಗೆ ಉಳಿದ ಕೋನಗಳಿಗೆ ಸಮಕೋನವೆಂತು ಸಂಬಂಧಿಸಿರುವುದೋ ಹಾಗೇ ಸಂಬಂಧಿಸಿರುವುದು. ಸಮಕೋನವು ಅದೃಶ ಮತ್ತು ಸರಿಯಾದ ಪ್ರಮಾಣವನ್ನು ತಿಳಿಸುವಂತೆ ಬದಲಾಗದ ಮತ್ತು ಸರಿಯಾದ ಪ್ರಮಾಣವನ್ನು ಒದಗಿಸುವನು.

(ಯ.ಇ., 28 ಜೂನ್ 1919)

ನಮ್ಮಲ್ಲಿಯ ಬಲವಂತರಾದವರನೇಕರಿಗೆ ಪ್ರತಿಜ್ಞೆ ಇಲ್ಲವೇ ವಚನ ಅವಶ್ಯವೆಂದು ನನ್ನ ಹಾಗೂ ಇತರ ಅನೇಕರ ಅಭಿಪ್ರಾಯವಿರುವುದು. ಪ್ರತಿಜ್ಞೆಯು ಸಮಕೋನದಂತೆ ಪೂರ್ಣ 90 ಅಂಶಗಳಂತೆ ಇರುವುದು. ಅದರಲ್ಲಿ ಸ್ವಲ್ಪ ಹೆಚ್ಚುಕಡಿಮೆಯಾದರೂ ಸಮಕೋನ ಉಪಯೋಗಕ್ಕೆ ಬಾರದಂತೆ, ಸದುದ್ದೇಶವು ನಿರರ್ಥಕವಾಗುವುದು. ಸ್ವಯಂಪ್ರೇರಿತ ವಚನವು ಲಂಬಕ ರೇಖೆಯಂತೆ ಮನುಷ್ಯನನ್ನು ನೇರವಾಗಿಸುವುದು. ಅವನು ತಪ್ಪುದಾರಿ ಹಿಡಿದರೆ ಅವನಿಗೆ ಎಚ್ಚರಿಕೆಯನ್ನು ಕೊಡುವುದು. ಸಾಮಾನ್ಯವಾಗಿ ಅನ್ವಯವಾಗುವ ನಿಯಮಗಳು ವೈಯಕ್ತಿಕ ಪ್ರತಿಜ್ಞೆಯಲ್ಲಿ ಅದೇ ಉದ್ದೇಶವನ್ನು ಈಡೇರಿಸಲಾರವು. ಅಂತೆಯೇ ಎಲ್ಲ ದೊಡ್ಡ ಹಾಗೂ ಸುವ್ಯವಸ್ಥಿತ ಸಂಸ್ಥೆಗಳಲ್ಲಿ ಘೋಷಣ ಪದ್ಧತಿಯನ್ನು ಅನುಸರಿಸಲಾಗುತ್ತಿದೆ. ವೈಸರಾಯನು ಅಧಿಕಾರ ಸ್ವೀಕಾರದ ಪ್ರತಿಜ್ಞೆಯನ್ನು ಸ್ವೀಕರಿಸಬೇಕಾಗುವುದು. ಜಗತ್ತಿನಲ್ಲೆಲ್ಲ ವಿಧಾನಸಭಾಸದರು ಇದೇ ರೀತಿ ಪ್ರತಿಜ್ಞೆಯನ್ನು ಸ್ವೀಕರಿಸುವರು. ಇದು ಸರಿಯಾದುದೆಂದೇ ನನ್ನ ಅಭಿಪ್ರಾಯ. ಸೈನ್ಯ ಸೇರುವ ಸೈನಿಕರು ಸಹ ಇದೇ ರೀತಿ ಪ್ರತಿಜ್ಞಾಬದ್ಧರಾಗಬೇಕಾಗುವುದು. ಮೇಲಾಗಿ ಬರೆಹದಲ್ಲಿ ಕೊಟ್ಟ ವಚನವು ತಾನು ಕೊಟ್ಟ ವಚನವನ್ನು ಸದಾ ನೆನಪಿಗೆ ತಂದುಕೊಡುತ್ತದೆ. ಸ್ಮರಣೆಯು ಬಹು ಸೂಕ್ಷ್ಮವಾದುದಾಗಿದೆ. ಲಿಖಿತ ವಚನ ಸದಾಕಾಲ ನಿಲ್ಲುವುದು.

(ಯ.ಇ., 1 ಅಕ್ಟೋಬರ್ 1925)

* * *

ಅಧಿಕಾರವು ಎರಡು ಬಗೆಯದಾಗಿದೆ. ದಂಡನೆಯ ಭೀತಿಯಿಂದ ಬಂದುದು ಒಂದಾದರೆ ಪ್ರೀತಿಯಿಂದ ಬಂದುದು ಇನ್ನೊಂದು. ದಂಡನೆಯ ಭೀತಿಯಿಂದ ದೊರಕಿದ ಅಧಿಕಾರಕ್ಕಿಂತ ಪ್ರೀತಿಯಿಂದ ದೊರಕಿದ ಅಧಿಕಾರವು ಸಾವಿರಪಟ್ಟು ಪರಿಣಾಮಕಾರಿಯೂ ಮತ್ತು ಹೆಚ್ಚು ಶಾಶ್ವತವೂ ಆಗಿರುವುದು.

(ಯ.ಇ., 8 ಜನವರಿ 1925)

* * *

ಸೇವೆ

ದೇವರ ಲೆಕ್ಕದ ಪುಸ್ತಕದಲ್ಲಿ ನಮ್ಮ ಕೃತಿಗಳ ಉಲ್ಲೇಖವಿರುವುದಲ್ಲದೇ ನಾವೇನು ಓದಿರುವೆವೆಂಬುದಾಗಲಿ, ಮಾತನಾಡಿರುವೆವೆಂಬುದಾಗಲಿ ಇರುವುದಿಲ್ಲ.

(ಯ.ಇ., 7 ಜನವರಿ 1925)

* * *

ಪ್ರತಿಯೊಬ್ಬನೂ ತನಗೆ ಅರಿವಿಲ್ಲದಂತೆಯೇ ದೇವರಲ್ಲಿ ಶ್ರದ್ಧೆಯಿರಿಸಿರುವನು. ಪ್ರತಿಯೊಬ್ಬರಿಗೂ ತನ್ನಲ್ಲಿ ಶ್ರದ್ಧೆಯಿರುತ್ತದೆ. ಅದು 26 ಅಂಶದಷ್ಟು ಗುಣಿತವಾದರೆ ದೇವರಲ್ಲಿಯ ಶ್ರದ್ಧೆಯೆನಿಸುವುದು. ಎಲ್ಲ ಜೀವಿಗಳ ಲೆಕ್ಕವು ಸೇರಿ ದೈವತ್ವವೆನಿಸುವುದು. ನಾವೇ ದೇವರಾಗಿರಲಿಕ್ಕಿಲ್ಲ. ಒಂದು ಹನಿ ನೀರು ಸಾಗರಕ್ಕಾಗಿರುವಂತೆ ನಾವೆಲ್ಲ ದೈವೀ ಅಂಶದವರಾಗಿರುವೆವು. ಸಾಗರದಿಂದ ಒಂದು ಹನಿ ಸಿಡಿದು ಲಕ್ಷಾವಧಿ ಮೈಲಿನ ಮೇಲೆ ಹೋಗಿ ಬಿದ್ದಿತೆಂದು ತಿಳಿಯುವಾ. ಅದು ಸುತ್ತಮುತ್ತಲಿನ ವಾತಾವರಣದಿಂದ ಭಿನ್ನವಾಗಿ ಅಸಹಾಯಕವಾಗಿರುವುದು. ಸಾಗರದ ವೈಭವ ಮತ್ತು ಪ್ರಾಬಲ್ಯವನ್ನು ಅದು ಗಳಿಸಿಕೊಳ್ಳಲಾರದು. ಯಾರಾದರೂ ಅದಕ್ಕೆ ಸಾಗರದ್ದೆಂದು ತಿಳಿಸಿದರೆ ಅದರ ಶ್ರದ್ಧೆ ಮರಳುವುದು, ಸಂತೋಷದಿಂದ ಕುಣಿಯುವುದು. ಸಾಗರದ ಬಲ ಹಾಗೂ ವೈಭವವು ಅದರಲ್ಲಿ ಪ್ರತಿಬಿಂಬಿತವಾಗಿರುವುದು ಕಾಣುವುದು.

(ಹ., 3 ಜೂನ್ 1939)

* * *

ದೇವರು ಅತ್ಯಂತ ನಿರ್ದಯನಾದ ವ್ಯವಸ್ಥಾಪಕನಾಗಿರುವನು. ಅವನು ಸಾದಾ ಕೆಲಸದಿಂದ ಎಂದಿಗೂ ತೃಪ್ತಿಗೊಳ್ಳಲಾರನು. ಅವರ ಕಾರಖಾನೆಗಳು ತೀರ ಸಾವಧಾನವಾಗಿದ್ದರೂ ನಿಶ್ಚಿತವಾಗಿ ಕೆಲಸ ಕೊಡುವುವು. ಅವನಿಗೆ ಅವಸರದ ಕೆಲಸ ಬೇಡ. ಅತಿ ನಿರ್ಮಲವಾದ ತ್ಯಾಗವನ್ನು ಅವನು ಬಯಸುತ್ತಾನೆ. ನಾನು ಮತ್ತು ನೀವು ಎಲ್ಲರೂ ಅವನನ್ನು ಪ್ರಾರ್ಥಿಸುವಲ್ಲಿ ಅವಿರತ ಶ್ರಮಿಸಬೇಕು. ಅವನ ಅನುಗ್ರಹವಿರುವವರೆಗೆ ಜೀವನವನ್ನು ಚೆನ್ನಾಗಿ ಕಳೆಯಬೇಕು.

(ಯ.ಇ., 22 ಸೆಪ್ಟೆಂಬರ್ 1927)

ಪ್ರಾರ್ಥನೆಯು ನಮ್ಮ ಅಸಹಾಯಕತೆಯ ಸಾಧನೆಯ ಪರಿಣಮವಾಗಿರುವುದು. ಎಲ್ಲವನ್ನು ಹೊರತುಪಡಿಸಿ ದೇವರ ಮೇಲೆ ಸಂಪೂರ್ಣ ನಂಬಿಗೆಯಿರಿಸಿದ್ದರೆ ದ್ಯೋತಕವಿದಾಗಿರುವುದು.

(ಯ.ಇ., 25 ನವೆಂಬರ್ 1926)

* * *

ಚಿಂತನೆಯಿಂದ ದೇಹವು ಮುಪ್ಪಾಗುವಷ್ಟು ಬೇರಾವುದರಿಂದಲೂ ಆಗಲಾರದು. ದೇವರಲ್ಲಿ ವಿಶ್ವಾಸವುಳ್ಳವನು ಯಾವುದೇ ಸಂಗತಿಯಿರಲಿ ಅದರ ಬಗೆಗೆ ಚಿಂತಿಸಲು ನಾಚಿಕೆಪಟ್ಟುಕೊಳ್ಳಬೇಕು. ದೇವರಲ್ಲಿ ಅನೇಕರು ಇರಿಸಿದ ವಿಶ್ವಾಸವು ಬೌದ್ಧಿಕವಾಗಿರಬಹುದು; ಅಂಧಶ್ರದ್ಧೆಯಿಂದಾಗಿರಬಹುದು ಇಲ್ಲವೇ ಇಂತಹದೆಂದು ಹೇಳಲು ಬಾರದಂತಿರಬಹುದು. ಈ ಸಾಮಾನ್ಯವಾದ ಕಾರಣದಿಂದಾಗಿ ಮೇಲಿನ ನಿಯಮವು ಕಠಿಣಪ್ರದವಾಗಿರುವುದು. ಚಿಂತೆಯಿಂದ ಸಂಪೂರ್ಣ ಮುಕ್ತರಾಗಿರಬೇಕಾದರೆ ನಿಶ್ಚಲವಾದ, ಸಾವಧಾನವಾದ ಅಗೋಚರವಾದ ಶ್ರದ್ಧೆ ಬೇಕು; ಭಾವಪೂರ್ಣ ಪ್ರಾರ್ಥನೆಯ ಕಾಲಕ್ಕೆ ಹೊರಬೀಳುವ ಆನಂದಾಶ್ರುಗಳಿಂದ ನೀರು ಹನಿಸಿ ಅದನ್ನು ಬೆಳೆಯಿಸಬೇಕು. ಇವು ಪ್ರೇಮಿಯ ಕಣ್ಣೀರು ಆಗಿದ್ದು ಪ್ರೇಮಲವಸ್ತುವಿನಿಂದ ಒಂದು ಕ್ಷಣವೂ ಅಗಲಿರಲಾರದಂತಹ ಪ್ರೇಮಿಯವನು. ಅಥವಾ ತನ್ನಲ್ಲಿಯ ಯಾವುದೋ ಅಶುದ್ಧವಾದ ಭಾವನೆಯಿಂದ ಪ್ರೇಮಲ ವಸ್ತುವಿನಿಂದ ದೂರವಿರಬೇಕಾಗಿದೆಯೆಂದು ಪಶ್ಚಾತ್ತಾಪದಗ್ಧನಾದವನ ಕಣ್ಣೀರು ಅವು ಆಗಿರಬೇಕು.

(ಹ., 17 ಅಕ್ಟೋಬರ್ 1937)

* * *

ಮೌಲ್ಯಗಳು ತ್ವರಿತವಾಗಿ ಬದಲಾಗುತ್ತಿರುವ ಕಾಲದಲ್ಲಿ ನಾವು ಜೀವಿಸಿರುವೆವು. ಸಾವಧಾನದ ಪರಿಣಾಮಗಳಿಂದ ನಮಗೆ ತೃಪ್ತಿಯಿಲ್ಲ. ನಮ್ಮ ಬಾಂಧವರ ಹಿತಚಿಂತನೆಯಿಂದ ಮಾತ್ರ ನಮ್ಮ ದೇಶದ ಕಲ್ಯಾಣಚಿಂತನೆಯಿಂದ ಮಾತ್ರ ನಾವು ಇಂದು ತೃಪ್ತರಾಗುವುದಿಲ್ಲ. ಇಡೀ ಮಾನವ ವರ್ಗದ ಬಗೆಗೆ ನಾವು ವಿಚಾರಿಸುವೆವು, ವಿಚಾರಿಸಬಯಸುವೆವು. ಇದೆಲ್ಲವೂ ಮಾನವೀಯತೆ ತನ್ನ ಗುರಿಯನ್ನು ಸಾಧಿಸುವತ್ತ ಆಗಿರುವ ವಿಶೇಷವಾದ ಪ್ರಗತಿಯಂತೆನ್ನಬೇಕು.

ನಾವು ತಾಳ್ಮೆಗೆಡುವದರಿಂದ ಮತ್ತು ಹಳೆಯದನ್ನು ಕೇವಲ ಅದು ಹಳೆಯದೆಂದು ನಿರಾಕರಿಸುವುದರಿಂದ ಮಾನವನ ಅನಿಷ್ಟಗಳಿಗೆ ಪರಿಹಾರವನ್ನು ಕಂಡುಹಿಡಿಯಲಾರೆವು. ನಮ್ಮ ಪೂರ್ವಜರೂ ಸಹ ನಮ್ಮಲ್ಲಿ ಉತ್ಸಾಹವುಂಟುಮಾಡುತ್ತಿರುವ ಇಂತಹ ಕನಸುಗಳನ್ನೇ ಕಂಡಿದ್ದರು. ಈ ಬಗೆಯ ಅನಿಷ್ಟಗಳಿಗೆ ಅವರು ಉಪಯೋಗಿಸಿದ ಪರಿಹಾರಗಳನ್ನು ನಿರೀಕ್ಷೆಮೀರಿ ಬೆಳೆದ ದಿಗಂತಕ್ಕೂ ನಾವು ಅನ್ವಯಿಸಬಹುದಾಗಿದೆ.

ಸತ್ಯ ಹಾಗೂ ಅಹಿಂಸೆಗಳು ಆರಿಸಿದ ಕೆಲವೇ ಜನರ ಉಪಯೋಗಕ್ಕಿರದೇ ಇಡೀ ಮಾನವ ವರ್ಗವೇ ದೈನಿಕ ಜೀವನದಲ್ಲಿ ಉಪಯೋಗಿಸಬಹುದೆಂದು ನನ್ನ ಅನುಭವದ ನುಡಿಯಾಗಿರುವುದು. ಅದೇ ರೀತಿ ಆತ್ಮನಿಗ್ರಹವೂ ಸಹ ಕೆಲವೊಂದು ಮಹಾತ್ಮರಿಗಾಗಿರದೇ ಇಡೀ ಮಾನವಕುಲಕ್ಕಾಗಿರುವುದು. ಅನೇಕರು ಅಸತ್ಯವಾದಿಗಳೂ ಹಿಂಸಾಚಾರಿಗಳೂ ಆದ ಮಾತ್ರಕ್ಕೆ ಮಾನವೀಯತೆ ತನ್ನ ಮಟ್ಟವನ್ನು ಕಡಿಮೆ ಮಾಡದಂತೆ ಆತ್ಮನಿಗ್ರಹದ ಸಂದೇಶಕ್ಕೆ ಬಹುಸಂಖ್ಯಾಕರು ಓಗೊಡದಿದ್ದರೂ ಅಡ್ಡಿಯಿಲ್ಲ, ನಾವು ಅದರ ಮಟ್ಟವನ್ನು ಕೆಳಗಿಳಿಸಬಾರದು.

ಎಂತಹ ಕಠಿಣ ಪ್ರಕರಣದಲ್ಲಿಯೂ ನ್ಯಾಯಾಧೀಶನು ತಪ್ಪು ನಿರ್ಣಯವನ್ನು ಕೊಡಲಾರನು. ಕೆಟ್ಟ ರೀತಿಯಲ್ಲಿ ಕಾಯ್ದೆ ಉಪಯೋಗಿಸುವಂತೆ ಅನುವು ಕೊಡುವಲ್ಲಿ ದಯೆಯಿಲ್ಲವೆಂದು ಅವನು ತಿಳಿದಿರುವುದರಿಂದ ಅಂತಹ ಪ್ರಸಂಗದಲ್ಲಿ ಹೃದಯವನ್ನು ಕಲ್ಲಾಗಿಸಿಕೊಳ್ಳುವನು.

ನಾಶಹೊಂದುವ ದೇಹ-ಮಾಂಸಗಳ ದುರ್ಬಲತೆಯನ್ನು ಅದರಲ್ಲಿ ಹುದುಗಿದ ಅವಿನಾಶಿಯಾದ ಆತ್ಮಕ್ಕೆ ನಾವು ಅನ್ವಯಿಸಲಾರೆವು. ಆತ್ಮವನ್ನು ಮುನ್ನಡೆಸುವ ಕಟ್ಟಳೆಯ ಬೆಳಕಿನಲ್ಲಿ ಶರೀರವನ್ನು ನಾವು ನಿಯಮನಗೊಳಿಸಬೇಕು. ಈ ಕಟ್ಟಳೆಗಳು ಕಡಿಮೆಯಿದ್ದು ಬದಲಾಗದಂತಹವಿರುವವು. ಇಡೀ ಮಾನವ ಕುಲವು ಅವನ್ನು ತಿಳಿದು ಅನುಸರಿಸಬಹುದೆಂದು ನನ್ನ ನಮ್ರ ಅಭಿಪ್ರಾಯವಾಗಿರುವುದು. ನಮ್ಮಲ್ಲಿ ಶ್ರದ್ಧೆಯಿದ್ದರೆ ನಮಗೆ ಸೋಲೆಂಬುದಿಲ್ಲ. ಮಾನವೀಯತೆ ತನ್ನ ಗುರಿಯನ್ನು ಅರಿಯಲು ಇಲ್ಲವೇ ಸಮೀಪಿಸಲು ಲಕ್ಷಾವಧಿ ವರ್ಷಗಳು ಬೇಕಾಗಬಹುದು. ಇಷ್ಟೇ! ಜವಹರಲಾಲರ ಭಾಷೆಯಲ್ಲಿ ಹೇಳುವದಾದರೆ ನಮಗೆ ಯೋಗ್ಯ ತತ್ವವಿರಿಸಿಕೊಳ್ಳೋಣ; ಸಾಕು.

(ಹ., 30 ಮೇ 1936)

ವರದಕ್ಷಿಣೆಯನ್ನು ವಿವಾಹದ ಕರಾರಾಗಿ ಮಾಡುವ ಯಾವುದೇ ಯುವಕನು ತನ್ನ ಶಿಕ್ಷಣಕ್ಕೆ ಹಾಗೂ ದೇಶಕ್ಕೆ ಅಪಕೀರ್ತಿಯನ್ನು ತರುವನಲ್ಲದೇ ಸ್ತ್ರೀತ್ವವನ್ನು ಅಗೌರವಿಸುವನು.

ವರದಕ್ಷಿಣೆಯ ಕೆಟ್ಟ ಪದ್ಧತಿಯ ವಿರುದ್ಧ ಬಲವಾದ ಸಾರ್ವಜನಿಕಾಭಿಪ್ರಾಯವನ್ನುಂಟು ಮಾಡಬೇಕು. ವರದಕ್ಷಿಣೆಯನ್ನು ಪಡೆದುಕೊಂಡ ಯುವಕನನ್ನು ಸಮಾಜದಿಂದ ಬಹಿಷ್ಕರಿಸಬೇಕು. ತಂದೆತಾಯಿಗಳು ಇಂಗ್ಲಿಷ್ ಪದವಿಗಳಿಗೆ ಮರುಳಾಗದೇ ತಮ್ಮ ಜಾತಿಯ ಹೊರಗಾದರೂ ಅಡ್ಡಿಯಿಲ್ಲ, ಪ್ರಾಂತಗಳ, ಹೊರಗಾದರೂ ಅಡ್ಡಿಯಿಲ್ಲ, ಯೋಗ್ಯ ಯುವಕರನ್ನು ಹುಡುಕಿ ತಮ್ಮ ಹೆಣ್ಣುಮಕ್ಕಳನ್ನು ಮದುವೆ ಮಾಡಿಕೊಡಬೇಕು.

(ಯ.ಇ., 21 ಜೂನ್ 1928)

* * *

ಇಂದಿನ ವಿವಾಹ ಪದ್ಧತಿ ಅಳಿಯಬೇಕಾಗಿದೆ. ತಂದೆ ತಾಯಿಗಳು ಹಣದ ವ್ಯವಸ್ಥೆಗಾಗಿ ಮಾಡುವ ಪದ್ಧತಿಯಾಗಿ ವಿವಾಹವು ನಡೆಯಬೇಕಾಗಿಲ್ಲ. ಇಂದು ವಿವಾಹವು ಜಾತಿ ಪದ್ಧತಿಗೆ ನಿಕಟವಾಗಿ ಸಂಬಂಧಿಸಿದೆ. ಆಯ್ಕೆಯು ವಿಶಿಷ್ಟ ಜಾತಿಯ ಕೆಲವೇ ಯುವಕ-ಯುವತಿಯರಿಗೆ ಸಂಬಂಧಿಸಿರುವಾಗ ಅದರ ವಿರುದ್ಧ ಏನೇ ಹೇಳಿದರೂ ಅದು ನಡೆದೇ ನಡೆಯುತ್ತದೆ. ಈ ಅನಿಷ್ಟವನ್ನು ನಿವಾರಿಸಬೇಕಾದರೆ ಯುವಕ-ಯುವತಿಯರು ತಂದೆತಾಯಿಗಳು ಜಾತೀಯ ಕಟ್ಟಳೆಯನ್ನು ಮುರಿಯಬೇಕಾಗುವುದು. ಆಗ ವಿವಾಹದ ವಯಸ್ಸನ್ನು ಹೆಚ್ಚಿಸಬೇಕಾಗುವುದು. ಯುವತಿಯರು ಯೋಗ್ಯ ಸಂಬಂಧ ದೊರೆಯದೇ ಅಗತ್ಯವೆನಿಸಿದಲ್ಲಿ ಕುಮಾರಿಯರಾಗಿ ಉಳಿಯಲು ಧೈರ್ಯ ಮಾಡಬೇಕಾಗುವುದು. ಇದೆಲ್ಲಕ್ಕೂ ಚಾರಿತ್ರ್ಯದ ಶಿಕ್ಷಣ ಬೇಕು. ಅದರಿಂದ ದೇಶದ ಯುವಕರಲ್ಲಿ ಮಾನಸಿಕ ಕ್ರಾಂತಿಯಾಗುವಂತಿರಬೇಕು. ಆದರೆ ದುರ್ದೈವದಿಂದ ನಮ್ಮ ಶಿಕ್ಷಣ ಪದ್ಧತಿಗೂ ಸುತ್ತಮುತ್ತಲಿನ ವಾತಾವರಣಕ್ಕೂ ಯಾವುದೇ ಸಂಬಂಧವೇ ಇರುವದಿಲ್ಲ. ಹೀಗಾಗಿ ಶಿಕ್ಷಣ ಪಡೆಯುವ ನಮ್ಮ ದೇಶದ ಅತಿ ಕೆಲವೇ ಯುವಕ-ಯುವತಿಯರು ಅದರ ಪ್ರಯೋಜನವನ್ನು ಪ್ರತ್ಯಕ್ಷವಾಗಿ ಮಾಡಿಕೊಳ್ಳುವುದಿಲ್ಲ. ಈ ಅನಿಷ್ಟವನ್ನು ನಿವಾರಿಸಲು

ಮಾಡಬೇಕಾದುದನ್ನು ಮಾಡುವವರ ಜೊತೆಗೆ ದೇಶದಲ್ಲಿಯ ತೀವ್ರವಾಗಿ ಬದಲಾಗುತ್ತಿರುವ ಪರಿಸ್ಥಿತಿಗನುಗುಣವಾದ ಶಿಕ್ಷಣ ಪದ್ಧತಿ ಏರ್ಪಡಿಸಿದರೆ ಈ ಅಲ್ಲದೇ ಮತ್ತಿತರ ಅನಿಷ್ಟಗಳನ್ನು ಸಹ ಪರಿಹರಿಸಬಹುದಾಗಿದೆ. ಕಾಲೇಜುಗಳಿಂದ ಹೊರಬೀಳುವ ಅನೇಕ ಯುವಕ-ಯುವತಿಯರು ತಮ್ಮ ಭಾವೀಜೀವನಕ್ಕೆ ನಿಕಟವಾಗಿ ಸಂಬಂಧಿಸಿದ ವಿವಾಹದಲ್ಲಿಯ ಈ ಅನಿಷ್ಟ ಪದ್ಧತಿಯನ್ನು ನಿರೋಧಿಸಲು ಅಸಮರ್ಥರಾಗಿರುವುದು ಇಲ್ಲವೇ ಒಪ್ಪದಿರುವುದು ಕಂಡುಬರುತ್ತಿದ್ದು, ಇದೇಕೆಂಬುದು ಸ್ಪಷ್ಟವಿಲ್ಲ. ಸುಶಿಕ್ಷಿತ ಯುವತಿಯರು ಯೋಗ್ಯ ಸಂಗಾತಿ ದೊರೆಯದೇ ಹೋದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವರೇಕೆ? ನೈತಿಕವಾಗಿ ಅಯೋಗ್ಯವೆನಿಸಿದ ಮತ್ತು ಯಾವದೇ ಆಧಾರಗಳಿಲ್ಲದಿರುವ ಈ ಅನಿಷ್ಟ ಪದ್ಧತಿಯನ್ನು ಉಲ್ಲಂಘಿಸುವ ಧೈರ್ಯವಿಲ್ಲದಿದ್ದರೆ ಅವರ ಶಿಕ್ಷಣಕ್ಕೆ ಯಾವ ಬೆಲೆಯಿದೆ! ಇದಕ್ಕೆ ಉತ್ತರ ಸ್ಪಷ್ಟವೇ ಇದೆ. ಸಾಮಾಜಿಕ ಹಾಗೂ ಮತ್ತಿತರ ಅನಿಷ್ಟಗಳನ್ನು ಪರಿಹರಿಸಲು ನಮ್ಮ ಯುವಕ-ಯುವತಿಯರನ್ನು ಸಜ್ಜುಗೊಳಿಸುವಂತಹದೇನೂ ನಮ್ಮ ಶಿಕ್ಷಣ ಪದ್ಧತಿಯಲ್ಲಿರುವುದಿಲ್ಲ. ವಿದ್ಯಾರ್ಥಿಗಳಲ್ಲಿ ಹುದುಗಿದ ಶಕ್ತಿಗಳನ್ನು ಹೊರತಂದು ಜೀವನದಲ್ಲಿಯ ಸಮಸ್ಯೆಗಳನ್ನು ಸರಿಯಾಗಿ ಪರಿಹರಿಸಲು ಅವರನ್ನು ಸಮರ್ಥರನ್ನಾಗಿಸುವುದೇ ಉಪಯುಕ್ತವಾದ ಶಿಕ್ಷಣವಾಗಿದೆ.

(ಹ., 23 ಮೇ 1936)

* * *

ಮಾನವನು ಕ್ಷುಲ್ಲಕ ವಸ್ತು. ನೇಪೋಲಿಯನ್ನನು ಬಹಳ ದೊಡ್ಡ ದೊಡ್ಡದನ್ನು ಯೋಜಿಸಿದ. ಆದರೆ ಸೆಂಟಹೆಲೆನಾದಲ್ಲಿ ತಾನು ಖೈದಿಯಾಗಿ ಸಿಕ್ಕಿಬಿದ್ದ. ಮಹಾಚಕ್ರವರ್ತಿ ಯುರೋಪದ ಸಾಮ್ರಾಟನಾಗಬೇಕೆಂದು ಬಯಸಿದ. ಆದರೆ ಸಾಮಾನ್ಯ ನಾಗರಿಕನಾಗಿ ಜೀವಿಸಬೇಕಾಯಿತು. ದೇವರ ಇಚ್ಛೆಯೇ ಹಾಗಿತ್ತು. ನಾವು ಈ ಎಲ್ಲ ಉದಾಹರಣೆಗಳನ್ನು ನೋಡಿಕೊಂಡು ನಮ್ರವಾಗಿ ವರ್ತಿಸಬೇಕು.

(ಯ.ಇ., 9 ಅಕ್ಟೋಬರ್ 1924)

* * *

ದೇವರು ತಾನು ದಯೆ ತೋರಬಯಸಿದವರನ್ನು ಮೊದಲಿಗೆ ಬಹಳಷ್ಟು ಪರೀಕ್ಷಿಸುವನು.

(ಯ.ಇ., 11 ಜೂನ್ 1931)

ಪರಿಣಾಮಕಾರಿಯಾಗಿರಬೇಕಾದರೆ ಸಮಾಜಸೇವೆಯನ್ನು ಗದ್ದಲವಿಲ್ಲದೇ ಮಾಡಬೇಕು. ಬಲಗೈಮಾಡಿದ ಕಾರ್ಯ ಎಡಗೈಗೂ ತಿಳಿಯದಿರುವಾಗ ಆ ಕಾರ್ಯ ಚೆನ್ನಾಗಿ ನೆರವೇರಿರುವುದು.

ಅಸ್ಪೃಶ್ಯರೆಂದು ಹೇಳಲಾಗುವ ಜನರ ಸೇವೆಯು ಯಾವ ದೃಷ್ಟಿಯಿಂದಲೂ ರಾಜಕೀಯ ಕಾರ್ಯಕ್ಕಿಂತ ಕಡಿಮೆಯದಾಗಿಲ್ಲವೆಂದು ನಾನು ಹೇಳುತ್ತೇನೆ. ಕೆಲ ಹೊತ್ತಿನ ಪೂರ್ವದಲ್ಲಿ ಇಬ್ಬರು ಮಿಶನರಿ ಸ್ನೇಹಿತರು ಇವೆರಡರಲ್ಲಿ ಕೆಲಮಟ್ಟಿಗೆ ಭೇದವೆಣಿಸಿದ್ದರಿಂದ ನನ್ನಿಂದ ಖಂಡನೆಗೊಳಗಾದರು. ನನ್ನ ಸಾಮಾಜಿಕ ಸುಧಾರಣೆಯ ಕಾರ್ಯವು ಯಾವುದೇ ರಾಜಕೀಯ ಕಾರ್ಯಕ್ಕಿಂತ ಕಡಿಮೆಯದಾಗಲಿ, ಕೆಳ ತರಗತಿಯದಾಗಲಿ ಅಲ್ಲವೆಂದು ನಾನವರಿಗೆ ತಿಳಿಸಿದೆ. ರಾಜಕೀಯ ಕಾರ್ಯದ ಸಹಾಯವಿಲ್ಲದೇ ನನ್ನ ಸಾಮಾಜಿಕ ಕಾರ್ಯ ಕೆಲಮಟ್ಟಿಗೆ ಅಸಾಧ್ಯವೆಂದು ನನಗೆ ಕಂಡುಬಂದ ಕೂಡಲೇ ಅಷ್ಟರಮಟ್ಟಿಗೆ ರಾಜಕೀಯ ಕಾರ್ಯದ ನೆರವನ್ನು ನಾನು ಪಡೆದೆ. ಈ ಬಗೆಯ ಸಮಾಜ ಸುಧಾರಣೆಯ ಇಲ್ಲವೇ ಅತ್ಮಶುದ್ಧೀಕರಣದ ಕಾರ್ಯವು ಶುದ್ಧ ರಾಜಕೀಯ ಕಾರ್ಯಕ್ಕಿಂತ ನೂರಾರುಪಟ್ಟು ನನಗೆ ಪ್ರಿಯವಾದುದೆಂದು ನಾನು ಒಪ್ಪಿಕೊಳ್ಳುವೆ.

* * *

ಸುಖ-ಸಂತೋಷಗಳಿಲ್ಲದೇ ಮಾಡಿದ ಸೇವೆಯು ಸೇವಕನಿಗೂ ಸೇವ್ಯನಿಗೂ ಉಪಯುಕ್ತವಿರುವದಿಲ್ಲ. ಆದರೆ ಸಂತೋಷದಿಂದ ಸಲ್ಲಿಸಿದ ಸೇವೆಯಲ್ಲಿ ಎಲ್ಲವೂ ಅಡಗಿರುತ್ತದೆ, ಉಪಯುಕ್ತವೆನಿಸುತ್ತದೆ. ಅದರೆದುರು ಸ್ಥಾನಮಾನಗಳು, ಸುಖವು ಮಹತ್ವದ್ದೆನಿಸುವುದಿಲ್ಲ.

* * *

ಸೇವೆಯೆಂದರೆ ನಾಯಿಕೊಡೆ ಬೆಳೆದಂತಲ್ಲ. ಅದಕ್ಕೆ ಪೂರ್ವಭಾವಿಯಾಗಿ ಮನಸ್ಸು ಬೇಕು; ನಂತರ ಅನುಭವ ಬೇಕು.

(ಮಾಯ್ ಎಕ್ಸಪೆರಿಮೆಂಟ್ಸ ವಿಥ್ ಟ್ರುಥ್)

* * *

ಸೇವೆಗಾಗಿಯೇ ಸೇವೆ ಮಾಡುವದೇ ಅತ್ಯಂತ ಉದಾತ್ತವಾದ ಸೇವೆ ಎನಿಸುವುದು.

(ಯ.ಇ., 24 ಫೆಬ್ರವರಿ 1925)

* * *

ನಿಜವಾದ ಪ್ರೀತಿ ವ್ಯಕ್ತವಾಗುವುದು ಹೊಗಳಿಕೆಯಿಂದಲ್ಲ, ಸೇವೆಯ ಮುಖಾಂತರ. ಆತ್ಮ ಶುದ್ಧೀಕರಣವು ನಿಜವಾದ ಸೇವೆಯ ಪ್ರಾಸ್ತಾವಿಕ ವಿಧಾನವಾಗಿರುವುದು ಅವಶ್ಯಕ ಸಂಗತಿಯಾಗಿರುವುದು.

(ಯ.ಇ., 20 ಸೆಪ್ಟೆಂಬರ್ 1928)

* * *

ಸುಖ-ಸಂತೋಷ ; ಗೌರವ

ನಾನು ಚೆನ್ನಾಗಿ ತಿಳಿದ ಸುದ್ದಿಗಾರನೊಬ್ಬನು ಪ್ರಶ್ನೆಯೊಂದನ್ನೆತ್ತಿದ್ದು ಅವನು ಮುಂದೆ ಮಾಡಿದ ಅಭಿಪ್ರಾಯಗಳು ಅವನವಲ್ಲವಾದ್ದರಿಂದ ಅವನ್ನು ಪ್ರಾಸಂಗಿಕ ದೃಷ್ಟಿಯಿಂದ ಇಲ್ಲಿ ವಿಚಾರಿಸುವೆ.

"ಇಂದಿನ ನಮ್ಮ ನೀತಿಮತ್ತೆಯು ಅಸ್ವಾಭಾವಿಕವಲ್ಲವೇ? ಅದು ಸ್ವಾಭಾವಿಕವಾಗಿದ್ದರೆ ಎಲ್ಲ ಕಡೆಗೂ ಎಲ್ಲ ಕಾಲಕ್ಕೂ ಒಂದೇ ಇರಬೇಕಾಗಿದ್ದಿತು. ಆದರೆ ಪ್ರತಿಯೊಂದು ಜನಾಂಗ ಸಮಾಜಗಳಿಗೆ ವಿಶಿಷ್ಟವಾದ ವಿವಾಹ ಕಟ್ಟಳೆಗಳಿವೆ ಮತ್ತು ಅವನ್ನು ಅನ್ವಯಿಸುವಲ್ಲಿ ಅತಿ ಸಾಮಾನ್ಯವಾಗಿರುವವು. ಶಿಶುಮರಣ, ಹಲೆಉಳಿಯುವುದು, ಬಾಲ್ಯವಿವಾಹ ಪ್ರಾಣಿಜಗತ್ತಿನಲ್ಲಿ ಅಸಾಧ್ಯವಾದ ಸಂಗತಿಗಳು. ವಿವಾಹವು ಪವಿತ್ರವೆಂದು ಬಗೆದ ಸಮಾಜದಲ್ಲಿ ಇವೇ ಸಂಗತಿಗಳು ಶಾಪರೂಪವಾಗಿ ಪರಿಣಮಿಸಿರುವವು. ನಾವು ತಿಳಿದುಕೊಂಡ ನೀತಿಮತ್ತೆಯ ಕಟ್ಟಳೆಗಳಿಂದ ಕೊನೆಯಿಲ್ಲದ ಅನಿಷ್ಟ ಪರಿಣಾಮಗಳುಂಟಾಗಿರುವವು. ಹಿಂದೂ ವಿಧವೆಯರ ದೀನ ಪರಿಸ್ಥಿತಿಗೆ ಸದ್ಯದ ವಿವಾಹ ಕಟ್ಟಳೆಗಳಲ್ಲದೇ ಮತ್ತೇನು? ಹಾಗಾದರೆ ಹಿಂದಿನ ಕಾಡುಸ್ಥಿತಿಗೆ ಇಳಿದು ಪಶುಗಳೋಪಾದಿಯಲ್ಲೇಕೆ ನಡೆಯಬಾರದು?"

ಪಶ್ಚಿಮದಲ್ಲಿಯ ಸ್ವಚ್ಛಂದಪ್ರೇಮದ ಪುರಸ್ಕರ್ತರು ಈ ಮೇಲೆ ನಿರೂಪಿಸಿದ ಸಂಕ್ಷಿಪ್ತ ವಿವರಣೆಯಂತಹ ಪ್ರತಿಪಾದನೆಯನ್ನು ಮುಂದೆ ಮಾಡುವರೋ ಇಲ್ಲವೇ ಇದಕ್ಕೆ ಬಲವಾದ ಕಾರಣವನ್ನೇನಾದರೂ ಮುಂದೆ ಮಾಡುವರೋ ನನಗೆ ತಿಳಿಯದು. ಆದರೆ ವೈವಾಹಿಕ ಬಂಧನವನ್ನು ಕಾಡು ಸಂಪ್ರದಾಯವೆಂದು ಬಗೆಯುವುದು ನಿರ್ದಿಷ್ಟವಾಗಿ ಪಾಶ್ಚಿಮಾತ್ಯ ಪದ್ಧತಿಯೇ ಆಗಿರುವುದು.

ಮನುಷ್ಯ ಹಾಗೂ ಪಶುವಿನ ನಡುವೆ ಹೋಲಿಕೆ ಕಲ್ಪಿಸುವುದು ತಪ್ಪಾಗಿರುವುದು. ಈ ಹೋಲಿಕೆಯೇ ಇಡೀ ವಾದವನ್ನು ಭ್ರಷ್ಟಗೊಳಿಸುವುದು. ನೈತಿಕ ಸ್ವಭಾವಗುಣ ಹಾಗೂ ನಿಯಮಗಳಲ್ಲಿ ಮನುಷ್ಯನು ಪಶುವಿಗಿಂತ ಮೇಲ್ಮಟ್ಟದವನಾಗಿರುವನು. ಪರಸ್ಪರರಿಗೆ ಅನ್ವಯಿಸುವ ನೈಸರ್ಗಿಕ ನಿಯಮಗಳು ಭಿನ್ನವಾಗಿರುವವು. ಮನುಷ್ಯನಲ್ಲಿ ಕಲ್ಪಿತ ಬುದ್ಧಿ, ತಿಳಿವಳಿಕೆ

ಹಾಗೂ ಸ್ವಚ್ಛಂದವಾದ ಮನಸ್ಸು ಇರುವುದನ್ನು ಕಾಣುತ್ತೇವೆ. ಪಶುವಿನಲ್ಲಿ ಇಂತಹದಾವುದೂ ಇರುವುದಿಲ್ಲ. ಅದು ಏನನ್ನು ತಾನೇ ಕೈಕೊಳ್ಳುವಷ್ಟು ತಿಳುವಳಿಕೆಯನ್ನು ಪಡೆದಿಲ್ಲ. ಸದ್ಗುಣ-ದುರ್ಗುಣ, ಒಳಿತು, ಕೆಡಕುಗಳು ಅದಕ್ಕೆ ಗೊತ್ತಿರುವುದಿಲ್ಲ. ಮನುಷ್ಯನು ಸ್ವತಂತ್ರವಾಗಿ ವರ್ತಿಸಬಲ್ಲ ತಿಳುವಳಿಕೆ ಪಡೆದಿದ್ದು ಈ ಎಲ್ಲ ಭೇದಭಾವಗಳನ್ನು ಅರಿತಿರುವನು. ಅವನು ತನ್ನ ಉಚ್ಚಸ್ವಭಾವವನ್ನು ಅನುಸರಿಸುವಾಗ ಪಶುವಿಗಿಂತ ಅತಿ ಶ್ರೇಷ್ಠನಾಗಿ ತೋರುವನು. ಆದರೆ ತನ್ನ ಕೀಳು ಸ್ವಭಾವಕ್ಕನುಸರಿಸಿ ನಡೆದರೆ ಪಶುವಿಗಿಂತ ಕೀಳಾಗಿ ವರ್ತಿಸಬಲ್ಲನು. ಅತ್ಯಂತ ಅನಾಗರಿಕ ಜನಾಂಗಗಳೂ ಸಹ ಲೈಂಗಿಕ ಸಂಬಂಧಗಳ ಮೇಲೆ ಕೆಲಮಟ್ಟಿಗೆ ನಿರ್ಬಂಧವನ್ನು ಹೇರಿರುವವು. ಈ ನಿರ್ಬಂಧವೇ ಪಾಶವೀಯೆಂದು ಹೇಳಿದರೆ ಎಲ್ಲ ನಿರ್ಬಂಧಗಳನ್ನು ತೆಗೆದುಹಾಕಿ ಸ್ವಚ್ಛಂದ ಪ್ರವೃತ್ತಿಯೇ ಮಾನವನ ಕಟ್ಟಳೆಯಾಗಬೇಕು. ಎಲ್ಲ ಮಾನವರೂ ಈ ಅರಾಜಕ ಕಟ್ಟಳೆಯನ್ನು ಪಾಲಿಸಬೇಕೆಂದಾದರೆ ಇಪ್ಪತ್ನಾಲ್ಕು ಗಂಟೆಗಳಲ್ಲಿ ಸಂಪೂರ್ಣ ದುಃಸ್ಥಿತಿಯುಂಟಾಗುವಲ್ಲಿ ಸಂದೇಹವಿಲ್ಲ. ಮಾನವನು ಸ್ವಭಾವತಃ ಪಶುವಿಗಿಂತ ಹೆಚ್ಚು ಲಾಲಸೆಯವನಾಗಿದ್ದು ಅದರ ಮೇಲಿನ ನಿರ್ಬಂಧವನ್ನು ಹಿಂತೆಗೆದುಕೊಂಡ ಕ್ಷಣವೇ ಲಾಲಸೆಯು ಲಾವಾರಸದಂತೆ ಜಗತ್ತನ್ನೆಲ್ಲಾ ವ್ಯಾಪಿಸಿ ಮಾನವಕುಲವನ್ನು ನಾಶಗೊಳಿಸುವುದು. ಆತ್ಮನಿಗ್ರಹ ಹಾಗೂ ತ್ಯಾಗಗಳು ಪಶುವಿಗೆ ಅಸಾಧ್ಯವಿದ್ದು ಈ ದೃಷ್ಟಿಯಿಂದ ಮಾನವನು ಪಶುವಿಗಿಂತ ಶ್ರೇಷ್ಠನಿರುವನು.

ಇಂದು ಅತಿ ಸಾಮಾನ್ಯವಾಗಿರುವ ಕೆಲ ರೋಗರುಜಿನಗಳು ವೈವಾಹಿಕ ಕಟ್ಟಳೆಗಳನ್ನು ಉಲ್ಲಂಘಿಸಿದ್ದರ ಪರಿಣಾಮ. ವೈವಾಹಿಕ ಕಟ್ಟಳೆಯ ಸಂಯಮವನ್ನು ಬಿಗಿಯಾಗಿ ಪಾಲಿಸಿ ಈ ರೋಗರುಜಿನಗಳಿಗೆ ಬಲಿಯಾದ ಉದಾಹರಣೆಯನ್ನು ನನಗೆ ತೋರಿಸಬೇಕೆಂದು ನಾನು ಕೇಳಿಕೊಳ್ಳುವೆ. ಶಿಶುಮರಣ, ಬಾಲ್ಯವಿವಾಹ ಮೊದಲಾದವು ಸಹ ವೈವಾಹಿಕ ಕಟ್ಟಳೆಯನ್ನು ಉಲ್ಲಂಘಿಸಿದ್ದರ ಪರಿಣಾಮಗಳಾಗಿವೆ. ಸ್ತ್ರೀ-ಪುರುಷರು ವಯಸ್ಸಿಗೆ ಬಂದಾಗಲೇ ತಮ್ಮ ಸಂಗಾತಿಯನ್ನಾರಿಸಿಕೊಳ್ಳಬೇಕೆಂದು ಈ ಕಟ್ಟಳೆಯಲ್ಲಿರುವದು. ಈ ಕಟ್ಟಳೆಯು ಆರೋಗ್ಯಕರವೂ, ಸಂಯಮಶೀಲವೂ, ಸಂತತಿಯ ಇಚ್ಛೆಯುಳ್ಳದ್ದೂ ಆಗಿರುವದು. ಈ ಕಟ್ಟಳೆಯನ್ನು ಬಿಗಿಯಾಗಿ ಪಾಲಿಸುವವರು, ವೈವಾಹಿಕ ಬಂಧನವನ್ನು ಪವಿತ್ರವೆಂದು ಭಾವಿಸಿದವರು

ಅಸಂತೋಷಿಗಳಾಗಲು, ಸಂಕಷ್ಟಕ್ಕೊಳಗಾಗಲು ಕಾರಣವೇ ಇಲ್ಲ. ವಿವಾಹವು ಪವಿತ್ರವಾಗಿದ್ದಲ್ಲಿ ಸಂಯೋಗವು ದೈಹಿಕವಾಗಿರದೇ ಅಭೇದ್ಯವಾದ ಆತ್ಮಿಕಸಂಯೋಗವಾಗಿರುವುದು. ಉಭಯತರಲ್ಲಿ ಯಾರೊಬ್ಬರ ಸಾವಿನಿಂದಲೂ ಅದು ವಿಸರ್ಜನೆ ಹೊಂದುವುದಿಲ್ಲ. ಆತ್ಮಗಳ ನಿಜವಾದ ಸಂಯೋಗವಿರುವಲ್ಲಿ ವಿಧವೆ ಹಾಗೂ ವಿಧುರರ ಮದುವೆಯ ಬಗೆಗೆ ವಿಚಾರಿಸಬಾರದು. ಅಯೋಗ್ಯವೂ ತಪ್ಪಾದುದೂ ಆಗಿದೆ. ವಿವಾಹದ ನಿಜವಾದ ಕಟ್ಟಳೆಯನ್ನು ಆಲಕ್ಷಿಸಿದಲ್ಲಿ ವಿವಾಹಕ್ಕೆ ಆ ಹೆಸರಿನಿಂದ ಕರೆಯುವುದು ಸಹಿತ ಸರಿಯೆನಿಸದು. ಈಗ ನಿಜವಾದ ವಿವಾಹಗಳು ಕೆಲವೇ ನಡೆಯುತ್ತಿದ್ದಲ್ಲಿ ವಿವಾಹ ಸಮಸ್ಯೆಯನ್ನು ನಾವು ದೂಷಿಸಲಾಗದು. ಸದ್ಯದ ಪದ್ಧತಿಯನ್ನು ನಾವು ಸುಧಾರಿಸಬೇಕು ಅಷ್ಟೇ.

ಈ ಸುದ್ದಿಗಾರನು ವಿವಾಹವು ನೈತಿಕ ಇಲ್ಲವೇ ಧಾರ್ಮಿಕ ಬಂಧನವಾಗಿರದೆ ರೂಢಿಯಾಗಿದೆಯೆಂದು ಪ್ರತಿಪಾದಿಸುತ್ತಿರುವನು. ಧರ್ಮ ಹಾಗೂ ನೀತಿಗೆ ಇದು ವಿರೋಧವಾದುದರಿಂದ ಅದನ್ನು ರದ್ದುಪಡಿಸಬೇಕೆಂದು ಅವನ ವಾದ. ವಿವಾಹವು ಧರ್ಮವನ್ನು ರಕ್ಷಿಸುವ ಬೇಲಿಯೆಂದು ನಾನು ಹೇಳುತ್ತೇನೆ. ಬೇಲಿಯನ್ನು ನಾಶಪಡಿಸಿದರೆ ಧರ್ಮವು ನುಚ್ಚುನೂರಾಗುವುದು. ಧರ್ಮದ ಅಸ್ತಿಭಾರವೇ ಸಂಯಮವಾಗಿರುವುದು. ವಿವಾಹವು ಸಂಯಮವಲ್ಲದೇ ಬೇರೇನೂ ಅಲ್ಲ. ಸಂಯಮ ಗೊತ್ತಿಲ್ಲದವನಿಗೆ ಆತ್ಮಾನುಭಾವದ ಆಸೆಯಿಲ್ಲ. ನಾಸ್ತಿಕನಿಗೆ ಹಾಗೂ ಭೌತಿಕವಾದಿಗೆ ಸಂಯಮದ ಅವಶ್ಯಕತೆಯನ್ನು ಸಿದ್ಧಪಡಿಸುವುದು ಕಠಿಣವಾಗಬಹುದೆಂದು ನಾನು ಒಪ್ಪುತ್ತೇನೆ. ಅಧ್ಯಾತ್ಮದ ಅವಿನಾಶಿ ಸ್ವರೂಪದಿಂದ ನಾಶವಾಗಬಲ್ಲ ಭೌತಿಕ ಸ್ವರೂಪ ಅರಿತವನು ಸ್ವಯಂ ಶಿಸ್ತು ಹಾಗೂ ಆತ್ಮಾನುಭವ ಅಸಾಧ್ಯವೆಂದು ಸ್ವಭಾವತಃ ಅರಿತಿರುವನು. ದೇಹವು ಲಾಲಸೆ ಆಟದ ಬೈಲೂ ಆಗಬಹುದು; ಆತ್ಮಾನುಭವದ ದೇವಾಲಯವೂ ಆಗಬಹುದು. ಅದು ಆತ್ಮಾನುಭವದ ದೇವಾಲಯವಾಗಿದ್ದರೆ ಅಲ್ಲಿ ಕಾಮುಕತೆಗೆ ಸ್ವೇಚ್ಛಾಚಾರಕ್ಕೆ ಅವಕಾಶವಿಲ್ಲ. ಆಧ್ಯಾತ್ಮಿಕ ಅಗತ್ಯಗಳು ಪ್ರತಿಕ್ಷಣಕ್ಕೂ ಭೌತಿಕ ಅಗತ್ಯಗಳನ್ನು ನಿಗ್ರಹಿಸಬೇಕು.

ವಿವಾಹ ಬಂಧನವು ಸಡಿಲಾಗಿದ್ದಾಗ, ಸಂಯಮದ ಕಟ್ಟಳೆಯನ್ನು ಪಾಲಿಸದಿರುವಾಗ ಸ್ತ್ರೀ ಜಗಳದ ಮೂಲವೆನಿಸುವಳು. ಪುರುಷರು ಪಶುಗಳಂತೆ ನಿರ್ಬಂಧ ಮೀರಿ ವರ್ತಿಸಿದರೆ ಸರಳವಾಗಿ ವಿನಾಶದ ಹಾದಿ

ಹಿಡಿಯುವರು. ಈ ಸುದ್ದಿಗಾರನು ಮುಂದೆ ಮಾಡಿದ ದೂರುಗಳನ್ನು, ವಿವಾಹವನ್ನು ರದ್ದುಪಡಿಸದೇ ವಿವಾಹದ ಕಟ್ಟಳೆಯನ್ನು ಸರಿಯಾಗಿ ಅರಿತುಕೊಂಡು ಪಾಲಿಸುವುದರಿಂದ ನಿವಾರಿಸಬಹುದೆಂದು ನನ್ನ ದೃಢವಾದ ಅಭಿಪ್ರಾಯವಾಗಿರುವುದು.

ಕೆಲ ಸಮಾಜಗಳಲ್ಲಿ ಅತಿ ಸಮೀಪದ ಆಪ್ತರಲ್ಲಿ ವಿವಾಹಕ್ಕೆ ಆಸ್ಪದವಿದ್ದರೆ ಇತರ ಸಮಾಜಗಳಲ್ಲಿ ಅದನ್ನು ಪ್ರತಿಬಂಧಿಸಲಾಗುತ್ತದೆಯೆಂಬುದನ್ನು ನಾನು ಒಪ್ಪುವೆ. ಅದೇ ರೀತಿ ಕೆಲ ಸಮಾಜಗಳು ಬಹುಪತ್ನಿತ್ವವನ್ನು ನಿಷೇಧಿಸಿದರೆ ಕೆಲವು ಆಸ್ಪದ ಕೊಟ್ಟಿರುವವು. ಎಲ್ಲ ಸಮಾಜಗಳೂ ಒಂದೇ ನೈತಿಕ ಕಟ್ಟಳೆಯನ್ನು ಅಂಗೀಕರಿಸಬೇಕೆಂದು ಇಚ್ಛಿಸುವುದು ಸ್ವಾಭಾವಿಕ. ಆದರೆ ಈ ವೈವಿಧ್ಯದಿಂದಾಗಿ ಎಲ್ಲ ರೀತಿಯ ಸಂಯಮವನ್ನು ತೆಗೆದುಹಾಕಬೇಕೆಂಬುದು ತರವಲ್ಲ. ನಾವು ಅನುಭವದಿಂದ ಜಾಣರಾದಂತೆ ನಮ್ಮ ನೀತಿಮತ್ತೆಯಲ್ಲಿ ಏಕತೆಯನ್ನು ಸಾಧಿಸಿದಿದ್ದೆವು. ಇಂದಿಗೂ ಸಹ ಜಗತ್ತಿನ ನೈತಿಕ ಭಾವನೆಯು ಏಕಪತ್ನಿತ್ವವು ಅತಿ ಉಚ್ಚ ಆದರ್ಶವೆನ್ನುತ್ತಿದ್ದು ಯಾವ ಧರ್ಮವೂ ಬಹುಪತ್ನಿತ್ವವನ್ನು ಕಡ್ಡಾಯದ್ದನ್ನಾಗಿ ಮಾಡಿಲ್ಲ. ಆಯಾ ಕಾಲದಲ್ಲಿ ಹಾಗೂ ಸಮಯದಲ್ಲಿ ಈ ರೂಢಿಯಲ್ಲಿ ಶೈಥಿಲ್ಯವುಂಟಾದರೂ ಈ ಆದರ್ಶವು ಹಾಗೆಯೇ ಉಳಿದುಕೊಂಡು ಬಂದಿರುವುದು.

ಬಾಲವಿಧವೆಯರ ಪುನರ್ವಿವಾಹವು ಇಷ್ಟವಾದುದಾಗಿರುವುದಲ್ಲದೆ ಇಂತಹ ಹೆಣ್ಣುಮಕ್ಕಳಿರುವ ತಂದೆ ತಾಯಿಗಳ ಆದ್ಯಕರ್ತವ್ಯವಾಗಿದೆಯೆಂದು ನನಗೆನಿಸುವುದರಿಂದ ವಿಧವೆಯರ ಪುನರ್ವಿವಾಹದ ಬಗ್ಗೆ ನನ್ನ ಅಭಿಪ್ರಾಯಗಳನ್ನು ಮತ್ತೊಮ್ಮೆ ಇಲ್ಲಿ ಹೇಳಬೇಕಾದ ಅಗತ್ಯವಿರುವುದಿಲ್ಲ.

(ಯ.ಇ., 3 ಜೂನ್ 1926)

* * *

ಈಗ ಅತಿ ಪ್ರಚಲಿತವಿರುವ ಇನ್ನೊಂದು ಅಂಧಶ್ರದ್ಧೆಯ ಬಗೆಗೆ ನೀವು ಭ್ರಮನಿರಸನ ಮಾಡಿಕೊಳ್ಳಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ನಿಗ್ರಹ ಹಾಗೂ ನಿರಶನಗಳು ತಪ್ಪು ಲೈಂಗಿಕ ಹಸಿವನ್ನು ಸ್ವಚ್ಛಂದವಾಗಿ ತೃಪ್ತಿಗೊಳಿಸುವುದು ಹಾಗೂ ಸ್ವಚ್ಛಂದ ಪ್ರೇಮಗಳೇ ಅತ್ಯಂತ ಸ್ವಾಭಾವಿಕವಾದುವುಗಳೆಂದು ಹೇಳಲಾಗುತ್ತಿದೆ. ಇಂತಹ ಘಾತುಕ ಅಂಧಶ್ರದ್ಧೆ ಮತ್ತೊಂದಾವುದೂ

ಇರಲಾರದು. ನೀವು ಆದರ್ಶವನ್ನು ಸಾಧಿಸಲು ಅಸಮರ್ಥರಿರಬಹುದು; ನೀವು ದುರ್ಬಲರಿರಬಹುದು; ಆದರೆ ಅದಕ್ಕಾಗಿ ಆದರ್ಶವನ್ನು ಕೆಳಗಿಳಿಸಬೇಡಿರಿ; ಅಧರ್ಮವನ್ನು ನಿಮ್ಮ ಧರ್ಮವನ್ನಾಗಿ ಮಾಡಿಕೊಳ್ಳಬೇಡಿರಿ. ನಿಮ್ಮ ದುರ್ಬಲವಾದ ಸಮಯದಲ್ಲಿ ನಾನು ಹೇಳಿದ್ದನ್ನು ನೆನಪಿಗೆ ತಂದುಕೊಳ್ಳಿರಿ. ಈ ಪವಿತ್ರ ಪ್ರಸಂಗ (ವಿವಾಹ ಸಮಾರಂಭ)ದ ಸ್ಮರಣೆಯು ನಿಮ್ಮನ್ನು ಸಾವಧಾನಗೊಳಿಸಿ ಸಂಯಮಿಗಳಾಗಿ ಮಾಡುವುದು. ವಿಷಯಲಾಲಸೆಯ ಬಗೆಗೆ ಗಾಂಭೀರ್ಯದಿಂದ ವರ್ತಿಸುವುದು ಮತ್ತು ನಿಗ್ರಹವನ್ನು ಪಾಲಿಸುವುದೇ ವಿವಾಹದ ಪರಮೋದ್ಧೇಶವಾಗಿರುವುದು. ಸಂತಾನದ ಉದ್ದೇಶವಲ್ಲದೇ ಬೇರಾವದೇ ಉದ್ದೇಶಕ್ಕೆ ವಿವಾಹದಲ್ಲಿ ಆಸ್ಪದವಿಲ್ಲ.

(ಹ., 24 ಏಪ್ರಿಲ್ 1937)

* * *

ವಿವಾಹದ ಉದ್ದೇಶ ಹಾಗೂ ಅತಿ ಹೆಚ್ಚಿನ ಉಪಯೋಗವು ಪಾಶವೀ ಲಾಲಸೆಯ ತೃಪ್ತಿಯೆಂದು ಅದರ ಪರಿಣಾಮದ ಬಗೆಗೆ ವಿಚಾರಿಸದೇ ಕಲ್ಪಿಸಿದಾಗ ವಿವಾಹವು ತನ್ನ ಪಾವಿತ್ರ್ಯವನ್ನು ಕಳೆದುಕೊಳ್ಳುವುದು.

(ಹ., 28 ಮಾರ್ಚ್ 1936)

* * *

ಪಾಶವೀಲಾಲಸೆಯ ಭೋಗವನ್ನು ಆಧರಿಸಿದ ಪ್ರೇಮವು ಸ್ವಾರ್ಥದ ವ್ಯವಹಾರವಾಗಿದ್ದು ಸ್ವಲ್ಪ ಹೆಚ್ಚು ಕಡಿಮೆಯಾದರೂ ಅದು ಮುರಿದುಬೀಳುವುದು. ಕೆಳಗಿನ ಪ್ರಾಣಿಗಳಲ್ಲಿ ಸಂಸ್ಕಾರವೆಂದು ಎಣಿಸಲ್ಪಡದಿರುವ ಲೈಂಗಿಕವೃತ್ತಿಯು ಮಾನವರಲ್ಲೇಕೆ ಸಂಸ್ಕಾರವೆಂದು ಎಣಿಸಲ್ಪಡುವುದು? ಮಾನವಜಾತಿಯ ವೃದ್ಧಿಗಾಗಿ ನಾವು ಅಸಹಾಯರಾಗಿ ಪ್ರಜೋತ್ಪತ್ತಿಯ ಸಾಮಾನ್ಯ ಪ್ರವೃತ್ತಿಗೊಳಗಾಗಿ ಲೈಂಗಿಕ ಪ್ರವೃತ್ತಿಯಲ್ಲಿ ತೊಡಗಿರುವರಾಗಿ ನಿಜಸ್ಥಿತಿಯನ್ನೇಕೆ ತಿಳಿಯಬಾರದು. ತಾನು ಜನಿಸಿದ ಉದಾರ ಉದ್ಧೇಶಗಳನ್ನು ಈಡೇರಿಸಲು ಆತ್ಮತ್ಯಾಗದ ವಿಶೇಷ ಹಕ್ಕನ್ನು ನಿಯಮಿತವಾಗಿ ಉಪಯೋಗಿಸುವ ದೇಣಿಗೆ ಇತರ ಪ್ರಾಣಿಗಳಿಗಿಂತ ಮಾನವನಿಗೇ ದೊರೆತಿರುವುದು. ಪ್ರಜೋತ್ಪತ್ತಿಯಲ್ಲಿಯೇ ಪ್ರೀತಿಯ ಹೆಚ್ಚಳಕ್ಕಾಗಿಯೂ ಲೈಂಗಿಕ ಪ್ರವೃತ್ತಿಯು ಅವಶ್ಯವೂ ಇಷ್ಟವೂ ಆಗಿದೆಯೆಂದು

ರೂಢಿಬಲದಿಂದ ಮಾನವನು ವಿಚಾರಿಸುತ್ತಾನೆ. ಆದರೆ ಅದರಿಂದ ಪ್ರೀತಿಯ ಹೆಚ್ಚಳವಾಗುವುದಿಲ್ಲವೆಂದೂ ಪ್ರೀತಿಯನ್ನು ಕಾಯ್ದುಕೊಳ್ಳಲು, ಬೆಳೆಸಲು ಯಾವ ರೀತಿಯಿಂದಲೂ ಅವಶ್ಯವಿಲ್ಲವೆಂದು ನಮಗೆ ಅಸಂಖ್ಯ ಅನುಭವಗಳಿಂದ ಕಂಡುಬಂದಿದೆ. ನಿಗ್ರಹದಿಂದಲೇ ಪ್ರೀತಿಯು ವರ್ಧಿಸಿದ ಅನೇಕ ಉದಾಹರಣೆಗಳನ್ನು ಕೊಡಬಹುದು. ನಿಗ್ರಹವು ಪರಸ್ಪರ ಪ್ರಗತಿಗೆ ಕೈಕೊಳ್ಳಬೇಕಾದ ಸ್ವಯಂಪ್ರೇರಿತ ಕೃತಿಯೆಂಬುದರಲ್ಲಿ ಸಂದೇಹವಿಲ್ಲ.

ಮಾನವ ಸಮಾಜ ಕೊನೆಯಿಲ್ಲದ ಬೆಳವಣಿಗೆಯುಳ್ಳದ್ದಾಗಿದ್ದು ಆಧ್ಯಾತ್ಮಿಕ ವಿಕಾಸವನ್ನು ಪಡೆಯುವಂತಹದಾಗಿದೆ. ಹಾಗಾದರೆ ಶರೀರದ ಹೆಚ್ಚುತ್ತಿರುವ ಬೇಡಿಕೆಗಳನ್ನು ಹೆಚ್ಚೆಚ್ಚಾಗಿ ನಿಗ್ರಹಿಸುವುದನ್ನು ಅದು ಆಧರಿಸಿರಬೇಕು. ಹೀಗೆ ವಿವಾಹವು ಪುಣ್ಯಸಂಸ್ಕಾರವೆಂದು ತಿಳಿಯಲ್ಪಟ್ಟಿರುವದು. ಸಂಗಾತಿಗಳು ಕೇವಲ ಪ್ರಜೋತ್ಪಾದನೆಗಾಗಿ ಉಭಯತರೂ ಇಷ್ಟಪಟ್ಟಾಗ ಹಾಗೂ ಅದಕ್ಕೆ ಸಿದ್ಧವಿದ್ದಾಗ ಮಾತ್ರ ಸಂಭೋಗಿಸಬೇಕೆಂದು ಕಟ್ಟುನಿಟ್ಟುಹಾಕಿರುವ ಶಿಸ್ತಿನ ಜೀವನದ ಸಂಸ್ಕಾರವೆನಿಸಿರುವುದು.

ಪ್ರತಿಯೊಬ್ಬ ಗಂಡ ಹೆಂಡಿರು ರಾತ್ರಿ ಕಾಲದಲ್ಲಿ ಒಂದೇ ಕೋಣೆಯಲ್ಲಿ ಒಂದೇ ಹಾಸಿಗೆಯಲ್ಲಿ ಪಾಲುಗೊಳ್ಳುವುದಿಲ್ಲವೆಂದೂ, ಲೈಂಗಿಕ ಸಂಪರ್ಕವನ್ನು ತೊರೆಯುವರಾಗಿಯೂ, ಕೇವಲ ಪ್ರಜೋತ್ಪತ್ತಿಗಾಗಿ ಮಾತ್ರ ಲೈಂಗಿಕಪ್ರವೃತ್ತಿಯನ್ನು ಉಪಯೋಗಿಸುವುದಾಗಿಯೂ ಅಚಲವಾದ ನಿರ್ಧಾರವನ್ನು ಮಾಡಬೇಕು. ಪಶುಗಳು ಈ ನಿಯಮವನ್ನು ಸಂತತವಾಗಿ ಪಾಲಿಸುತ್ತಿರುವವು. ಮಾನವನು ಆಯ್ಕೆಮಾಡಬೇಕಾದ ಅವಕಾಶ ಪಡೆದುದರಿಂದ ತಾಳಲಾರದೇ ತಪ್ಪು ಆಯ್ಕೆಯನ್ನು ಮಾಡಿರುವನು. ಗರ್ಭನಿರೋಧಗಳು ತನಗೆ ಬೇಡವೆಂದು ಪ್ರತಿಯೊಬ್ಬ ಮಹಿಳೆಯೂ ನಿರಾಕರಿಸಬಹುದು. ಲೈಂಗಿಕ ಹಸಿವನ್ನು ತೃಪ್ತಿಗೊಳಿಸದೇ ಇರುವುದರಿಂದ ರೋಗ ರುಜಿನಗಳುಂಟಾಗದೇ ಆರೋಗ್ಯ–ಶಕ್ತಿ ದೊರೆಯುವುದೆಂದು ಪ್ರತಿಯೊಬ್ಬ ಸ್ತ್ರೀ–ಪುರುಷರು ತಿಳಿದುಕೊಳ್ಳಬೇಕು. ಆದರೆ ದೇಹ ಮನಸ್ಸುಗಳೆರಡೂ ಸಹಕರಿಸಬೇಕು.

(ದಿ ಗುಡ್ ಲೈಫ್)

* * *

ಮನೆಯ ಶಾಂತಿ ಅತ್ಯಂತ ಇಷ್ಟವಾದ ಸಂಗತಿಯಾಗಿರುವುದು. ಆದರೆ ಅದೇ ಎಲ್ಲವೂ ಆಗಲಾರದು. ವೈವಾಹಿಕ ಸ್ಥಿತಿಯು ಇತರ ಯಾವುದೇ ಸ್ಥಿತಿಗಳಂತೆ ಶಿಸ್ತಿನ ಸ್ಥಿತಿಯಾಗಿರುವುದೆಂದು ನನ್ನ ಭಾವನೆ. ಜೀವನವು ಒಂದು ಕರ್ತವ್ಯ–ಉಮೇದುವಾರಿಕೆಯಾಗಿರುವುದು. ಇಲ್ಲಿಯೂ–ಅಲ್ಲಿಯೂ ಪರಸ್ಪರ ಹಿತವರ್ಧನೆಯೇ ವೈವಾಹಿಕ ಜೀವನದ ಉದ್ದೇಶವಾಗಿರುವುದು. ಅದು ಮಾನವೀಯತೆಯನ್ನು ಸೇವಿಸಬೇಕಾಗಿದೆ. ಓರ್ವ ಸಂಗಾತಿ ಶಿಸ್ತಿನ ಕಟ್ಟಳೆ ಮುರಿದರೆ ಈ ಬಂಧನವನ್ನು ಮುರಿಯುವ ಹಕ್ಕು ಇನ್ನೊಬ್ಬ ಸಂಗಾತಿಗೂ ಪ್ರಾಪ್ತವಾಗುವುದು. ಇಲ್ಲಿ ಈ ಭಂಗವು ನೈತಿಕವಾಗಿರುವುದಲ್ಲದೇ ದೈಹಿಕವಾಗಿಲ್ಲ. ಅದು ವಿವಾಹವಿಚ್ಛೇದನದ ಪೂರ್ವಸೂಚಿಯಾಗಿರುವುದು. ಗಂಡಹೆಂಡಿರು ತಾವು ಯಾವ ಉದ್ದೇಶ ಈಡೇರಿಸಲು ಒಂದುಗೂಡಿದ್ದರೋ ಅದನ್ನೇ ಮುಂದುವರಿಸಲು ಬೇರೆಯಾಗುವರು. ಹಿಂದೂ ಧರ್ಮದಲ್ಲಿ ಇಬ್ಬರೂ ಸಮಾನರೆಂದು ಗಣಿಸಲಾಗಿರುವುದು. ಆದರೆ ಭಿನ್ನವಾದ ಪದ್ಧತಿ ಬೆಳೆದುಬಂದಿದೆ. ಎಂದಿನಿಂದ ಎಂಬುದು ಯಾರಿಗೂ ಗೊತ್ತಿಲ್ಲ. ಅದೇ ರೀತಿ ಇತರ ಅನೇಕ ಅನಿಷ್ಟಗಳು ನುಸುಳಿಕೊಂಡು ಬಂದಿವೆ. ತಾವು ಯಾವುದಕ್ಕಾಗಿ ಜನ್ಮಿಸಿರುವರೋ ಆ ಆತ್ಮಾನುಭವವನ್ನು ಸಾಧಿಸಲು ಪ್ರತಿಯೊಬ್ಬ ಸ್ತ್ರೀಪುರುಷರಿಗೂ ಸಂಪೂರ್ಣ ಸ್ವಾತಂತ್ರ್ಯವನ್ನು ಹಿಂದೂ ಧರ್ಮವು ದಯಪಾಲಿಸಿದೆಯೆಂಬುದು ಮಾತ್ರ ನನಗೆ ಗೊತ್ತಿರುವುದಿಲ್ಲ.

(ಯ.ಇ., 21 ಅಕ್ಟೋಬರ್ 1926)

ಗರ್ಭ ನಿರೋಧಕಗಳನ್ನು ಉಪಯೋಗಿಸುವವರು ಆತ್ಮ ನಿಗ್ರಹದ ಸದ್ಗುಣವನ್ನೆಂದಿಗೂ ಕಲಿಯಲಾರರು. ಅವರಿಗೆ ಅದರ ಅಗತ್ಯವೂ ಅನಿಸಲಿಕ್ಕಿಲ್ಲ. ಗರ್ಭನಿರೋಧಕಗಳ ಸಹಾಯದಿಂದ ಭೋಗದಲ್ಲಿ ತೊಡಗುವುದರಿಂದ ಪ್ರಜೋತ್ಪತ್ತಿಯನ್ನೇನೊ ತಡೆಯಬಹುದು. ಆದರೆ ಸ್ತ್ರೀಪುರುಷರಿಬ್ಬರ, ಸ್ತ್ರೀಗಿಂತ ಹೆಚ್ಚಾಗಿ ಪುರುಷನ ಸತ್ವವನ್ನು ಅದು ಹೀರುವುದು. ಭೂತದೊಂದಿಗೆ ಕದನವಾಡಲು ನಿರಾಕರಿಸುವುದು ಅಪೌರುಷೇಯೆನಿಸುವುದು.

(ಯ.ಇ., 16 ಸೆಪ್ಟೆಂಬರ್ 1926)

* * *

ಗರ್ಭ ನಿರೋಧಕಗಳ ಉಪಯೋಗವು ವಿಸ್ಕಿಗಿಂತ ಹೆಚ್ಚು ಪ್ರಲೋಭಕವಾಗಿರುವುದು. ವಿಸ್ಕಿ ಘಾತುಕ ಪ್ರಲೋಭನೆಯೆನಿಸಿ ಕಟ್ಟಳೆಗೆ ವಿರೋಧಿಯಾಗಿರುವಂತೆ ಇದಾದರೂ ಕಟ್ಟಳೆಗೆ ವಿರೋಧಿಯಾದುದೇ. ಇವೆರಡರ ಉಪಯೋಗ ಹೆಚ್ಚಾಗುತ್ತಿದೆಯೆಂದು ನಾವು ನಿರಾಶರಾಗಿ ಇವುಗಳಿಗೆ ವಿರೋಧವನ್ನು ಬಿಟ್ಟುಕೊಡುವಂತಿಲ್ಲ. ವಿರೋಧಿಗಳಿಗೆ ತಮ್ಮ ಕಾರ್ಯದಲ್ಲಿ ವಿಶ್ವಾಸವಿದ್ದರೆ ಅದನ್ನು ಮುಂದುವರಿಸಬೇಕು. ಮರುಭೂಮಿಯಲ್ಲಿಯ ಧ್ವನಿ ಅತ್ಯಂತ ಶಕ್ತಿಯುತವಾಗಿರುವುದು. ಹುಚ್ಚು ಜನಸಮ್ಮರ್ದದ ಮಧ್ಯದಲ್ಲಿ ಮಾತನಾಡುವಾಗಿನ ಧ್ವನಿಗೆ ಅದೇ ಶಕ್ತಿಯಿರುವದಿಲ್ಲ. ಮರುಭೂಮಿಯಲ್ಲಿ ಧ್ವನಿಗೆ ತಪಸ್ಸು, ಚಿಂತನೆ ಹಾಗೂ ತಣಿಯದ ಶ್ರದ್ಧೆ ಇವುಗಳ ಹಿನ್ನೆಲೆಯಿರುವುದು. ಆದರೆ ರಗಳೆಯ ಧ್ವನಿಗೆ ಆತ್ಮಸುಖದ ಅನುಭವದ ಹಿನ್ನೆಲೆ ಮಾತ್ರ ಇರುವುದು. ಇಲ್ಲವೇ ಬೇಡಾದ ಮಕ್ಕಳು ಹಾಗೂ ಅವರ ಸಂಕಷ್ಟದಲ್ಲಿರುವ ತಾಯಂದಿರ ಬಗೆಗೆ ಸುಳ್ಳು ಭಾವನಾತ್ಮಕ ದಯೆಯ ಛಾಯೆಯನ್ನು ಕಾಣಬಹುದು. ವೈಯಕ್ತಿಕ ಅನುಭವದ ಪ್ರತಿಪಾದನೆಯು ಕುಡುಕುನ ಕೃತಿಯಷ್ಟೇ ಪ್ರಭಾವ ಬೀರಬಲ್ಲುದಾಗಿದೆ. ದಯಾರ್ದ್ರತೆಯ ವಾದವು ಬಲೆಯಂತಿದ್ದು ಅದರಲ್ಲಿ ಬೀಳುವುದು ಗಂಡಾಂತರವಾಗಿರುವುದು. ಬೇಡಾದ ಮಕ್ಕಳು ಹಾಗೂ ಮಾತೃತ್ವವು ನಿಸರ್ಗವು ಯೋಜಿಸಿದ ದಂಡನ ಅಥವಾ ಎಚ್ಚರಿಕೆಯೆನ್ನಬೇಕು. ಶಿಸ್ತಿನ ಹಾಗೂ ನಿಗ್ರಹದ ಕಟ್ಟಳೆಯನ್ನು ಮೀರುವುದು ಆತ್ಮಘಾತುಕವಾಗಿರುವುದು. ನಮ್ಮದು ಉಮೇದುವಾರಿಕೆಯ ದೇಶವಾಗಿರುವುದು. ನಾವು ಶಿಸ್ತಿನ ನೊಗವನ್ನು ಹೊತ್ತುಕೊಳ್ಳಲು ನಿರಾಕರಿಸಿದರೆ ಹೇಡಿಗಳಂತೆ ನಾವು ಸೋಲನ್ನು ಅಪ್ಪಿಕೊಳ್ಳಬೇಕಾಗುವುದು. ನಾವು ಕಾಳಗವನ್ನೇ ಕೈಬಿಟ್ಟು ಜೀವಿಸುವ ಸಂತೋಷವನ್ನೇ ಬಿಟ್ಟುಕೊಟ್ಟಂತಾಗುವುದು.

(ಹ., 27 ಮಾರ್ಚ್ 1937)

ನಾನು ನನ್ನ ಪತ್ನಿಯನ್ನು ಕಾಮುಕದೃಷ್ಟಿಯಿಂದ ನೋಡುತ್ತಿರುವವರೆಗೆ ನಮ್ಮಲ್ಲಿ ನಿಜವಾದ ತಿಳಿವಳಿಕೆ ಇದ್ದಿರಲಿಲ್ಲವೆಂದು ನನ್ನ ಅನುಭವದಿಂದ ನಾನು ಅರಿತಿದ್ದೇನೆ. ನಮ್ಮ ಪ್ರೀತಿಯು ಮೇಲ್ಮಟ್ಟವನ್ನು ಮುಟ್ಟಲಿಲ್ಲ. ನಮ್ಮಲ್ಲಿ ಯಾವಾಗಲೂ ಕಕ್ಕುಲತೆ ಇದ್ದೇ ಇತ್ತು. ಆದರೆ ನಾವು ವಿಶೇಷವಾಗಿ ನಾವು ಸಂಯಮಿಯಾದಂತೆ ನಾವು ಸಮಿಸಮೀಪಕ್ಕೆ ಬರತೊಡಗಿದೆವು. ನನ್ನ ಪತ್ನಿ

ಸಂಯಮಿಯಾಗಿರಬೇಕೆಂದು ನಾನು ಪ್ರತ್ಯೇಕವಾಗಿ ಅವಳಿಗೆ ಹೇಳಬೇಕಾದ ಅವಶ್ಯಕತೆಯೇ ಇರಲಿಲ್ಲ. ಅವಳು ಆಗಾಗ ಸಂಯಮವನ್ನು ತೋರುತ್ತಲೇ ಇದ್ದಳು. ಆಗಾಗ ನಿರಾಕರಣವನ್ನು ತೋರುತ್ತಿದ್ದರೂ ನನ್ನನ್ನು ವಿರೋಧಿಸಿದ್ದು ಅಪರೂಪ. ನಾನು ಅವಳಿಂದ ಸುಖೋಪಯೋಗ ಪಡೆಯುತ್ತಿರುವವರೆಗೆ ಅವಳನ್ನು ಸೇವಿಸಲಾರದವನಾಗಿದ್ದೆ. ನಾನು ಸುಖೋಪಭೋಗದ ಜೀವನಕ್ಕೆ ಶರಣು ಹೊಡೆದ ಕ್ಷಣವೇ ನಮ್ಮ ಇಡೀ ಸಂಬಂಧವು ಆಧ್ಯಾತ್ಮಿಕವಾಯಿತು. ಕಾಮವು ನಶಿಸಿಹೋಗಿ ಪ್ರೇಮವು ಅದರ ಸ್ಥಾನದಲ್ಲಿ ಉದಯಿಸಿತು.

(ಯ.ಇ., ಜನವರಿ 1931)

* * *

ನಮ್ಮ ಈ ಅತಿ ಉಪವಾಸದ ಹಾಗೂ ನೂರಕ್ಕೆ 8ರಷ್ಟು ಜನರು ಕೂಡ ಪೌಷ್ಟಿಕ ಆಹಾರ ಪಡೆದಿರುವ ದೇಶದಲ್ಲಿ ಆಭರಣಗಳನ್ನು ಧರಿಸುವುದು ಒಂದು ಅಪರಾಧವೇ ಆಗಿರುವುದು.

(ಹ., 22 ಡಿಸೆಂಬರ್ 1933)

* * *

ಸ್ತ್ರೀಯ ನಿಜವಾದ ಆಭರಣ ಅವಳ ಚಾರಿತ್ರ್ಯ ಶುದ್ಧಿಯೇ ಆಗಿರುವುದು. ಕಲ್ಲು ಮತ್ತು ಲೋಹಗಳು ನಿಜವಾದ ಆಭರಣಗಳಾಗಲಾರವು. ಸೀತಾದಮಯಂತಿಯರು ತಮ್ಮ ಅಚಲವಾದ ಸದ್ಗುಣಗಳಿಂದ ಇಂದು ಹೆಸರು ಪಡೆದಿರುವರಲ್ಲದೇ ಅವರು ಧರಿಸಿದ್ದಿರಬಹುದಾದ ಯಾವದೇ ಆಭರಣಗಳಿಂದಲ್ಲ.

(ಯ.ಇ., 19 ಜೂನ್ 1934)

* * *

ಜಗತ್ತಿನ ವ್ಯವಹಾರದಲ್ಲಿ ನೀವು ನಿಮ್ಮ ಪಾತ್ರವನ್ನು ಸರಿಯಾಗಿ ನಿರ್ವಹಿಸ ಬೇಕಾದರೆ ಮನುಷ್ಯನನ್ನು ಸಂತೋಷಗೊಳಿಸುವ ಹವ್ಯಾಸಕ್ಕಿಳಿಯಬಾರದು. ನಾನು ಸ್ತ್ರೀಯಾಗಿ ಜನ್ಮತಾಳಿದರೆ ಹೆಣ್ಣು ತನ್ನ ಆಟಿಗೆಯ ವಸ್ತುವೆಂದು ಭಾವಿಸಿದ ಗಂಡಿನ ವಿರುದ್ಧ ಬಂಡೇಳುತ್ತಿದ್ದೆ.

(ಯ.ಇ., 20 ಅಕ್ಟೋಬರ್ 1927)

ಭಾರತದಲ್ಲಿ ಸ್ವರಾಜ್ಯ ಸ್ಥಾಪಿಸಬೇಕೆಂದು ನೀವು ಬಯಸುತ್ತಿದ್ದರೆ (ಸ್ವರಾಜ್ಯವೆಂದರೆ ರಾಮರಾಜ್ಯವೆಂದು ತಿಳಿಯಬೇಕು) ನೀವು ದೇಹ ಮನಸ್ಸುಗಳೆರಡರಲ್ಲೂ ಸೀತಾದೇವಿಯಂತೆ ಶುದ್ಧಿಯನ್ನು ಸಾಧಿಸುವ ಮೊದಲ ಕ್ರಮವೆಂದು ನೀವು ಶುದ್ಧವಾದ ಕೈಯಿಂದ ಸಿದ್ಧವಾದ ಖಾದಿಯನ್ನು ಈ ಹಿಂದೆ ಸೀತಾದೇವಿ ನಾರುಮಡಿ ಧರಿಸಿದಂತೆ ಉಡಬೇಕು. ಸಾಮಾಜಿಕ ಅನಿಷ್ಟಗಳಲ್ಲಿ ನೀವು ಹಾಗೂ ನಿಮ್ಮ ಮಕ್ಕಳು ತೊಡಗದಂತೆ ನೋಡಿಕೊಳ್ಳಬೇಕು. ಅದು ನಿಮ್ಮ ಕರ್ತವ್ಯವಾಗಿದೆ.

(ಯ.ಇ., 21 ಫೆಬ್ರವರಿ 1929)

* * *

ಹಳೆಯ ಚಟಗಳನ್ನು ತೊರೆಯುವಲ್ಲಿ ವಿಜಯ ಪಡೆದು ತನ್ನಲ್ಲಿರುವ ಅನಿಷ್ಟಗಳನ್ನು ನೀಗಿ ಒಳಿತನ್ನು ಯೋಗ್ಯ ಸ್ಥಾನದಲ್ಲಿರಿಸುವುದೇ ಮಾನವನ ನಿರ್ದಿಷ್ಟ ಉದ್ದೇಶವಾಗಿರುವುದು. ಆದರೆ ಕ್ಷಣಮಾತ್ರದಲ್ಲಿ ನಮ್ಮ ಜೀವನಕಾಲದ ಚಟಗಳನ್ನು ನಾವು ನಿವಾರಿಸಲು ಸಾಧ್ಯವಿಲ್ಲ.

(ಯ.ಇ., 20 ಡಿಸೆಂಬರ್ 1928)

* * *

ತನ್ನ ಗೌರವವನ್ನು ಕಾಯ್ದುಕೊಳ್ಳಲು ವಿಶೇಷತಃ ಧಾರ್ಮಿಕ ಗೌರವವನ್ನು ಕಾಪಾಡಿಕೊಳ್ಳಲು ಎಂತಹ ಬೆಲೆಯನ್ನು ತೆತ್ತರೂ ಕಡಿಮೆಯೆಂದೇ ಹೇಳಬೇಕು. ಸಾಯಲು ಬಲ್ಲವರು ತನ್ನ ಗೌರವಚ್ಯುತಿಯ ಬಗೆಗೆ ಎಂದಿಗೂ ಭೀತಿಯನ್ನು ಪಡಬಾರದು.

(ಯ.ಇ., 15 ಡಿಸೆಂಬರ್ 1921)

* * *

ಮಾನವ ಸ್ವಭಾವವು ಅವಶ್ಯಕವಾಗಿ ಅನಿಷ್ಟವಾಗಿರುವದಿಲ್ಲ. ಪಾಶವೀ ಸ್ವಭಾವವು ಪ್ರೇಮದ ಪ್ರಭಾವಕ್ಕೊಳಗಾಗುವದೆಂಬುದು ಎಲ್ಲರಿಗೂ ಗೊತ್ತಿದೆ. ಮಾನವಸ್ವಭಾವದ ಬಗೆಗೆ ನೀವೆಂದೂ ಆಸೆಯನ್ನು ಬಿಡಬಾರದು.

(ಯ.ಇ., 5 ನವೆಂಬರ್ 1938)

* * *

ಆದರ್ಶಗಳು ವ್ಯಾವಹಾರಿಕವಾಗಿರಬೇಕು. ಇಲ್ಲವಾದರೆ ಅವೆಂದೂ ಶಕ್ತಿಯುತವಾಗಲಾರವು.

(ಯ.ಇ., 27 ಜನೇವರಿ 1921)

ಮನಸ್ಸಿನ ಶುದ್ಧಿ ಹಾಗೂ ಆಲಸ್ಯಗಳೆಂದೂ ಹೊಂದಿಕೊಂಡು ನಡೆಯಲಾರವು.

(ಹ., 22 ಅಕ್ಟೋಬರ್ 1938)

* * *

ಇತರರಿಗೆ ನ್ಯಾಯ ಬಗೆಯುವುದರಿಂದ ನಮಗೆ ಬೇಗನೆ ನ್ಯಾಯ ದೊರೆಯುವುದೆಂದು ನನ್ನ ಅನುಭವವಾಗಿರುವುದು.

(ಟೀಚಿಂಗ್ಸ್ ಆಫ್ ಮಹಾತ್ಮ ಗಾಂಧಿ)

* * *

ಜೀವನವನ್ನು ಅನುಭೋಗಿಸಲು ಜೀವನದಲ್ಲಿಯ ಆಮಿಷಗಳನ್ನೆಲ್ಲ ತೊರೆಯಬೇಕು.

(ಹ., 1 ಮಾರ್ಚ್ 1939)

* * *

ಪ್ರೀತಿಯಿದ್ದಲ್ಲಿ ದೇವರೂ ಇರುವನು. ಪ್ರೀತಿಯು ನಿವಾರಿಸದ ಬಂಧನವಿಲ್ಲ. ಸಂಕಷ್ಟವೊಂದೇ ಪ್ರೀತಿಯು ನೀಡುವ ದಂಡನೆಯಾಗಿದೆ. ಪ್ರೀತಿಯ ಒರೆಗಲ್ಲು ತಪಸ್ಸು, ತಪಸ್ಸೆಂದರೆ ಆತ್ಮಸಂಕಷ್ಟ. ಶಕ್ತಿಯು ಹೆಚ್ಚು ಸಮರ್ಥವಾಗಿದ್ದಷ್ಟು ಶಾಂತವೂ ಸೂಕ್ಷ್ಮವೂ ಆಗಿರುವುದು. ಪ್ರೀತಿಯಷ್ಟು ಸೂಕ್ಷ್ಮ ಸಂವೇದಿಯಾದ ಶಕ್ತಿ ಜಗತ್ತಿನಲ್ಲಿಯೇ ಬೇರೊಂದಿಲ್ಲ.

(ಯ.ಇ., 16 ಫೆಬ್ರವರಿ 1922)

* * *

ಮಾನವನು ತನ್ನ ದೈನಿಕ ಬೇಕುಗಳನ್ನು ದ್ವಿಗುಣಗೊಳಿಸಿದ ಕೂಡಲೇ ಉಚ್ಚವಿಚಾರ ಮತ್ತು ಸಾದಾ ಜೀವನದ ಆದರ್ಶ ಸಾಧನೆಯಿಂದ ಕೆಳಗುರುಳುವನು. ಇತಿಹಾಸದಲ್ಲಿ ಇದಕ್ಕೆ ಸಾಕಷ್ಟು ನಿದರ್ಶನಗಳಿವೆ. ಸಂತುಷ್ಟಿಯಲ್ಲಿಯೇ ಮಾನವನ ನಿಜವಾದ ಸುಖವು ಅಡಗಿರುವುದು.

(ಟೀಚಿಂಗ್ಸ್ ಆಫ್ ಮಹಾತ್ಮ ಗಾಂಧಿ)

* * *

ಅಸಂತುಷ್ಟನು ತನ್ನಲ್ಲಿ ಬೇಕಾದಷ್ಟಿದ್ದರೂ ತನ್ನ ಇಚ್ಛೆಗಳ ದಾಸನಾಗುವನು. ಮನುಷ್ಯನು ತನ್ನ ಸ್ನೇಹಿತನು ತಾನೇ ಆಗಿರುವಂತೆ ಪರಮ ಶತ್ರುವೂ ಆಗಬಲ್ಲನೆಂದೂ ನಮ್ಮ ಋಷಿಗಳು ಹೇಳಿರುವರು. ಸ್ವತಂತ್ರನಾಗಿರುವುದು ಇಲ್ಲವೇ ದಾಸನಾಗಿರುವುದು ಅವನ ಕೈಯಲ್ಲಿಯೇ ಇರುವುದು.

(ಟೀಚಿಂಗ್ಸ್ ಆಫ್ ಮಹಾತ್ಮ ಗಾಂಧಿ)

ಮಾನವ ಜೀವನದ ಗುರಿಯು ಮೋಕ್ಷವಾಗಿರುವುದು. ದೈಹಿಕ ಬಂಧನವನ್ನು ಹರಿದೊಗೆದು ಜನನದಿಂದ ಮುಕ್ತನಾಗಿ ದೇವನಲ್ಲಿ ತಾದಾತ್ಮ್ಯನಾಗುವದೇ ಮೋಕ್ಷವೆಂದು ನಾನು ಭಾವಿಸುತ್ತೇನೆ. ವಿವಾಹವು ದೈಹಿಕ ಬಂಧನವನ್ನು ಬಿಗಿಪಡಿಸಿ ಈ ಮಹಾಗುರಿಯ ಸಾಧನೆಯಲ್ಲಿ ಕಾಲ್ತೊಡಕಾಗಿ ಪರಿಣಮಿಸುತ್ತದೆ. ಬ್ರಹ್ಮಚರ್ಯದಿಂದ ಇಡೀ ಜೀವನವನ್ನು ದೇವನಿಗೆ ಅರ್ಪಿಸಲು ಸಾಧ್ಯವಿರುವುದರಿಂದ ಈ ಗುರಿಯನ್ನು ಸಾಧಿಸುವಲ್ಲಿ ಬ್ರಹ್ಮಚರ್ಯವು ವಿಶೇಷ ಪ್ರಯೋಜನಕಾರಿಯಾಗಿರುವುದು.

(ಯ.ಇ., 20 ನವೆಂಬರ್ 1924)

* * *

ಅಶುದ್ಧ ವಿಚಾರಗಳಿಂದ ಮುಕ್ತಿ ಪಡೆಯುವುದೇ ಮೋಕ್ಷವಾಗಿದೆ. ಅವಿರತ ತಪಸ್ಸುಮಾಡದೇ ಅಶುದ್ಧ ವಿಚಾರಗಳನ್ನು ಸಂಪೂರ್ಣವಾಗಿ ತೊಡೆದುಹಾಕುವುದು ಕಠಿಣವಿರುವುದು. ಇದನ್ನು ಸಾಧಿಸಲು ಒಂದೇ ಒಂದು ಮಾರ್ಗವಿರುವುದು. ಅಶುದ್ಧ ವಿಚಾರ ಮೂಡಿದೊಡನೆ ಶುದ್ಧವಿಚಾರಗಳನ್ನು ಅದಕ್ಕೆ ತಾಕಲಾಡಲು ಬಿಡಬೇಕು. ದೇವರ ದಯೆಯಿಂದಲೇ ಇದು ಸಾಧ್ಯ. ದೇವರಲ್ಲಿ ಸಂಪೂರ್ಣ ಲೀನನಾಗುವುದು ಹಾಗೂ ಅವನಿಗೆ ಅನನ್ಯವಾಗಿ ಶರಣುಹೋಗುವುದರಿಂದಲೇ ದೇವರ ದಯೆ ದೊರಕುವುದು. ದೇವರಲ್ಲಿ ತಾದಾತ್ಮ್ಯ ಹೊಂದುವ ಮೊದಲ ಕ್ರಮವೆಂದರೆ ಅವಿಚಾರಗಳು ತಲೆದೋರುತ್ತಿದ್ದರೂ ಅವನ ನಾಮವನ್ನು ಜಪಿಸುವುದಾಗಿದೆ. ಕೊನೆಯಲ್ಲಿ ಈ ರೀತಿ ಜಪಿಸುವುದರಿಂದಲೇ ಪರಮಾತ್ಮನು ಹೃದಯವನ್ನು ಪ್ರವೇಶಿಸುವನು. ಮನಸ್ಸಿನಲ್ಲಿ ಲಕ್ಷಿಸಬೇಕಾದರೆ ಇನ್ನೊಂದು ಸಂಗತಿಯೆಂದರೆ ಮನಸ್ಸು ಹರಿದಾಡಬಹುದು ಆದರೆ ಇಂದ್ರಿಯಗಳಿಗೆ ಹಾಗೆ ಸ್ವಾತಂತ್ರ್ಯ ಕೊಟ್ಟರೆ ಮನುಷ್ಯನ ವ್ಯವಸ್ಥೆಯು ಮುಗಿದಂತೆಯೇ. ಇಂದ್ರಿಯಗಳನ್ನು ನಿಗ್ರಹಿಸುವವನು ಅವಿಚಾರಗಳನ್ನು ಸಹ ಒಂದಿಲ್ಲೊಂದು

ದಿನ ನಿಯಂತ್ರಿಸುವನು. ಅವಿಚಾರಗಳಿಂದ ನೀವು ತಲ್ಲಣಗೊಳ್ಳಬೇಕಾಗಿಲ್ಲ. ನಾವು ಪರಿಶ್ರಮ ಸಾಮ್ರಾಜ್ಯದ ಚಕ್ರವರ್ತಿಗಳು. ಪ್ರತಿಫಲ ಸಾಮ್ರಾಜ್ಯದ ಏಕಮೇವ ಚಕ್ರವರ್ತಿಯು ದೇವರು. ಶುದ್ಧವಾದ ವಾತಾವರಣವನ್ನುಂಟು ಮಾಡಬೇಕಾದರೆ ಏನು ಮಾಡಬೇಕೆಂಬುದು ನಿಮಗೆ ಗೊತ್ತಿರುವುದು. ಮಿತ ಆಹಾರ ಸೇವನೆ, ಕೆಳದೃಷ್ಟಿ, ಸಂತದ ಬಗ್ಗೆ ಅಸಂತೃಪ್ತಿ ಇವು ಬೇಕು.

(ಹ., 22 ಫೆಬ್ರುವರಿ 1922)

* * *

ಅಹಿಂಸೆಯು ದೈಹಿಕ ಗುಣವಾಗಿರದೇ ಆತ್ಮಿಕವಾದ ಗುಣವಾಗಿರುವುದು. ಅದರ ಮೂಲಾರ್ಥವು ನಿಮಗೆ ಗೋಚರವಾದೊಡನೆ ಉಳಿದುದೆಲ್ಲವೂ ತಾನಾಗಿಯೇ ಅವಗತವಾಗುವುದು. ಅಹಿಂಸೆಯು ಆಜ್ಞೆಯಿಂದ ರೂಪುಗೊಳ್ಳತಕ್ಕ ಇಲ್ಲವೇ ಹೊರಹೊಮ್ಮುವ ವಸ್ತುವಲ್ಲ. ಅದು ವೈಯಕ್ತಿಕ ವಿಶೇಷ ಪರಿಶ್ರಮವನ್ನವಲಂಬಿಸಿದ ಆಂತರಿಕ ಬೆಳವಣಿಗೆಯಾಗಿರುವುದು.

(ಹ., 5 ನವೆಂಬರ್ 1938)

* * *

ಒಳ್ಳೆಯ ಜೀವನದ ಸಪ್ತ ಸೂತ್ರಗಳು

(1) ಎಂತಹ ಪರಿಸ್ಥಿತಿಯಲ್ಲಿಯೂ, ಎಲ್ಲ ಸಂದರ್ಭಗಳಲ್ಲಿಯೂ ಸತ್ಯವನ್ನು ಮಾತನಾಡಬೇಕು.

(2) ಸಂಪೂರ್ಣವಾಗಿ ಅಹಿಂಸೆಯನ್ನು ಆಚರಿಸಬೇಕು.

(3) ರಾಷ್ಟ್ರೀಯ ಸೇವೆ ಮಾಡಬಯಸುವವರು, ನಿಜವಾದ ಧಾರ್ಮಿಕ ಜೀವನದ ದರ್ಶನ ಪಡೆಯಬಯಸುವವರು ವಿವಾಹಿತರಿರಲಿ, ಅವಿವಾಹಿತರಿರಲಿ ಬ್ರಹ್ಮಚಾರಿಯ ಜೀವನವನ್ನು ನಡೆಸಬೇಕು.

(4) ಮನುಷ್ಯನಲ್ಲಿ ನಿಯಂತ್ರಣವಿರಬೇಕು. ನಮ್ಮ ದೈಹಿಕ ಆರೋಗ್ಯವನ್ನು ಕಾಪಾಡಿಕೊಳ್ಳಲು ಅವಶ್ಯವಿರುವಷ್ಟು ಆಹಾರವನ್ನು ಮಾತ್ರ ನಾವು ಸೇವಿಸಬೇಕು. ಅಹಿಂಸೆಯ ಕಟ್ಟಳೆಯು ಕೇವಲ ಸಸ್ಯಾಹಾರ ಸೇವಿಸಬೇಕೆಂದು ಹೇಳುವುದು. ಚಹ, ಕಾಫಿ, ತಂಬಾಕು, ಮದ್ಯ, ಮಸಾಲೆ ಪದಾರ್ಥಗಳನ್ನು ವರ್ಜಿಸಬೇಕು.

(5) ಕಳವು ಮಾಡದಿರುವ ಪ್ರತಿಜ್ಞೆ ಐದನೆಯ ನಿಯಮವಾಗಿದೆ. ಇದು ಸಾಮಾನ್ಯ ನಿಯಮವಾಗಿದೆ. ಇದು ಸಾಮಾನ್ಯ ನಿಯಮವೆಂದು ಕಂಡುಬರುತ್ತಿದ್ದರೂ ಆಸ್ತಿಯ ಬಗೆಗೆ ಕ್ರಾಂತಿಕಾರಿ ಮನೋಭಾವವನ್ನೊಳಗೊಂಡು ಇರುವುದು. ನನಗೆ ಕೂಡಲೇ ಅಗತ್ಯವಿರದ ವಸ್ತುವನ್ನು ತೆಗೆದುಕೊಂಡು ಇರಿಸಿಕೊಂಡರೆ ಅದೇ ಸಮಯದಲ್ಲಿ ಅಗತ್ಯವಿರುವ ಪರರಿಂದ ಅದನ್ನು ಕದ್ದಂತಾಗುವುದು.

(6) ಸಂಗ್ರಹಮಾಡದಿರುವ ಪ್ರತಿಜ್ಞೆ ಆರನೆಯ ನಿಯಮವಾಗಿರುವುದು. ಈ ಜೀವನದಲ್ಲಿಯ ವಸ್ತುಗಳ ಇಚ್ಛೆಯನ್ನು ಅದು ನಿವಾರಿಸುತ್ತದೆ.

(7) ಬಡತನ ಏಳನೆಯ ಪ್ರತಿಜ್ಞೆಯಾಗಿದೆ. ನಮ್ಮ ದೈಹಿಕ ಬೇಡಿಕೆಗಳಿಗೆ ಅವಶ್ಯವಿರುವಷ್ಟನ್ನು ಮಾತ್ರ ನಾವು ಇರಿಸಿಕೊಳ್ಳಬೇಕು. ಹಾಗೂ ಸದಾ ಜೀವನವನ್ನು ಸರಳಗೊಳಿಸುವ ಬಗೆಗೆ ವಿಚಾರಮಾಡಬೇಕು.

(ದಿ ಗುಡ್ ಲೈಫ್)

* * *

ಗಾಂಧೀಜಿ ಅವರ ಜೀವನ ಘಟನಾವಳಿಗಳು

ಪೋರಬಂದರದಲ್ಲಿ ಜನನ	**2.10.1869**
ಕಸ್ತೂರ್‌ಬಾರೊಂದಿಗೆ ವಿವಾಹ	**1881**
ಮೆಟ್ರಿಕ್ಯುಲೇಶನ್ ಉತ್ತೀರ್ಣರಾದದ್ದು	**1887**
ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ	**1888**
ಬ್ಯಾರಿಸ್ಟರರಾಗಿ ದಾಖಲಾತಿ	**1891**
ಮರಳಿ ಭಾರತಕ್ಕೆ	**1891**
ದಕ್ಷಿಣ ಆಫ್ರಿಕಾಕ್ಕೆ ಹಡಗಿನಲ್ಲಿ ಪ್ರಯಾಣ	**1893**
ಭಾರತ ಸಂದರ್ಶನ	**1896** ಮತ್ತು **1901**
ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದಲ್ಲಿ ಪಾಲ್ಗೊಂಡಿದ್ದು	**1901**
ಇಂಡಿಯನ್ ಒಪಿನಿಯನ್ ಪತ್ರಿಕೆಯ ಪ್ರಾರಂಭ	**1903**
ಫೀನಿಕ್ಸ್ ಆಶ್ರಮ ಸ್ಥಾಪನೆ	**1904**
ಬೋರ್ ಯುದ್ಧ ಮತ್ತು ಜೂಲು ದಂಗೆಯಲ್ಲಿ ಇಂಡಿಯನ್ ಅಂಬುಲೆನ್ಸ್ ಕೋರ್ ನೇತೃತ್ವ	**1899** ಮತ್ತು **1906**
ಬ್ರಹ್ಮಚರ್ಯ ವ್ರತ ಸ್ವೀಕಾರ	**1906**
ಇಂಗ್ಲೆಂಡಿಗೆ ಪ್ರಯಾಣ	**1906** ಮತ್ತು **1909**
ದಕ್ಷಿಣ ಆಫ್ರಿಕಾದಲ್ಲಿ ಪ್ರಥಮ ಜೈಲುವಾಸ	**1908**
ಟಾಲ್‌ಸ್ಟಾಯ್ ಆಶ್ರಮ ಸ್ಥಾಪನೆ	**1910**
ದಕ್ಷಿಣ ಆಫ್ರಿಕಾದಲ್ಲಿ ಚಾರಿತ್ರಿಕ ಸತ್ಯಾಗ್ರಹ ಆರಂಭ	**1913**
ಭಾರತಕ್ಕೆ ಆಗಮನ	**1915**

ಸಾಬರಮತಿ ಆಶ್ರಮ ಸ್ಥಾಪನೆ	1915
ಖೇಡಾದಲ್ಲಿ ಕರನಿರಾಕರಣೆ ಚಳುವಳಿ	1918
ಜಲಿಯನ್ ವಾಲಾಬಾಗ್ ಹತ್ಯಾಕಾಂಡ	1919
ಯಂಗ್ ಇಂಡಿಯಾ, ನವಜೀವನ ಪತ್ರಿಕೆಗಳ ಆರಂಭ	1919
ಅಸಹಕಾರ ಆಂದೋಲನ	1921
ಭಾರತದಲ್ಲಿ ಪ್ರಥಮ ಜೈಲುವಾಸ	1922
ಖಾದಿ ಪ್ರವಾಸ	1927
ಉಪ್ಪಿನ ಸತ್ಯಾಗ್ರಹ ಮತ್ತು ದಾಂಡೀಯಾತ್ರೆ	1930
ಯೂರೋಪು ಸಂದರ್ಶನ ಮತ್ತು ದುಂಡು ಮೇಜಿನ ಪರಿಷತ್ತು	1931
ಸೇವಾಗ್ರಾಮ ಆಶ್ರಮ ಸ್ಥಾಪನೆ	1933
ಹರಿಜನ ಯಾತ್ರೆ	1933
ಹರಿಜನ ಸಾಪ್ತಾಹಿಕ ಪ್ರಾರಂಭ	1933
ನಯೀ ತಾಲೀಂ ಶಿಕ್ಷಣ ಪದ್ಧತಿ ಪ್ರಾರಂಭ	1937
"ಭಾರತ ಬಿಟ್ಟು ತೊಲಗಿ" ಚಳುವಳಿ	1942
ಕೊನೆಯ ಬಾರಿಗೆ ಆಗಾಖಾನ್ ಅರಮನೆಯಲ್ಲಿ ಸೆರೆವಾಸ	1942–44
ಹಂತಕನ ಗುಂಡೇಟಿಗೆ ಬಲಿ	30–1–1948

ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಪ್ರಕಟಣೆಗಳು

1.	ಆರೋಗ್ಯ ರಹಸ್ಯ	10–00
2.	ಕರ್ನಾಟಕದಲ್ಲಿ ಗಾಂಧೀ	5–00
3.	ರಾಮನಾಮ	6–00
4.	ಗಾಂಧೀ ಬಳಗದ ವಿದೇಶಿಯರು	40–00
5.	ಆರೋಗ್ಯ	8–00
6.	ಪ್ರಾರ್ಥನೆ	8–00
7.	ಸತ್ಯಾಗ್ರಹ	8–00
8.	ಮಹಿಳೆಯರಿಗಾಗಿ	8–00
9.	ಪಂಚಾಯತ್ ರಾಜ್	12–00
10.	ಆದರ್ಶಗಳು	12–00
11.	ನಮ್ಮ ಗಾಂಧೀ ತಾತ	25–00
12.	ದೇವನಗರಿಯಲ್ಲಿ ಗಾಂಧೀ ಧ್ವನಿ	2–00
13.	ನಮ್ಮ ಗಾಂಧೀ ತಾತ	15–00
14.	ಹೋರಾಟ ಶ್ರೀ	40–00
15.	ಮಹಾತ್ಮ ಗಾಂಧೀಜಿಯವರ ಮೈಲಿಗಲ್ಲು	3–00
16.	ಗಾಂಧೀಜಿ ಜೀವನ ಚರಿತ್ರೆ	25–00
17.	ಕುವೆಂಪು ಕಂಡ ಗಾಂಧೀ	25–00
18.	ಉಪ್ಪಿನ ಸತ್ಯಾಗ್ರಹ	5–00
19.	ಹಿಂದ್ ಸ್ವರಾಜ್	50–00
20.	ಗಾಂಧೀ ಮತ್ತು ಆಧ್ಯಾತ್ಮಿಕ ಜೀವನ	25–00
21.	ನನ್ನ ಕನಸಿನ ಭಾರತ	30–00
22.	ಹಿಂದೂ ಧರ್ಮ	25–00
23.	ಮಹಿಳೆಯರು	30–00
24.	ಸ್ವಾತಂತ್ರ್ಯ	25–00
25.	ಅಸ್ಪೃಶ್ಯತೆ	30–00
26.	ಒಳ್ಳೆಯ ಜೀವನ	25–00
27.	ಪ್ರಾರ್ಥನೆ	25–00
28.	ಗಾಂಧೀ ಮತ್ತು ಕರ್ನಾಟಕ	200–00
29.	ಸತ್ಯ	30–00
30.	ವಿದ್ಯಾರ್ಥಿಗಳಿಗಾಗಿ	30–00
31.	ಸರ್ವೋದಯ	30–00

32.	ಖಾದಿ ಗ್ರಾಮೋದ್ಯೋಗ	30–00
33.	ನನ್ನ ಬಾಲ್ಯದ ನೆನಪುಗಳು	30–00
34.	ಗ್ರಾಮರಾಜ್ಯ ಆಡಳಿತ	5–00
35.	ನನ್ನ ಕನಸಿನ ಸ್ವರಾಜ್ಯ	5–00
36.	ಗಾಂಧೀ ಮತ್ತು ಹಾಸ್ಯ	20–00
37.	ನನ್ನ ಆದರ್ಶಗ್ರಾಮ	5–00
38.	ಮಹಾತ್ಮ ಗಾಂಧೀ ವಿಚಾರಗಳು ಹಾಗೂ ವ್ಯವಸ್ಥಾಪನ ಪದ್ದತಿ	48–00
39.	ಸತ್ಯಾಗ್ರಹಿ	40–00
40.	ಗ್ರಾಮದಾನ ಗ್ರಾಮ ಸ್ವರಾಜ್ಯ	25–00
41.	ಗಾಂಧೀಜಿಯವರ ಪ್ರಾತ: ಸಾಯಂ ಪ್ರಾರ್ಥನೆ ಮತ್ತು ಭಜನೆ	
42.	ಉಪ್ಪಿನ ಸತ್ಯಾಗ್ರಹ ಮತ್ತು ಮೈಲಾರ ಮಹಾದೇವ	5–00
43.	ಸತ್ಯಾಗ್ರಹ	5–00
44.	ಹಿಂದ್ ಸ್ವರಾಜ್	5–00
45.	ಆರೋಗ್ಯ	5–00
46.	ಮಹಾತ್ಮ ಗಾಂಧಿ ಪ್ರಸ್ತುತತೆ	10–00
47.	ಬಹುರೂಪಿ ಗಾಂಧಿ	10–00
48.	ನಂದಿ ಗಿರಿಧಾಮದಲ್ಲಿ ಮಹಾತ್ಮ ಗಾಂಧಿ	30–00
49.	ಕೃತಯುಗಿ ವಿನೋಬಾ ಭಾವೆ	15–00
50.	ಮೋಹನ ತರಂಗ	40–00
51.	ನಮ್ಮ ಗಾಂಧಿ ತಾತ	5–00
52.	ಗೀತಾ ಪ್ರವಚನ	80–00
53.	ಜೆ.ಪಿ. ಜೀವನ ಹಾದಿ	45–00
54.	ಗಣ್ಯರು ಕಂಡಂತೆ ಗಾಂಧಿ	20.0
55.	ಗೀತಾಮಾತೆ	80.00
56.	Temple & Mosque	10–00
57.	Rastrapita Mahatma Gandhi	25–00
58.	Swarajya of Dreams	5–00
59.	Gandhi My Grand Father	5–00
60.	Grand Pa Gandhi	5–00
61.	Relevance of Gandhi	20–00
62.	Vinoba age of the sage	20.00

ಕರ್ನಾಟಕದಲ್ಲಿ ಗಾಂಧೀಜಿ ಭೇಟಿ ನೀಡಿದ ಸ್ಥಳಗಳು

● ಬೆಂಗಳೂರು	ದಿ. 08-05-1915
● ಬೆಳಗಾವಿ	ದಿ. 27-04-1916 ರಿಂದ ದಿ. 01-05-1916 ರವರೆಗೆ
● ಬಿಜಾಪುರ	ದಿ. 05-05-1918 ರಿಂದ ದಿ. 06-05-1918 ರವರೆಗೆ
● ಕಾಸರಗೋಡು	ದಿ. 19-08-1920
● ಮಂಗಳೂರು	ದಿ. 20-08-1920
● ಬೆಂಗಳೂರು	ದಿ. 21-08-1920
● ನಿಪ್ಪಾಣಿ, ಚಿಕ್ಕೋಡಿ, ಹುಕ್ಕೇರಿ ಸಂಕೇಶ್ವರ, ಬೆಳಗಾವಿ	ದಿ. 08-11-1920
● ಬೆಳಗಾವಿ ಶಹಾಪುರ ಖಾನಾಪುರ, ನಂದಗಢ ಹಳ್ಯಾಳ	ದಿ. 09-11-1920
● ಧಾರವಾಡ	ದಿ. 10-11-1920
● ಹುಬ್ಬಳ್ಳಿ, ಗದಗ	ದಿ. 11-11-1920
● ಸಾಂಗಲಿ	ದಿ. 12-11-1920
● ಬಾಗಲಕೋಟೆ	ದಿ. 27-05-1921
● ಬಿಜಾಪುರ, ಸೊಲ್ಲಾಪುರ	ದಿ. 28-05-1921
● ಬಳ್ಳಾರಿ	ದಿ. 30-05-1921
● ಬೆಳಗಾವಿ	ದಿ. 21-12-1924 ರಿಂದ ದಿ. 30-12-1924 ರವರೆಗೆ
● ಗುಲ್ಬರ್ಗಾ	ದಿ. 22-02-1927
● ನಿಪ್ಪಾಣಿ	ದಿ. 28-03-1927 ರಿಂದ ದಿ. 30-12-1924 ರವರೆಗೆ

● ಬೆಳಗಾವಿ	ದಿ. 19-04-1027 ರಿಂದ ದಿ. 20-04-1927ರವರೆಗೆ
● ಬೆಂಗಳೂರು	ದಿ. 06-06-1927 ರಿಂದ ದಿ. 13-07-1927 ರವರೆಗೆ
● ತುಮಕೂರು	ದಿ. 14-07-1927
● ತುಮಕೂರು, ಮಧುಗಿರಿ	ದಿ. 15-07-1927
● ತುಮಕೂರು	ದಿ. 16-07-1927
● ಬೆಂಗಳೂರು	ದಿ. 17-07-1927
● ಬೆಂಗಳೂರು	ದಿ. 18-07-1927
● ಕೃಷ್ಣರಾಜಸಾಗರ, ಯಡತೊರೆ ಶ್ರೀರಂಗಪಟ್ಟಣ	ದಿ. 19-07-1927
● ಮೈಸೂರು	ದಿ. 22-07-1927
● ಬೆಂಗಳೂರು	ದಿ. 12-07-1927 ರಿಂದ ದಿ. 30-07-1927 ರವರೆಗೆ
● ಕ್ಲೊಸ್‌ಪೇಟೆ (ರಾಮನಗರ)	ದಿ. 31-07-1927
● ಕಾನಕನಹಳ್ಳಿ (ಕನಕಪುರ)	
● ಬೆಂಗಳೂರು	ದಿ. 01-08-1927
● ಅರಸೀಕರೆ, ಹಾಸನ	ದಿ. 02-08-1927
● ಹಾಸನ	ದಿ. 03-08-1927
● ಹಾಸನ, ಹೊಳೆನರಸೀಪುರ	ದಿ. 04-08-1927
● ಬೆಂಗಳೂರು	ದಿ. 05-08-1927 ರಿಂದ ದಿ. 11-08-1927 ರವರೆಗೆ
● ದಾವಣಗೆರೆ	ದಿ. 12-08-1927
● ಹರಿಹರ, ಹೊನ್ನಾಳಿ ಮಲೆಬೆನ್ನೂರು	ದಿ. 13-08-1927
● ಶಿವಮೊಗ್ಗ	ದಿ. 15-08-1927

● ಆಯನೂರು, ಕುಂಸಿ, ಸಾಗರ ಶಿವಮೊಗ್ಗ, ತೀರ್ಥಹಳ್ಳಿ ಮಂದಗದ್ದೆ, ರಾಜನೂರು	ದಿ. 17-08-1927
● ಶಿವಮೊಗ್ಗ	ದಿ. 15-08-1927
● ಭದ್ರಾವತಿ, ತರೀಕೆರೆ	ದಿ. 18-08-1927
● ಬೀರೂರು, ಕಡೂರು	
● ಚಿಕ್ಕಮಗಳೂರು	ದಿ. 19-08-1927
● ಬೇಲೂರು, ಹಳೇಬೀಡು	ದಿ. 20-08-1927
● ಅರಸೀಕರೆ	
● ತಿಪಟೂರು	ದಿ. 21-08-1927
● ಬೆಂಗಳೂರು	ದಿ. 22-08-1927
● ಬೆಂಗಳೂರು	ದಿ. 23-08-1927
● ಹೊಸೂರು, ಸೂಳಗಿರಿ ಕೃಷ್ಣಗಿರಿ	ದಿ. 24-08-1927
● ಬೆಂಗಳೂರು	ದಿ. 25-08-1927 ರಿಂದ ದಿ. 30-08-1927 ರವರೆಗೆ
● ಹಿಂದೂಪುರ, ವಿಧುರಾಶ್ವಥ ಗೌರಿಬಿದನೂರು ದೊಡ್ಡಬಳ್ಳಾಪುರ, ತುಮಕೂರು ತ್ಯಾಮಗೊಂಡ್ಲು, ನೆಲಮಂಗಲ ಬೆಂಗಳೂರು, ಮೈಸೂರು	ದಿ. 04-01-1934
● ತಗಡೂರು, ಬದನವಾಳ ನಂಜನಗೂಡು, ಮೈಸೂರು	ದಿ. 05-01-1934
● ಮಂಡ್ಯ, ರಾಮನಗರ ಕನಕಪುರ, ಬಿಡದಿ, ಕೆಂಗೇರಿ	ದಿ. 06-01-1934
● ಬೆಂಗಳೂರು	ದಿ. 07-01-1934 ರಿಂದ ದಿ. 09-01-1934 ರವರೆಗೆ

- ಪೊನ್ನಂಪೇಟೆ, ಹುದಿಕೇರಿ ದಿ. 22-02-1934
- ವಿರಾಜಪೇಟೆ, ಬೆಳ್ಳೂರು ದಿ. 23-02-1934
- ಸೋಮವಾರ ಪೇಟೆ
- ಗುಂಡುಕಟ್ಟೆ
- ಮಡಿಕೇರಿ, ಸಂಪಾಜೆ, ಸುಳ್ಯ ದಿ. 24-02-1934
- ಪುತ್ತೂರು, ಉಪ್ಪಿನಂಗಡಿ
- ವಿಠಲಗಬ್ಬ, ಕಲ್ಲಡ್ಕ, ಪಾಣೆ
- ಮಂಗಳೂರು, ಬಂಟ್ವಾಳ
- ಮಂಗಳೂರು
- ಮಂಗಳೂರು, ಗುರುಪುರ, ಬಜ್ಪೆ ದಿ. 25-02-1934
  ಯಳ್ಳೂರು, ಕಟೀಲು, ಕಿನ್ನಗೋಳಿ
  ಮೂಲ್ಕಿ, ಪಡುಬಿದ್ರಿ, ಕಾಟಪಾಡಿ
  ಗುರುಪುರ, ಉದಯಪುರ
  ಉಡುಪಿ, ಬ್ರಹ್ಮಾವರ, ಸಿದ್ದಾಪುರ
- ಕುಂದಾಪುರ ದಿ. 26-02-1934
- ಕುಂದಾಪುರ, ಭಟ್ಕಳ ದಿ. 27-02-1934
  ಹೊನ್ನಾವರ, ಕಾರವಾರ
- ಕಾರವಾರ, ಕುಮುಟಾ, ಅಂಕೋಲ ದಿ. 28-02-1934
  ಚಂದಿಯಾ, ಶಿರಸಿ
- ಶಿರಸಿ, ಸಿದ್ದಾಪುರ, ದಾಸನಕೊಪ್ಪ ದಿ. 01-03-1934
  ಇಸಲೂರು, ಏಕಾಂಬಿ, ಆಲೂರು
  ಬ್ಯಾಡಗಿ, ಮೋಟೆಬೆನ್ನೂರು
- ಹಾವೇರಿ, ರಾಣೆಬೆನ್ನೂರು, ಹರಿಹರ ದಿ. 02-03-1934
  ದಾವಣಗೆರೆ, ಹರಪನಹಳ್ಳಿ, ಕೊಟ್ಟೂರು
  ಕೂಡ್ಲಿಗೆ, ದುಗ್ಗಾವತಿ, ಕಣಿವೆಹಳ್ಳಿ
  ಸೊಂಡೂರು
- ಸೊಂಡೂರು, ಬಳ್ಳಾರಿ, ಹೊಸಪೇಟೆ ದಿ. 03-03-1934
  ಭಾವಾಪುರ, ಗದಗ, ಜಕ್ಕಲಿ, ಹುಬ್ಬಳ್ಳಿ

● ಹುಬ್ಬಳ್ಳಿ, ಧಾರವಾಡ, ಅಮ್ಮಿನಭಾವಿ ಹಿರೇಉಳ್ಳಗೇರಿ, ಬೈಲಹೊಂಗಲ ಉಪ್ಪಿನ, ಬೆಟಗೇರಿ, ಸೌಂದತ್ತಿ ಸಂಪಗಾಂವ್, ಹೊಸೂರು, ಬೆಳಗಾವಿ	ದಿ. 04-03-1934
● ಬೆಳಗಾವಿ	ದಿ. 05-03-1934
● ಬೆಳಗಾವಿ	ದಿ. 06-03-1934
● ಬೆಳಗಾವಿ, ಯಮಕನಮರಡಿ ಹುಕ್ಕೇರಿ, ಗೋಕಾಕ, ಸಂಕೇಶ್ವರ ನವಲೀಹಾಳ, ಚಿಕ್ಕೋಡಿ, ಅಂಕಲಿ ಶೆಡಬಾಳ, ಬನಹಟ್ಟಿ, ಅಥಣಿ ಬಿಜಾಪುರ, ತಿಕೋಟ, ತೊರವಿ ಇಳಕಲ್	ದಿ. 07-03-1934
● ನಂದಿ ಬೆಟ್ಟ	10-05-1936 ರಿಂದ 30-05-1936 ರವರೆಗೆ
● ಚಿಕ್ಕಬಳ್ಳಾಪುರ, ಚಿಂತಾಮಣಿ ಕೋಲಾರ, ಬಂಗಾರ ಪೇಟೆ, ಕೆ.ಜಿ.ಎಫ್	31-05-1936
● ಬೆಂಗಳೂರು	01-06-1936 ರಿಂದ 12-06-1936 ರವರೆಗೆ
● ಬೆಳಗಾವಿ ಜಿಲ್ಲೆಯ ಹುದಲಿ	16-04-1936 ರಿಂದ 21-04-1937ರವರೆಗೆ

ಏಕಾದಶ ವ್ರತಗಳು

ಸತ್ಯ	**Truth**
ಅಹಿಂಸೆ	**Ahimsa or Love**
ಅಸ್ತೇಯ (ಕದಿಯದಿರುವುದು)	**Non-Stealing**
ಬ್ರಹ್ಮಚರ್ಯ	**Brahmacharya or Chastity**
ಅಸಂಗ್ರಹ (ಅಪರಿಗ್ರಹ)	**Non-Possession**
ಶರೀರ ಶ್ರಮ	**Physical Labour**
ಅಸ್ವಾದ (ನಾಲಿಗೆ ಚಪಲ)	**Control on the Palate**
ಸರ್ವತ್ರ ಭಯವರ್ಜನ (ಅಭಯ)	**Fearlessness**
ಸರ್ವಧರ್ಮ ಸಮಾನತ್ವ	**Equality of Religion**
ಸ್ವದೇಶಿ	**Swadeshi**
ಸ್ಪರ್ಶ ಭಾವನೆ (ಅಸ್ಪೃಶ್ಯತಾ ನಿವಾರಣೆ)	**Removal of Untouchability**

ಏಳು ಸಾಮಾಜಿಕ ಪಾತಕಗಳು Seven Social Sins

ತತ್ವರಹಿತ ರಾಜಕಾರಣ	**Politics without Principles**
ದುಡಿಮೆ ಇಲ್ಲದ ಸಂಪತ್ತು	**Wealth without Work**
ಆತ್ಮಸಾಕ್ಷಿ ಇಲ್ಲದ ಸಂತೋಷ	**Pleasure without Conscience**
ಚಾರಿತ್ರ್ಯವಿಲ್ಲದ ಶಿಕ್ಷಣ	**Education without Character**
ನೀತಿ ಇಲ್ಲದ ವ್ಯಾಪಾರ	**Commerce without Morality**
ಮಾನವೀಯತೆ ಇಲ್ಲದ ವಿಜ್ಞಾನ	**Science without Humanity**
ತ್ಯಾಗ ಇಲ್ಲದ ಪೂಜೆ	**Worship without Sacrifice**

– ಮಹಾತ್ಮ ಗಾಂಧೀಜಿ

ಹದಿನೆಂಟು ರಚನಾತ್ಮಕ ಕಾರ್ಯಗಳು

18 CONSTRUCTIVE PROGRAMMES

ಮತೀಯ ಐಕ್ಯತೆ	**Communal Unity**
ಅಸ್ಪೃಶ್ಯತಾ ನಿವಾರಣೆ	**Removal of Untouchability**
ಪಾನನಿರೋಧ	**Prohibition**
ಖಾದಿ	**Khadi**
ಇತರೆ ಗ್ರಾಮೋದ್ಯೋಗ	**Other village industries**
ಗ್ರಾಮ ನೈರ್ಮಲ್ಯ	**Village Sanitation**
ಮೂಲ ಶಿಕ್ಷಣ	**Basic Education**
ವಯಸ್ಕರ ಶಿಕ್ಷಣ	**Adult Education**
ಮಹಿಳಾ ಸಬಲೀಕರಣ	**Women Empowerment**
ಆರೋಗ್ಯ ಮತ್ತು ಶುಚಿತ್ವ ಶಿಕ್ಷಣ	**Hygiene & Health Education**
ಪ್ರಾದೇಶಿಕ ಭಾಷೆ	**Provincial Languages**
ರಾಷ್ಟ್ರಭಾಷೆ	**National Language**
ಆರ್ಥಿಕ ಸಮಾನತೆ	**Economic Equality**
ರೈತರ ಸಬಲೀಕರಣ	**Empowerment of Farmers**
ಕಾರ್ಮಿಕರ ಸಬಲೀಕರಣ	**Empowerment of Labours**
ಆದಿವಾಸಿ ಸಬಲೀಕರಣ	**Tribal Empowerment**
ಕುಷ್ಠರೋಗ ನಿರ್ಮೂಲನೆ	**Cure of Lepracy**
ವಿದ್ಯಾರ್ಥಿ	**Students**

ಮಹಾತ್ಮ ಗಾಂಧೀಜಿ ಅವರ ಪರಿಪೂರ್ಣ ಜೀವನದ ಸಾರಸಂಗ್ರಹದಿಂದ ಒಡಮೂಡಿದ ಚಿಂತನೆಗಳಾಗಿವೆ. ಇವು ಅವರು ಹುಟ್ಟಿದಾಗಿನಿಂದ, ಜೀವನದ ವಿವಿಧ ಹಂತಗಳಲ್ಲಿ ಗ್ರಹಿಕೆ, ಕಲಿಕೆ, ಅರ್ಥೈಸುವಿಕೆ, ಸದಾ ಪ್ರಯೋಗಿಕತೆ ಮತ್ತು ಪ್ರಾತ್ಯಕ್ಷಿಕೆಯ ನಂತರದ ಫಲಿತಗಳನ್ನು ನಮ್ಮ ಮುಂದೆ ತೆರದಿಟ್ಟಂತಿದೆ.

– ಡಾ. ವೂಡೇ ಪಿ. ಕೃಷ್ಣ

ಮಹಾತ್ಮಾಜಿ ಅವರು ಮಾನವನು ತನ್ನ ಮನಸ್ಸನ್ನು ಹದಗೊಳಿಸುವುದು ಮತ್ತು ಒಳ್ಳೆಯ ವಿಚಾರಗಳನ್ನು ಮನದಲ್ಲಿ ತುಂಬಿಕೊಳ್ಳುವ ವಿಧಾನಗಳನ್ನು ಇಲ್ಲಿ ಚರ್ಚಿಸುತ್ತಾ ಸಾಗಿದ್ದಾರೆ. ಇದೊಂದು ಮನೋವೈಜ್ಞಾನಿಕ ಕೃತಿಯಾಗಿ, ಒಳ್ಳೆಯ ಜೀವನವನ್ನು ಸಾಧಿಸಿಕೊಳ್ಳುವ ಮಾರ್ಗವನ್ನು ತೋರಿಸಿಕೊಡುತ್ತಾ ಸಾಗುತ್ತದೆ.

– ಇಂದಿರಾ ಕೃಷ್ಣಪ್ಪ

ಕರ್ನಾಟಕ ಗಾಂಧೀ ಸ್ಮಾರಕ ನಿಧಿ
ಗಾಂಧೀ ಭವನ, ಕುಮಾರ ಪಾರ್ಕ್ ಪೂರ್ವ, ಬೆಂಗಳೂರು